بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


| | | | |
|---|---|---|---|
| ಸಂಪಾದಕ : ಮುಹಮ್ಮದ್ ಯೂಸುಫ್ | | | ಜೂನ್ 2016 |
| ಆರಂಭ : 1975 | ಸಂಪುಟ : 33 | ಇಹ್‌ಸಾನ್ 1395 ಹಿಜರೀ ಶಮ್ಸೀ | ಸಂಚಿಕೆ : 1–2 |


## ವ್ರತಾನುಷ್ಠಾನ

ವ್ರತಾನುಷ್ಠಾನ ಇಸ್ಲಾಮಿನ ಒಂದು ಮೌಲಿಕ ಕರ್ಮವಾಗಿದೆ. ಇಸ್ಲಾಂ ನಿರ್ದೇಶಿಸಿರುವ ಆರಾಧನಾ ಕರ್ಮಗಳಲ್ಲಿ ತಿದ್ದುಪಡಿ ಮಾಡಬೇಕೆಂದು ಮುಸ್ಲಿಂ ಎಂದು ಕರೆಯಲ್ಪಡುವ ಕೆಲವರು ಈ ಕಾಲದಲ್ಲಿ ಅಭಿಪ್ರಾಯಪಟ್ಟಿರುವರೆಂಬುದು ಖೇದಕರವಾಗಿದೆ. ಇವರು ಆಧ್ಯಾತ್ಮಿಕ ನೆಲೆಯಲ್ಲಿ ಅಂಧತೆ ಬಾಧಿಸಲ್ಪಟ್ಟವರೂ ದೇವ ಶಾಸನಗಳಲ್ಲಿ ಅಂತರ್ಲೀನವಾಗಿರುವ ತತ್ವ ರಹಸ್ಯವನ್ನು ತಿಳಿಯದವರೂ ಆಗಿದ್ದಾರೆ. ಸದರಿ ಕರ್ಮಾನುಷ್ಠಾನಗಳು ಆತ್ಮ ಸಂಸ್ಕರಣೆಗೆ ಆತ್ಯಾವಶ್ಯಕವಾಗಿವೆ. ಆಧ್ಯಾತ್ಮಿಕ ಮಾರ್ಗದಲ್ಲಿ ಹೆಜ್ಜೆ ಹಾಕದವರು ಅದಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ಯತ್ನಿಸುವುದು ವಿವೇಕಯುತವಲ್ಲ. ತಾವು ಒಮ್ಮೆಯಾದರೂ ನಡೆದು ನೋಡದ ಆಧ್ಯಾತ್ಮಿಕ ಸಾಮ್ರಾಜ್ಯದಲ್ಲಿ ಸುಧಾರಣೆಗಳನ್ನು ತರಲು ಇವರು ಕೃತ್ರಿಮ ಯೋಜನೆಗಳನ್ನು ನಿರ್ದೇಶಿಸುತ್ತಾರೆ. ಇವರು ಜೀವನ ಪೂರ್ತಿ ಲೌಕಿಕ ಕಾರ್ಯಗಳಲ್ಲಿ ಕಾಲ ಕಳೆಯುವವರೂ ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಿಸಿ ಅರಿವಿಲ್ಲದವರೂ ಆಗಿದ್ದಾರೆ. ಆಹಾರವನ್ನು ಕಡಿಮೆ ಮಾಡುವುದು, ಹಸಿವೆ ಸಹಿಸುವುದು ಆತ್ಮದ ಸಂಸ್ಕರಣೆಗೂ ಪ್ರಗತಿಗೂ ಅತ್ಯಾವಶ್ಯಕವಾದ ಕರ್ಮವಾಗಿದೆ. ಮನುಷ್ಯನು ಜೀವಿಸುವುದು ಭಕ್ಷ್ಯ ಪದಾರ್ಥಗಳಿಂದ ಮಾತ್ರವಲ್ಲ. ಈ ಜೀವಿತದ ನಂತರ ಅವನಿಗೆ ಇನ್ನೊಂದು ಜೀವಿತವಿದೆ. ಶಾಶ್ವತವಾದ ಆ ಪಾರತ್ರಿಕ ಜೀವಿತವನ್ನು ನಿರ್ಲಕ್ಷ್ಯ ಮಾಡುವುದು ದೇವನಿಂದ ಬೇರ್ಪಡುವುದನ್ನೂ ಆ ಮೂಲಕ ಅವನ ಅನಿಷ್ಠವನ್ನೂ ಸ್ವಯಂ ವರಿಸುವುದಾಗಿದೆ.

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ಥಾಪಕರು.

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಅಲ್ಲಾಹನು ಹೇಳುತ್ತಾನೆ: ಭಕ್ಷಣ ಪಾನೀಯಗಳನ್ನೂ ದೇಹೇಚ್ಛೆಯನ್ನೂ ಮನುಷ್ಯನು ನನಗೋಸ್ಕರ ತ್ಯಜಿಸುತ್ತಾನೆ. ಆದುದರಿಂದ ಉಪವಾಸ ನನಗಾಗಿದೆ. ನಾನು ಅದಕ್ಕೆ ಪ್ರತಿಫಲ ನೀಡುವೆನು. ಯಾವುದೇ ಸತ್ಕರ್ಮಕ್ಕೆ ಕಮ್ಮಿಯೆಂದರೆ ಹತ್ತು ಪಾಲು ಪ್ರತಿಫಲ ಲಭಿಸುವುದು. (ಬುಖಾರಿ, ಮುಸ್ಲಿಂ)
- 'ರಯ್ಯಾನ್' ಎಂಬ ಹೆಸರಿನ ಒಂದು ಬಾಗಿಲು ಸ್ವರ್ಗದಲ್ಲಿದೆ. ಖಿಯಾಮತ್ ದಿನದಂದು ಉಪವಾಸಿಗರು ಅದರ ಮೂಲಕ ಪ್ರವೇಶಿಸುವರು. ಅವರ ಹೊರತು ಬೇರೆ ಯಾರಿಗೂ ಅದರ ಮೂಲಕ ಪ್ರವೇಶನವಿಲ್ಲ. (ಬುಖಾರಿ, ಮುಸ್ಲಿಂ)
- ನೀವು ರಮಝಾನ್ ಚಂದ್ರೋದಯವನ್ನು ಕಂಡರೆ ಉಪವಾಸ ಅನುಷ್ಠಿಸಿರಿ. ಶವ್ವಾಲ್‌ನ ಚಂದ್ರೋದಯವನ್ನು ಕಂಡರೆ ಉಪವಾಸವನ್ನು ತ್ಯಜಿಸಿರಿ. ಮೋಡ ಕಾರಣದಿಂದ ಚಂದ್ರೋದಯವನ್ನು ಕಾಣದಿದ್ದರೆ ಶಅ್‌ಬಾನ್ ಮಾಸ 30 ದಿನಗಳನ್ನು ಪೂರ್ಣಗೊಳಿಸಿರಿ. (ಬುಖಾರಿ. ಮುಸ್ಲಿಂ)
- ಮೋಡ ಕಾರಣದಿಂದ ನಿಮಗೆ ಚಂದ್ರೋದಯ ಕಾಣಲು ಅಸಾಧ್ಯವಾದರೆ 30 ಉಪವಾಸವನ್ನು ನೀವು ಅನುಷ್ಠಿಸಿರಿ. (ಮುಸ್ಲಿಂ)
- ಯಾರಾದರೂ ಮರೆತು ತಿಂದರೆ ಅಥವಾ ಕುಡಿದರೆ, ಅವನು ಉಪವಾಸವನ್ನು ಪೂರ್ಣಗೊಳಿಸಲಿ. ನಿಶ್ಚಯವಾಗಿಯೂ ಅಲ್ಲಾಹನೇ ಅವನಿಗೆ ತಿನ್ನಿಸಿದ್ದು, ಕುಡಿಸಿದ್ದು. (ಬುಖಾರಿ ಮುಸ್ಲಿಂ)
- ಎಲ್ಲ ಮಾಸಗಳಲ್ಲೂ ಮೂರು ದಿವಸ ಉಪವಾಸ ಅನುಷ್ಠಿಸುವುದು (ಫಲದಲ್ಲಿ) ವರ್ಷವಿಡೀ ಉಪವಾಸ ಅನುಷ್ಠಿಸುವುದಕ್ಕೆ ಸಮಾನ. (ಬುಖಾರಿ, ಮುಸ್ಲಿಂ)
- ಮಾಸದಲ್ಲಿ ಮೂರು ದಿವಸ ನೀನು ಉಪವಾಸ ಅನುಷ್ಠಿಸುವಿಯಾದರೆ, ಹದಿಮೂರನೇ, ಹದಿನಾಲ್ಕನೇ ಮತ್ತು ಹದಿನೈದನೇ ದಿನಗಳಲ್ಲಿ ನೀನು ಉಪವಾಸ ಅನುಷ್ಠಿಸು. (ತಿರ್ಮಿಧೀ)
- ನೀವು ಸಹರಿ ಉಂಡು ಉಪವಾಸ ಅನುಷ್ಠಿಸಿರಿ. ಕಾರಣವೇನೆಂದರೆ ಸಹರಿಯಲ್ಲಿ ಅನುಗ್ರಹವಿದೆ. (ಬುಖಾರಿ, ಮುಸ್ಲಿಂ)
- ನಮ್ಮ ಮತ್ತು ಗ್ರಂಥ ನೀಡಲ್ಪಟ್ಟವರ ಉಪವಾಸದ ವ್ಯತ್ಯಾಸ ಸಹರಿ ಉಣ್ಣುವುದಾಗಿದೆ. (ಮುಸ್ಲಿಂ)
- ಉತ್ತುತ್ತೆಯಿಂದ ಉಪವಾಸವನ್ನು ಮುರಿಯಿರಿ. ಅದರಲ್ಲಿ ಅನುಗ್ರಹವಿದೆ. ಉತ್ತುತ್ತೆ (ಖರ್ಜೂರ) ಸಿಗದಿದ್ದರೆ ನೀರಿನಿಂದ ಉಪವಾಸ ಮುರಿಯಬೇಕು. ಅದು ಪರಿಶುದ್ಧವಾಗಿದೆ. ಯಾವನಾದರೂ ಬಡವನಿಗೆ ಸಹಾಯ ಮಾಡುವುದು ಮಾತ್ರ ಸದಖ (ದಾನಧರ್ಮ). ಆದರೆ ತನ್ನ ಸಂಬಂಧಿಕನಾದ ಬಡವನಿಗೆ ಸಹಾಯವೀಯುವುದು ಇಮ್ಮಡಿ ಪ್ರತಿಫಲದ ಕರ್ಮವಾಗಿದೆ. ಏಕೆಂದರೆ ಅದು ದಾನಧರ್ಮವೂ ಸಂಬಂಧವನ್ನೂ ಜೋಡಿಸುವುದೂ ಆಗಿದೆ. (ತಿರ್ಮಿಧೀ)


## ಯುಗರಶ್ಮಿಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ : ರೂ. 60/-   ಅಂಚೆ ಮೂಲಕ : ರೂ. 70/-**

**ಸಂಪರ್ಕಿಸಿರಿ : 99 00 410 789**

# ಜಾಗತಿಕ ಶಾಂತಿ ಮತ್ತು ಸುರಕ್ಷೆ – ನಮ್ಮ ಕಾಲದಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳಾಗಿವೆ

**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫರು 6–10–2015ರಂದು ಡಚ್ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ**



***ಇಂದಿನ ಕಾಲದ ಸಾಮಾಜಿಕ – ರಾಜಕೀಯ ಪರಿಸರದಲ್ಲಿ ಜಾಗತಿಕ ಶಾಂತಿ ಮತ್ತು ಸುರಕ್ಷೆ ನಾವು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳಾಗಿವೆ. ಹಿಂಸೆ, ಯುದ್ಧ ಮತ್ತು ತೀವ್ರವಾದಿ ಗುಂಪುಗಳು ಜಗತ್ತಿನಾದ್ಯಂತ ಉತ್ಕರ್ಷ ಹೊಂದುತ್ತಿರುವ ಕಾರಣ ಜಗತ್ತಿನ ಎಲ್ಲ ಜನರ ಸ್ವಾತಂತ್ರ್ಯವನ್ನು ರಕ್ಷಿಸುವ ತುರ್ತು ಪ್ರಯತ್ನಗಳ ಆವಶ್ಯಕತೆ ಇದೆ. ನಮಗಿರುವ ಏಕಮಾತ್ರ ಪ್ರತೀಕ್ಷೆ ಇಸ್ಲಾಮ್ ಧರ್ಮದ ಸಾರ್ವತ್ರಿಕ ಸೌಹಾರ್ದ ತತ್ವ ಪ್ರಕಾರ ಮಾನವರ ಹಕ್ಕುಗಳನ್ನು ಕಾಪಾಡುವುದರಲ್ಲಾಗಿದೆ. ಆದರೆ ಇದು ಸಾಧ್ಯವಾಗುವುದು ಹೇಗೆ?***

2015 ಅಕ್ಟೋಬರ್ ದಿನಾಂಕ 6ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಸ್ಟಾಂಡಿಂಗ್ ಕಮಿಟಿ ಫೋರ್ ಫೋರಿನ್ ಎಫ್ಫೈರ್ಸ್ ಇದರ ವಿಶೇಷ ಅಧಿವೇಶನವನ್ನು ಸಂಬೋಧಿಸಿ ನೆದರ್‌ಲ್ಯಾಂಡ್ ನೇಶನಲ್ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿದರು. ನೆದರ್‌ಲ್ಯಾಂಡಿನ ರಾಜಧಾನಿಯಾದ ದಿ ಹೇಗ್‌ನಲ್ಲಿ ನೂರಕ್ಕಿಂತ ಹೆಚ್ಚು ಗಣ್ಯ ಅತಿಥಿಗಳನ್ನು ಸಂಬೋಧಿಸಿ ಮಾಡಿದ ಭಾಷಣ ಇದಾಗಿದೆ.

ಮಿಸ್ಟರ್ ವಾನ್ ಬೊಮ್ಮೆಲ್ ಹಝ್ರತ್ ಖಲೀಫರನ್ನು ಪಾರ್ಲಿಮೆಂಟ್‌ಗೆ ಸ್ವಾಗತಿಸಿದರು ಮತ್ತು ಫೋರಿನ್ ಎಫ್ಫೈರ್ಸ್ ಸಮಿತಿಯ ಸದಸ್ಯರನ್ನು ಪರಿಚಯಿಸಿ ಕೊಟ್ಟರು. ಅನಂತರ ಅಲ್‌ಬೇನಿಯಾ, ಕ್ರೊವೇಶಿಯಾ, ಅಯರ್‌ಲೇಂಡ್, ಮೊಂಟೆನಿಗ್ರೋ, ಸ್ಪೈನ್ ಮತ್ತು ಸ್ವೀಡನ್ ದೇಶಗಳ ರಾಯಭಾರಿಗಳನ್ನೂ ಇತರ ಗಣ್ಯರನ್ನೂ ಸ್ವಾಗತಿಸಿದರು.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೀಗೆ ಹೇಳಿದರು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ). ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ಈ ದಿನದ ಕಾರ್ಯಕ್ರಮವನ್ನು ಏರ್ಪಡಿಸಿ ನನ್ನನ್ನು ಭಾಷಣ ಮಾಡಲು ಆಮಂತ್ರಿಸಿದವರಿಗೆ ನಾನು ಮೊತ್ತಮೊದಲು ಹೃತ್ಪೂರ್ವಕ ಕೃತಜ್ಞತೆ ಅರ್ಪಿಸುತ್ತೇನೆ.

ಇಂದಿನ ಕಾಲಘಟ್ಟದಲ್ಲಿ ಕೆಲವು ವಿಷಯಗಳನ್ನು ನಿರಂತರವಾಗಿ ಜನರ ಮುಂದೆ ಎತ್ತಿ ಹಿಡಿದು ಅವುಗಳು ನಮ್ಮ ಕಾಲಘಟ್ಟದ ಪ್ರಮುಖ ವಿಷಯಗಳೆಂದು ಪ್ರಸ್ತಾಪಿಸಲ್ಪಡುತ್ತವೆ. ಉದಾಹರಣೆಗೆ, ಕೆಲವು ಜನರು ಜಾಗತಿಕ ತಾಪಮಾನ ವರ್ಧನೆಯ ಅಪಾಯದ ಬಗ್ಗೆ ಮತ್ತು ಹವಾಮಾನದ ಬದಲಾವಣೆ ಬಗ್ಗೆ ಒತ್ತಿ ಹೇಳುತ್ತಾ ಇರುತ್ತಾರೆ. ಆದರೆ ಬೇರೆ ಕೆಲವರು ಲೋಕದಲ್ಲಿ ವಿವಿಧ ರೀತಿಗಳ ಸಂಘರ್ಷಗಳ ವರ್ಧನೆ ಮತ್ತು ಲೋಕದ ಚಂಚಲ ಪರಿಸ್ಥಿತಿ ಬಗ್ಗೆ ಅತ್ಯಂತ ಆತಂಕಗೊಂಡಿರುತ್ತಾರೆ. ನಾವು ಲೋಕದ ಇಂದಿನ ಸ್ಥಿತಿಯನ್ನು ಪಕ್ಷಪಾತ ರಹಿತವಾಗಿ ವಿಶ್ಲೇಷಿಸುವುದಾದರೆ ಜಾಗತಿಕ ಶಾಂತಿ ಮತ್ತು ಸುರಕ್ಷೆ ಇಂದಿನ ಕಾಲದಲ್ಲಿ ಗಂಭೀರವಾಗಿ ಚಿಂತಿಸಬೇಕಾದ ವಿಷಯವೆಂದು ಮನವರಿಕೆ ಮಾಡಿಕೊಳ್ಳುವೆವು. ದಿನಗಳೆದಂತೆ ಲೋಕವು ಹೆಚ್ಚು ಅಸ್ಥಿರವೂ ಅಪಾಯ ಭರಿತವೂ ಆಗುತ್ತಿದೆ ಮತ್ತು ಇದಕ್ಕೆ ಹಲವಾರು ಗುಪ್ತ ಕಾರಣಗಳಿವೆ. ಉದಾಹರಣೆಗೆ, ಆರ್ಥಿಕ ಮುಗ್ಗಟ್ಟು, ಆರ್ಥಿಕ ಅಸ್ಥಿರತೆ ಲೋಕದ ಅನೇಕ ಭಾಗಗಳಲ್ಲಿ ಪರಿಣಾಮ ಬೀರಿರುವುದು ಒಂದು ಮುಖ್ಯ ಕಾರಣವಾಗಿರಬಹುದು.

ಇನ್ನೊಂದು ಸಂಭಾವ್ಯ ಕಾರಣ ಕೆಲವು ಜಾಗತಿಕ ನಾಯಕರು ತಮ್ಮ ಜನರೊಂದಿಗೆ ಮತ್ತು ಅನ್ಯರೊಂದಿಗೆ ಅನ್ಯಾಯದಿಂದ ವರ್ತಿಸುವುದಾಗಿದೆ. ಮತ್ತೊಂದು ಕಾರಣ, ಕೆಲವು ಧಾರ್ಮಿಕ ನಾಯಕರು ಸಾಮೂಹಿಕ ಹಿತಾಸಕ್ತಿಗಳಿಗೆ ಎದುರಾಗಿ ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೆ ಆದ್ಯತೆ ನೀಡುವುದು ಮತ್ತು ತಮ್ಮ ಹೊಣೆಗಾರಿಕೆಗಳನ್ನು ಪ್ರಾಮಾಣಿಕತೆಯಿಂದ ಈಡೇರಿಸದಿರುವುದಾಗಿದೆ. ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಸಂಘರ್ಷಗಳಿಗೆ ಮುಖ್ಯ

ಕಾರಣವಾಗುವುದು ಶ್ರೀಮಂತ ಮತ್ತು ಬಡ ದೇಶಗಳ ಮಧ್ಯೆ ಇರುವ ಭಿನ್ನತೆಯಾಗಿದೆ.

ಶಕ್ತಿಶಾಲಿ ದೇಶಗಳು ಬಡ ದೇಶಗಳ ನೈಸರ್ಗಿಕ ಸಂಪತ್ತಿನಿಂದ ಲಾಭ ಪಡೆಯಲು ಪ್ರಯತ್ನಿಸುತ್ತಾ ಇರುತ್ತವೆ ಎಂದೂ ಆ ಬಡ ದೇಶಗಳಿಗೆ ಅವರ ಸಂಪತ್ತಿನ ಅರ್ಹ ಪಾಲು ನೀಡುವುದಿಲ್ಲ ಎಂದೂ ವೀಕ್ಷಿಸಲಾಗಿದೆ. ಆದುದರಿಂದ, ಲೋಕದಲ್ಲಿ ಶಾಂತಿಯು ಕೆಟ್ಟು ಹೋಗಲಿರುವ ಕಾರಣಗಳ ದೀರ್ಘವಾದ ಪಟ್ಟಿಯೇ ಇದೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾನು ಪ್ರಸ್ತಾಪಿಸಿದ್ದೇನೆ. ಕಾರಣಗಳು ಏನೇ ಇರಲಿ, ಲೋಕ ಶಾಂತಿ ರಹಿತವಾಗಿರುವುದು ನನ್ನ ಅಭಿಪ್ರಾಯದಲ್ಲಿ ಈ ಪೀಳಿಗೆಯ ಅತ್ಯಂತ ಅಪಾಯಕರವಾದ ಸನ್ನಿವೇಶವಾಗಿದೆ.

ನನ್ನ ಮಾತನ್ನು ಆಲಿಸಿ ನಿಮ್ಮ ಪೈಕಿ ಬಹಳ ಜನರು ಹೀಗೆ ಹೇಳಬಹುದು: ಮುಸ್ಲಿಮ್ ದೇಶಗಳಲ್ಲಿ ಹೆಚ್ಚು ಅಸ್ಥಿರತೆ ಕಾಣಿಸುತ್ತಾ ಇದೆ. ಮುಸ್ಲಿಮ್ ಲೋಕದಲ್ಲಿ ಕಾಣಿಸುತ್ತಿರುವ ಅಸ್ಥಿರತೆಯೇ ಲೋಕದಲ್ಲಿ ಶಾಂತಿ ರಾಹಿತ್ಯಕ್ಕೆ ಮೂಲ ಕಾರಣವಾಗಿದೆ.

ನಾನು ಜಗತ್ತಿನಾದ್ಯಂತ ಇರುವ ಮುಸ್ಲಿಮ್ ಜಮಾಅತ್‌ಗಳ ಪೈಕಿ, ಎಂದರೆ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ನಾಯಕ ನಾಗಿರುವುದರಿಂದ ನಾನು ಸಹ ಪ್ರಾಯಶಃ ಈ ಅಸ್ಥಿರತೆಗೆ ಸ್ವಲ್ಪ ಮಟ್ಟಿಗೆ ಹೊಣೆಯಾಗಿರಬಹುದೆಂದು ನೀವು ಯೋಚಿಸಬಹುದು. ತೀವ್ರವಾದಿ ಗುಂಪುಗಳ ಹುಟ್ಟುವಿಕೆ ಮತ್ತು ಭೀಕರ ಕೃತ್ಯಗಳು ವಾಸ್ತವಿಕವಾಗಿ ಇಸ್ಲಾಮ್ ಧರ್ಮ ತತ್ವಗಳಿಂದ ಪ್ರೇರೇಪಿಸಲ್ಪಟ್ಟಿರ ಬಹುದು ಎಂದು ಸಹ ನೀವು ನಂಬಿರಬಹುದು. ಆದರೆ ಅಶಾಂತಿ ಮತ್ತು ದ್ವೇಷವನ್ನು ಇಸ್ಲಾಮಿನೊಂದಿಗೆ ಜೋಡಿಸಿ ಹೇಳುವುದು ಅತ್ಯಂತ ಅನ್ಯಾಯಕರವಾಗಿದೆ.

ಧರ್ಮಗಳ ಚರಿತ್ರೆ ಬಗ್ಗೆ ವಿಶದವಾಗಿ ಪ್ರಸ್ತಾಪಿಸುವ ಆವಶ್ಯಕತೆ ಈಗ ಇಲ್ಲ. ಆದರೆ ನಾವು ಧರ್ಮಗಳ ಚರಿತ್ರೆಯನ್ನು ನಿಷ್ಪಕ್ಷವಾಗಿ ನೋಡುವುದಾದರೆ, ಪ್ರತಿಯೊಂದು ಧರ್ಮದ ಅನುಯಾಯಿಗಳು ಕಾಲ ದಾಟಿಹೋದಾಗ ತಮ್ಮ ಧರ್ಮದ ಮೂಲ ತತ್ವಗಳಿಂದ ದೂರ ಸರಿದು ಹೋದರು ಮತ್ತು ಈ ಕಾರಣದಿಂದ ಆಂತರಿಕ ಭಿನ್ನತೆಗಳೂ ಸಂಘರ್ಷಗಳೂ ತಲೆದೋರಿದುವು. ಜನರನ್ನು ಕೊಲ್ಲಲಾಯಿತು ಮತ್ತು ಜನರ ವಿರುದ್ಧ ಘೋರ ಕ್ರೂರಕೃತ್ಯಗಳನ್ನು ನಡೆಸಲಾಗಿತ್ತು.

ಈ ವಿಷಯವನ್ನು ದೃಷ್ಟಿಯಲ್ಲಿರಿಸಿಕೊಂಡು ನಾನು ಹೀಗೆ ಹೇಳಲು ಬಯಸುತ್ತೇನೆ: ಕಾಲ ದಾಟಿಹೋದಂತೆ ಮುಸ್ಲಿಮರು ಸಹ ಇಸ್ಲಾಮ್ ಧರ್ಮದ ಮೂಲ ತತ್ವಗಳಿಂದ ದೂರ ಸರಿದು ಹೋದರು. ಈ ಕಾರಣದಿಂದ ಆಶಾಭಂಗ ಮತ್ತು ಪ್ರತಿಸ್ಪರ್ಧೆಗಳು ತಲೆದೋರಿದುವು ಹಾಗೂ ಪಂಗಡಗಳು ಸ್ಥಾಪಿಸಲ್ಪಟ್ಟು ದೌರ್ಜನ್ಯ ಮತ್ತು ಅನ್ಯಾಯ ಪ್ರಾರಂಭವಾದುವು. ಆದರೆ ಇಸ್ಲಾಮ್ ಧರ್ಮದ ಇಂದಿನ ಹತಾಶ ಪರಿಸ್ಥಿತಿಯನ್ನು ಒಬ್ಬ ನೈಜ ಮುಸ್ಲಿಮನ ದೃಷ್ಟಿಕೋನದಿಂದ ನೋಡುವಾಗ ನನ್ನ ಧಾರ್ಮಿಕ ವಿಶ್ವಾಸ ಕುಂದಿ ಹೋಗುವುದಿಲ್ಲ.

ಇದಕ್ಕೆ ಕಾರಣವೇನೆಂದರೆ 1400 ವರ್ಷಗಳ ಹಿಂದೆ ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಹೀಗೆ ಭವಿಷ್ಯ ನುಡಿದಿದ್ದರು: ಇಸ್ಲಾಮ್ ಧರ್ಮತತ್ವಗಳು ಕ್ರಮೇಣ ಭ್ರಷ್ಟಗೊಳಿಸಲ್ಪಡುವುವು ಮತ್ತು ಮುಸ್ಲಿಮರು ನೈತಿಕವಾಗಿ ಅಧಃಪತನ ಹೊಂದುವರು. ಅವರು ಹೀಗೆಯೂ ಭವಿಷ್ಯ ನುಡಿದಿದ್ದರು: ನೈತಿಕ ಅಧಃಪತನದ ಅಂತಹ ಕಾಲಘಟ್ಟದಲ್ಲಿ ಸರ್ವಶಕ್ತನಾದ ದೇವನು ಒಬ್ಬ ಸುಧಾರಕನನ್ನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿಯಾಗಿ ಲೋಕಕ್ಕೆ ಕಳುಹಿಸಿಕೊಡುವನು. ಅವರು ಇಸ್ಲಾಮ್ ಧರ್ಮದ ಸತ್ಯವಾದ ಶಾಂತಿ ತತ್ವಗಳ ಕಡೆಗೆ ಮಾನವರಿಗೆ ಮಾರ್ಗದರ್ಶನ ನೀಡುವರು.

ಇಸ್ಲಾಮ್ ಧರ್ಮದ ಪುಣ್ಯ ಪೈಗಂಬರರು[ಸ] ಭವಿಷ್ಯ ನುಡಿದ ಹಾಗೆ ವಾಗ್ದತ್ತ ಮಸೀಹರು[ಅ] ಆಗಮಿಸಿ ಇಸ್ಲಾಮ್ ಧರ್ಮದ ಮೂಲತತ್ವಗಳನ್ನು, ಎಂದರೆ ಸಂಪೂರ್ಣ ಶಾಂತಿ ತತ್ವಗಳನ್ನು ನಮಗೆ ಕಲಿಸಿದರು. ಆದುದರಿಂದ ಅಹ್ಮದೀ ಮುಸ್ಲಿಮರಾದ ನಾವು ಇಂದು ಲೋಕದಲ್ಲಿ ತಲೆದೋರಿರುವ ಅಸ್ತವ್ಯಸ್ತಗಳನ್ನು ಸೃಷ್ಟಿಸುವವರಲ್ಲಿ ಸೇರಿಲ್ಲ ಮತ್ತು ಅವುಗಳಲ್ಲಿ ಭಾಗವಹಿಸುವುದೂ ಇಲ್ಲ. ನಾವು ಲೋಕದಲ್ಲಿ ಶಾಂತಿಯನ್ನು ಹಾರೈಸುವ ಜನರಾಗಿದ್ದೇವೆ.

ನಾವು ಲೋಕಕ್ಕೆ ರೋಗೋಪಶಮನವನ್ನು ಬಯಸುವವರಾಗಿದ್ದೇವೆ. ನಾವು ಲೋಕದ ಜನರನ್ನು ಒಗ್ಗೂಡಿಸಲು ಬಯಸುವವರಾಗಿದ್ದೇವೆ. ಎಲ್ಲ ವಿಧಗಳ ದ್ವೇಷ ಮತ್ತು ಹಗೆತನವನ್ನು ಪ್ರೀತಿ ಮತ್ತು ವಾತ್ಸಲ್ಯಕ್ಕೆ ಬದಲಾಯಿಸುವುದನ್ನು ಬಯಸುವವರು ನಾವಾಗಿದ್ದೇವೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಮಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವವರು ನಿಶ್ಚಯವಾಗಿಯೂ ನಾವಾಗಿದ್ದೇವೆ. ಒಬ್ಬ ಧಾರ್ಮಿಕ ನಾಯಕನೆಂಬ ನೆಲೆಯಲ್ಲಿ ನಾನು ಹೇಳಲು ಬಯಸುವುದೇನೆಂದರೆ, ಒಬ್ಬರಿನ್ನೊಬ್ಬರನ್ನು ದೂಷಿಸುವುದಕ್ಕೆ ಮತ್ತು ಉದ್ರೇಕಿಸುವುದಕ್ಕೆ ಬದಲಾಗಿ ನಾವು ಸ್ಥಿರವಾಗಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಬಗ್ಗೆ ನಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕಾಗಿದೆ.

ಇದರ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಅತಿ ಮುಖ್ಯವಾದ ಒಂದು ತತ್ವವನ್ನು ಉಪದೇಶಿಸಿದ್ದಾರೆ. ಅವರು ಹೀಗೆ ಹೇಳಿದರು: ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮನುಷ್ಯರು ಸರ್ವಶಕ್ತನಾದ ದೇವನ ಗುಣಗಳನ್ನು ಹೊಂದಲು ತಮ್ಮ ಕೈಲಾದಷ್ಟು ಪ್ರಯತ್ನಿಸಬೇಕಾದುದು ಆವಶ್ಯಕವಾಗಿದೆ. ಮಾನವರ ಹಿತವನ್ನು ಸ್ಥಿರವಾಗಿ ಮುಂದುವರಿಸಲು ಇದೇ ದಾರಿಯಾಗಿದೆ ಎಂದು ಅವರು ಹೇಳಿದರು. ಮಾನವರ ಸುಖ ಮತ್ತು ಸಮೃದ್ಧಿ ದೈಹಿಕವಾಗಿಯೂ ಆಧ್ಯಾತ್ಮಿಕವಾಗಿಯೂ ವರ್ಧಿಸುವುದು ದೇವಗುಣಗಳ ಪಾಲನೆಯೊಂದಿಗೆ ನಿಶ್ಚಯವಾಗಿಯೂ ಸಂಬಂಧಿಸಿದೆ. ಏಕೆಂದರೆ ಅವನ ಗುಣಗಳ ಮೂಲಕವೇ ಎಲ್ಲ ರೀತಿಗಳ ಶಾಂತಿಯು ಉದ್ಭವಿಸುತ್ತದೆ ಎಂದು ಅವರು ಹೇಳಿದರು.

ಪವಿತ್ರ ಖುರ್‌ಆನಿನ ಪ್ರಥಮ ವಚನದಲ್ಲಿಯೇ ಇದು ಪ್ರತಿಬಿಂಬಿಸುತ್ತದೆ. ಅದರಲ್ಲಿ ಹೀಗೆ ಹೇಳಲಾಗಿದೆ: ಅಲ್ಲಾಹನು ಸರ್ವಲೋಕ ಪರಿಪಾಲಕನಾಗಿದ್ದಾನೆ. ಇದರ ಅರ್ಥವೇನೆಂದರೆ, ಅಲ್ಲಾಹನು ಎಲ್ಲ ಸೃಷ್ಟಿಗಳ ಪಾಲಕ, ಪೋಷಕ ಮತ್ತು ಒಡೆಯನು. ಅವನು ಮುಸ್ಲಿಮರ ಮಾತ್ರ ಒಡೆಯನಲ್ಲ. ಅವನು ಕ್ರೈಸ್ತರ,

ಯಹೂದಿಯರ ಮತ್ತು ಹಿಂದುಗಳ ಹಾಗೂ ನಿಶ್ಚಯವಾಗಿಯೂ ಎಲ್ಲ ಜನರ, ಅವರು ಯಾವ ಧರ್ಮ ಅಥವಾ ವಿಶ್ವಾಸ ಹೊಂದಿದ್ದರೂ ಅವರೆಲ್ಲರ ಒಡೆಯನಾಗಿರುವನು.

ದೇವನಿಗೆ ತನ್ನ ಸೃಷ್ಟಿಗಳ ಬಗ್ಗೆ ಇರುವ ಪ್ರೀತಿ ಮತ್ತು ವಾತ್ಸಲ್ಯ ಅನುಪಮೇಯವೂ ಅದ್ವಿತೀಯವೂ ಆಗಿದೆ. ಅವನು ದಯಾವಂತನೂ ಕಾರುಣ್ಯನಿಧಿಯೂ ಆಗಿದ್ದಾನೆ. ಅವನು ಶಾಂತಿಯ ಉಗಮ ಸ್ಥಾನವಾಗಿದ್ದಾನೆ. ಆದುದರಿಂದ ಇಸ್ಲಾಮ್ ಧರ್ಮ ಮುಸ್ಲಿಮನೊಂದಿಗೆ ಸರ್ವಶಕ್ತನಾದ ದೇವನ ಗುಣಗಳನ್ನು ಹೊಂದಬೇಕೆಂದು ಆದೇಶಿಸುವಾಗ ಒಬ್ಬ ನೈಜ ಮುಸ್ಲಿಮನಿಗೆ, ಅನ್ಯರಿಗೆ ಹಾನಿಯನ್ನುಂಟುಮಾಡುವುದು ಅಸಾಧ್ಯವಾಗುತ್ತದೆ. ನೈಜ ಮುಸ್ಲಿಮನ ಧಾರ್ಮಿಕ ವಿಶ್ವಾಸ, ಅವನನ್ನು ಎಲ್ಲ ಮನುಷ್ಯರನ್ನು ಪ್ರೀತಿಸಲು ಮತ್ತು ಪ್ರತಿಯೊಬ್ಬನೊಂದಿಗೆ ಗೌರವ, ಕರುಣೆ ಮತ್ತು ಸಹಾನುಭೂತಿಯಿಂದ ವರ್ತಿಸಲು ನಿರ್ಬಂಧಿಸುತ್ತದೆ.

ಪದೇ ಪದೇ ಹೀಗೆ ಪ್ರಶ್ನಿಸಲಾಗುತ್ತಿದೆ: ಇಸ್ಲಾಮ್ ಶಾಂತಿಯ ಧರ್ಮವಾಗಿದ್ದರೆ ಪವಿತ್ರ ಖುರ್‌ಆನ್ ಯುದ್ಧ ಮಾಡಲು ಅನುಮತಿಯನ್ನು ಏಕೆ ನೀಡಿದೆ? ಆದರೆ ಈ ಅನುಮತಿ ನೀಡಿದುದನ್ನೂ ಅದು ನೀಡಿದ ಸಂದರ್ಭವನ್ನೂ ಪರಿಗಣಿಸಿ ನೋಡಬೇಕು. ಮುಖ್ಯ ವಿಷಯ ದೀರ್ಘಕಾಲ ಬಾಕಿಯಾಗಿ ಉಳಿಯಬೇಕಾದ ಶಾಂತಿ ಸ್ಥಾಪನೆಯಾಗಿರುತ್ತದೆ. ಆದುದರಿಂದ ಕೆಲವು ಸಂದರ್ಭಗಳಲ್ಲಿ ಶಿಕ್ಷೆ ನೀಡುವುದು ಮತ್ತು ಮುನ್ನೆಚ್ಚರಿಕೆ ನೀಡುವುದು ದೀರ್ಘಕಾಲ ಶಾಂತಿ ಸ್ಥಾಪಿತವಾಗಿರಲು ಆವಶ್ಯಕವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಯುದ್ಧ ಮಾಡಲು ಅನುಮತಿ ನೀಡಿದುದು ಶಾಂತಿಯನ್ನು ಪುನಃ ಸ್ಥಾಪಿಸಲು ಮತ್ತು ಪ್ರತಿರೋಧಾತ್ಮಕವಾಗಿ ಮಾತ್ರವಾಗಿತ್ತು. ಆದುದರಿಂದ ಕೆಲವು ಗುಂಪುಗಳು ಮತ್ತು ವ್ಯಕ್ತಿಗಳು ಹಿಂಸಾಚಾರ ಮತ್ತು ಕ್ರೌರ್ಯದೊಂದಿಗೆ ಪವಿತ್ರ ಖುರ್‌ಆನನ್ನು ಮತ್ತು ಇಸ್ಲಾಮಿನ ಪಾವನ ಪೈಗಂಬರರನ್ನು(ಸ) ಜೊತೆ ಸೇರಿಸಲು ಪ್ರಯತ್ನಿಸುವುದು ಅತ್ಯಂತ ಅನ್ಯಾಯ ಭರಿತ ವರ್ತನೆ ಯಾಗಿದೆ. ನಾವು ಪವಿತ್ರ ಖುರ್‌ಆನನ್ನು ಮತ್ತು ಪವಿತ್ರ ಪೈಗಂಬರರ(ಸ) ಜೀವಿತವನ್ನು ನಿಷ್ಪಕ್ಷವಾಗಿ ಅಧ್ಯಯನ ಮಾಡುವುದಾದರೆ ಇಸ್ಲಾಮ್ ಧರ್ಮ ಎಲ್ಲ ವಿಧಗಳ ಉಗ್ರಗಾಮಿ ಚಟುವಟಿಕೆಗಳಿಗೆ ಮತ್ತು ರಕ್ತಪಾತಕ್ಕೆ ವಿರುದ್ಧವಾಗಿದೆ ಎಂದು ನಾವು ಕಾಣಬಹುದು.

ಸಮಯದ ಕೊರತೆಯ ಕಾರಣ ನಾನು ದೀರ್ಘ ವಿವರಣೆ ನೀಡಲಾರೆ. ಆದರೆ ನಾನು ಇಸ್ಲಾಮಿನ ಕೆಲವು ಮೂಲ ತತ್ವಗಳನ್ನು ವಿವರಿಸುವೆನು. ಅವು ಇಸ್ಲಾಮ್ ಶಾಂತಿ ಪ್ರತಿಪಾದಕ ಧರ್ಮವೆಂದು ಸಂಶಯಾತೀತವಾಗಿ ಸಾಬೀತುಗೊಳಿಸುವುವು. ಇದರ ಮೊದಲು ಹೇಳಿದ ಹಾಗೆ ಇಸ್ಲಾಮ್ ಧರ್ಮ ತೀವ್ರವಾದ ಮತ್ತು ಯುದ್ಧವನ್ನು ಪ್ರೋತ್ಸಾಹಿಸುತ್ತದೆ ಎಂದು ಇಸ್ಲಾಮಿನ ವಿರುದ್ಧ ಆಕ್ಷೇಪಿಸಲಾಗುತ್ತಿದೆ. ಆದರೆ ಈ ಆಕ್ಷೇಪ ಸಂಪೂರ್ಣ ಸುಳ್ಳಾಗಿದೆ.

ಪವಿತ್ರ ಖುರ್‌ಆನಿನ ಅಧ್ಯಾಯ 2 ವಚನ 191ರಲ್ಲಿ ಅಲ್ಲಾಹನು ಹೀಗೆ ಆಜ್ಞಾಪಿಸಿದ್ದಾನೆ: ಯುದ್ಧವನ್ನು ಪ್ರತಿರೋಧಕ್ಕಾಗಿ ಮಾಡಲು ಮಾತ್ರ ಅನುಮತಿಸಲಾಗಿದೆ. ಈ ವಿಷಯವನ್ನು ಅಧ್ಯಾಯ22 ವಚನ 40ರಲ್ಲಿ ಪುನಾರಾವರ್ತಿಸಿ ಹೀಗೆ ಸ್ಪಷ್ಟವಾಗಿ ಹೇಳಲಾಗಿದೆ: ಯಾರನ್ನು ಆಕ್ರಮಿಸಲಾಗಿದೆಯೋ ಮತ್ತು ಯುದ್ಧವನ್ನು ಹೇರಲಾಗಿದೆಯೋ ಅವರಿಗೆ ಪ್ರತಿರೋಧ ಮಾಡಲು ಅನುಮತಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮ್ ಸರಕಾರಗಳಿಗೆ ಅನುಮತಿ ನೀಡಿದುದು ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ನಂಬಿಕೆಯ ಸ್ವಾತಂತ್ರ್ಯವನ್ನು ಕಾಪಾಡಲಿಕ್ಕಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 194ರಲ್ಲಿ ಮುಸ್ಲಿಮರಿಗೆ ಹೀಗೆ ಆಜ್ಞಾಪಿಸಲಾಗಿದೆ: ಧಾರ್ಮಿಕ ಸ್ವಾತಂತ್ರ್ಯ ಈಗಾಗಲೇ ಇರುವಲ್ಲಿ ಮುಸ್ಲಿಮರಿಗೆ ಯುದ್ಧ ಮಾಡಲು ಅನುಮತಿ ನೀಡಲಾಗಿಲ್ಲ.

ಆದುದರಿಂದ, ಯಾವುದೇ ಮುಸ್ಲಿಮ್ ದೇಶಕ್ಕೆ, ಗುಂಪಿಗೆ ಅಥವಾ ವ್ಯಕ್ತಿಗೆ ಯಾವುದೇ ರೀತಿಯ ಹಿಂಸೆ, ಯುದ್ಧ, ಕಾನೂನುಭಂಗ ಮೊದಲಾದುವುಗಳನ್ನು ಯಾವುದೇ ದೇಶ ಅಥವಾ ಅದರ ಜನತೆಯ ವಿರುದ್ಧ ಮಾಡುವ ಅಧಿಕಾರವಿಲ್ಲ. ಯುರೋಪಿನಲ್ಲಿ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಸರಕಾರಗಳು ಜಾತ್ಯತೀಯವಾಗಿವೆ. ಆದುದರಿಂದ ಒಬ್ಬ ಮುಸ್ಲಿಮನಿಗೆ ದೇಶದ ನಿಯಮಗಳಿಗೆ ಭಂಗ ಉಂಟುಮಾಡಲು, ಸರಕಾರವನ್ನು ಹಿಂಸಾಚಾರದೊಂದಿಗೆ ವಿರೋಧಿಸಲು ಅಥವಾ ಯಾವುದೇ ರೀತಿಯ ವಿದ್ರೋಹವನ್ನು ಉತ್ತೇಜಿಸಲು ಅಧಿಕಾರವಿರುವುದಿಲ್ಲ.

ವಾಸ್ತವಿಕವಾಗಿ ಇಸ್ಲಾಮಿನ ನೈಜ ತತ್ವಗಳು ಹೀಗೆ ಪ್ರತಿಪಾದಿಸುತ್ತವೆ: ಒಬ್ಬ ಮುಸ್ಲಿಮ್ ಪುರುಷ ಅಥವಾ ಮಹಿಳೆ ತನಗೆ ಧಾರ್ಮಿಕ ಸ್ವಾತಂತ್ರ್ಯ ಸತ್ಯವಾಗಿಯೂ ಇಲ್ಲ ಎಂದು ಒಂದು ಮುಸ್ಲಿಮೇತರ ದೇಶದಲ್ಲಿ ವಾಸಿಸುವಾಗ ಭಾವಿಸುವುದಾದರೆ ಅವರು ಪ್ರತಿಭಟನೆ ಮತ್ತು ಕಾನೂನು ಭಂಗಕ್ಕೆ ಪ್ರಯತ್ನಿಸಬಾರದು. ಅದಕ್ಕೆ ಬದಲಾಗಿ ಅವರು ಆ ದೇಶವನ್ನು ಬಿಟ್ಟು ತಮಗೆ ಅನುಕೂಲ ಸ್ಥಿತಿ ಲಭಿಸಬಹುದಾದ ದೇಶಕ್ಕೆ ವಲಸೆ ಹೋಗಬೇಕು.

ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 127ರಲ್ಲಿ ಮುಸ್ಲಿಮ್ ಸರಕಾರಗಳಿಗೆ ಹೀಗೆ ಆಜ್ಞಾಪಿಸಲಾಗಿದೆ: ಅವರು ಆಕ್ರಮಿಸಲ್ಪಟ್ಟರೆ ಅವರು ಆಕ್ರಮಣಕ್ಕೆ ಸಮವಾಗಿ ಪ್ರತಿರೋಧಿಸಬೇಕು. ಪವಿತ್ರ ಖುರ್‌ಆನ್ ಹೇಳುವುದೇನೆಂದರೆ ಶಿಕ್ಷೆ ಅಪರಾಧಕ್ಕೆ ಸಮವಾಗಿರಬೇಕು.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 62ರಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: ನಿಮ್ಮ ವಿರೋಧಿಗಳು ನಿಮಗೆ ಹಾನಿಮಾಡುವ ಉದ್ದೇಶ ಹೊಂದಿದ ನಂತರ ಹಾಗೆ ಮಾಡದೆ ಹಿಂದೆ ಸರಿದರೆ ಮತ್ತು ರಾಜಿಯಾಗಲು ಒಲವು ಪ್ರಕಟಿಸಿದರೆ ನೀವು ಕೂಡಲೆ ಅವರ ನಿಲುವನ್ನು ಅಂಗೀಕರಿಸಿ ಶಾಂತಿಗೆ ಪ್ರಯತ್ನಿಸಬೇಕು. ಅವರ ಉದ್ದೇಶ ಏನಾಗಿದ್ದರೂ ಸಹ ಹೀಗೆ ಮಾಡಬೇಕು.

ಪವಿತ್ರ ಖುರ್‌ಆನಿನ ಈ ಉಪದೇಶ ಜಾಗತಿಕ ಶಾಂತಿ ಮತ್ತು ಸುರಕ್ಷೆ ಕಾಪಾಡಲು ಇರುವ ಕೀಲಿಗೈ ಆಗಿದೆ. ಇಂದಿನ ಕಾಲದಲ್ಲಿ ಅನೇಕ ಉದಾಹರಣೆಗಳು ದೊರಕುತ್ತವೆ. ಅನ್ಯರ ವಿರೋಧವನ್ನು ಕಂಡಾಗ ಅವರ ವಿರುದ್ಧ ಆಕ್ರಮಣ ಮಾಡುವ ಪ್ರವೃತ್ತಿ ಹೊಂದಿವೆ. ಅವರು ಈ ಕೆಳಗಿನ ತತ್ವವನ್ನು ಪಾಲಿಸುತ್ತಾರೆಂದು ತೋರುತ್ತದೆ. ''ಅವರು ನಮ್ಮನ್ನು ನಾಶ ಮಾಡುವ ಮೊದಲು ನಾವು ಅವರನ್ನು ನಾಶ ಮಾಡಬೇಕು.''

ಆದರೆ ಇಸ್ಲಾಮ್ ಹೇಳುವುದೇನೆಂದರೆ, ಶಾಂತಿ ಸ್ಥಾಪನೆ ಮಾಡುವ ಯಾವ ಸಂದರ್ಭವನ್ನೂ ಕಳೆದುಕೊಳ್ಳಬಾರದು. ಆದುದರಿಂದ ಪ್ರತೀಕ್ಷೆಯ ಒಂದು ಮಿಣುಕು ಕಂಡರೂ ಅದನ್ನು ಭದ್ರವಾಗಿ ಹಿಡಿದುಕೊಳ್ಳಬೇಕು. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಘೋಷಿಸಿದ್ದಾನೆ: ಒಂದು ಜನಾಂಗದ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಇಸ್ಲಾಮ್ ಉಪದೇಶಿಸುವುದೇನೆಂದರೆ, ಎಲ್ಲ ಸಂದರ್ಭಗಳಲ್ಲಿಯೂ ಎಷ್ಟು ಕಷ್ಟವಾದರೂ ನೀವು ನ್ಯಾಯ ಮತ್ತು ಸತ್ಯಕ್ಕೆ ಬದ್ಧರಾಗಿರಬೇಕು. ಆದುದರಿಂದ ಯುದ್ಧ ಕಾಲದಲ್ಲಿಯೂ ನ್ಯಾಯಪಾಲನೆ ಅತ್ಯಂತ ಮುಖ್ಯವಾಗಿದೆ. ಯುದ್ಧ ಕೊನೆಗೊಂಡಾಗ ಜಯಶಾಲಿಯಾದವನು ನ್ಯಾಯಯುತವಾಗಿ ವರ್ತಿಸಬೇಕು ಮತ್ತು ಕ್ರೌರ್ಯಭಾವದಿಂದ ವರ್ತಿಸಬಾರದು.

ಆದರೆ ಇಂದಿನ ಲೋಕದಲ್ಲಿ ಇಂತಹ ಉನ್ನತ ನೈತಿಕ ಮತ್ತು ಸತ್ಯದ ಮಟ್ಟವನ್ನು ಕಾಣಲಾರೆವು. ಈಗಿನ ಕಾಲದಲ್ಲಿ ಯುದ್ಧಗಳು ಕೊನೆಗೊಂಡಾಗ ಜಯಗಳಿಸಿದ ದೇಶಗಳು ಸೋತ ದೇಶಗಳ ವಿರುದ್ಧ ಪ್ರತಿಬಂಧಗಳನ್ನು ಹೇರುತ್ತವೆ ಮತ್ತು ಅವು ನೈಜ ಸ್ವಾತಂತ್ರ್ಯ ಗಳಿಸುವುದನ್ನು ತಡೆಯುತ್ತವೆ. ಇಂತಹ ಧೋರಣೆಗಳು ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಹಾನಿಗೊಳಿಸುತ್ತವೆ ಮತ್ತು ಸೋತ ದೇಶಗಳ ಹತಾಶ ಭಾವನೆಗಳನ್ನು ವರ್ಧಿಸುತ್ತವೆ ಮತ್ತು ಹಾನಿಕಾರಕ ಪರಿಣಾಮವನ್ನುಂಟು ಮಾಡುತ್ತವೆ.

ವಾಸ್ತವಿಕ ವಿಷಯವೇನೆಂದರೆ, ಸಮಾಜದ ಪ್ರತಿಯೊಂದು ಹಂತದಲ್ಲೂ ನ್ಯಾಯಪಾಲನೆಯಾಗದಿದ್ದರೆ ಸ್ಥಿರವಾದ ಶಾಂತಿ ಸ್ಥಾಪನೆಯಾಗುವುದು ಎಂದೂ ಸಾಧ್ಯವಾಗದು.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 68ರಲ್ಲಿ ಇಸ್ಲಾಮಿನ ಇನ್ನೊಂದು ಮುಖ್ಯ ತತ್ವವನ್ನು ವಿವರಿಸಲಾಗಿದೆ. ಯುದ್ಧ ಕಾಲದಲ್ಲಿ ಹೊರತು ಬೇರೆ ಸಂದರ್ಭಗಳಲ್ಲಿ ಜನರನ್ನು ಸೆರೆ ಹಿಡಿಯುವುದನ್ನು ಮುಸ್ಲಿಮರಿಗೆ ಅನುಮತಿಸಲಾಗಿಲ್ಲ. ಆದರೆ ತೀವ್ರವಾದಿಗಳು ಮತ್ತು ಭೀಕರ ಗುಂಪುಗಳು ನಿಷ್ಕಾರಣವಾಗಿ ಜನರನ್ನು ಸೆರೆ ಹಿಡಿಯುತ್ತಿರುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ನಮಗೆ ದೊರಕುವ ವರದಿಗಳ ಪ್ರಕಾರ ಈ ಗುಂಪುಗಳು ಜನರನ್ನು ಸೆರೆ ಹಿಡಿಯುತ್ತವೆಯಲ್ಲದೆ ಅವರ ವಿರುದ್ಧ ಬರ್ಬರ ಹಿಂಸಾಚಾರಗಳನ್ನು ಜಾರಿಗೊಳಿಸುತ್ತಿವೆ.

ಈ ಭೀಕರವಾದಿ ಗುಂಪುಗಳು ಮಾಡುತ್ತಿರುವ ಕೃತ್ಯಗಳನ್ನು ಅತ್ಯಂತ ಕಟುವಾದ ಭಾಷೆಯಲ್ಲಿ ಮಾತ್ರ ಖಂಡಿಸಲು ಸಾಧ್ಯ. ಆದರೆ ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಯಾರನ್ನಾದರೂ ನ್ಯಾಯಬದ್ಧವಾಗಿ ಸೆರೆ ಹಿಡಿದರೂ ಅವರ ಮೇಲೆ ದಯೆದೋರಬೇಕು ಮತ್ತು ಅವರನ್ನು ವಿಮೋಚಿಸಲು ಸಾಧ್ಯವಿರುವಲ್ಲೆಲ್ಲ ಪ್ರಯತ್ನಿಸಬೇಕು.

ಶಾಂತಿ ಸ್ಥಾಪನೆ ಮಾಡುವ ಒಂದು ಸುವರ್ಣ ತತ್ವ ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿದೆ. ಅದರಲ್ಲಿ ಹೀಗೆ ಹೇಳಲಾಗಿದೆ: ದೇಶಗಳ ಅಥವಾ ಜನಾಂಗಗಳ ಮಧ್ಯೆ ಸಂಘರ್ಷ ಉಂಟಾದರೆ ಮೂರನೆಯ ಪಕ್ಷದವರು ಮಧ್ಯಸ್ಥರಾಗಿ ರಾಜಿಗೆ ಮತ್ತು ಸಂಘರ್ಷ ಶಾಂತಿಯುತವಾಗಿ ಪರಿಹರಿಸಲ್ಪಡಲು ಪ್ರಯತ್ನಿಸಬೇಕು.

ಒಪ್ಪಂದ ಮಾಡಿಕೊಂಡ ನಂತರ ಒಂದು ಪಕ್ಷದವರು ಇನ್ನೊಂದನ್ನು ಅನ್ಯಾಯವಾಗಿ ಅಧೀನಕ್ಕೊಳಪಡಿಸಲು ಪ್ರಯತ್ನಿಸುವುದಾದರೆ ಅಥವಾ ಒಪ್ಪಂದಕ್ಕೆ ಭಂಗವುಂಟುಮಾಡಲು ಪ್ರಯತ್ನಿಸುವುದಾದರೆ ದೇಶಗಳು ಒಗ್ಗೂಡಿ ಆಕ್ರಮಣಗಾರನ ವಿರುದ್ಧ, ಆವಶ್ಯಕವಾದರೆ ಯುದ್ಧ ಮಾಡಬೇಕು. ಆಕ್ರಮಣ ಮಾಡಿದ ಪಕ್ಷ ಹಿಂದೆ ಸರಿದರೆ ಅದನ್ನು ಹೀನೈಸಬಾರದು ಅಥವಾ ಅನಾವಶ್ಯಕವಾಗಿ ನಿರ್ಬಂಧ ಹೇರಬಾರದು. ಅವರು ಸ್ವತಂತ್ರ ದೇಶವಾಗಿ ಮತ್ತು ಸ್ವತಂತ್ರ ಸಮಾಜವಾಗಿ ಅಭಿವೃದ್ಧಿ ಹೊಂದಲು ಅನುಮತಿಸಬೇಕು. ಈ ತತ್ವ ಇಂದಿನ ಲೋಕಕ್ಕೆ ಅನುಸರಿಸಲು ಯೋಗ್ಯವಾದ ಮಹತ್ವಪೂರ್ಣ ತತ್ವವಾಗಿದೆ. ಮಹಾಶಕ್ತಿ ರಾಷ್ಟ್ರಗಳ ಮತ್ತು ಸಂಯುಕ್ತ ರಾಷ್ಟ್ರ ಸಂಘ ಮೊದಲಾದುವು ಈ ತತ್ವವನ್ನು ಪಾಲಿಸಿ ಕ್ರಮ ಕೈಗೊಳ್ಳಬಹುದಾಗಿದೆ.

ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಅತ್ಯಂತ ಮಹತ್ವಪೂರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 41ರಲ್ಲಿ ಪ್ರತಿಪಾದಿಸಲಾಗಿದೆ. ಅದರಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಹೇಳಲಾಗಿದೆ. ಪವಿತ್ರ ಖುರ್‌ಆನ್ ಈ ವಚನದಲ್ಲಿ ಹೇಳುವುದೇನೆಂದರೆ, ಯುದ್ಧ ಮಾಡಲು ಅನುಮತಿ ನೀಡದಿರುತ್ತಿದ್ದರೆ ಮಸ್‌ಜಿದ್‌ಗಳ ಜೊತೆ ಚರ್ಚ್‌ಗಳು, ಯಹೂದಿ ದೇವಾಲಯಗಳು, ಇತರ ದೇವಾಲಯಗಳು ಮತ್ತು ಎಲ್ಲ ಧರ್ಮಗಳ ಆರಾಧನೆಯ ಸ್ಥಳಗಳು ನಾಶವಾಗುವ ಅಪಾಯವನ್ನು ಹೊಂದಿರಬಹುದಾಗಿತ್ತು. ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಬಲಪ್ರಯೋಗ ಮಾಡಲು ಅನುಮತಿಸಿದುದು ಕೇವಲ ಇಸ್ಲಾಮ್ ಧರ್ಮವನ್ನು ರಕ್ಷಿಸಲು ಮಾತ್ರವಲ್ಲ, ಎಲ್ಲ ಧರ್ಮಗಳನ್ನು ರಕ್ಷಿಸಲು ಸಹ ಆಗಿದೆ.

ವಾಸ್ತವಿಕವಾಗಿ, ಇಸ್ಲಾಮ್ ಎಲ್ಲ ಧರ್ಮಗಳ ಜನರಿಗೆ ಸ್ವಾತಂತ್ರ್ಯ ಮತ್ತು ಸಂರಕ್ಷಣೆಯ ಖಾತರಿ ನೀಡುತ್ತದೆ. ಇಸ್ಲಾಮ್ ಪ್ರತಿಯೊಬ್ಬ ವ್ಯಕ್ತಿಗೆ ಅವನು ಆಯ್ಕೆ ಮಾಡುವ ದಾರಿ ಅಥವಾ ವಿಶ್ವಾಸವನ್ನು ಅನುಸರಿಸುವ ಅಧಿಕಾರವನ್ನು ಸಂರಕ್ಷಿಸುತ್ತದೆ. ಸಮಾಜದ ಎಲ್ಲ ಹಂತಗಳಲ್ಲೂ ಲೋಕದಾದ್ಯಂತ ಮಾನವರಲ್ಲಿ ಐಕ್ಯತೆಯನ್ನು ಬೆಳೆಸಲು ಪವಿತ್ರ ಖುರ್‌ಆನ್ ಪ್ರತಿಪಾದಿಸಿದ ತತ್ವಗಳಲ್ಲಿರುವ ಕೆಲವು ಅಂಶಗಳನ್ನು ಮಾತ್ರ ನಿಮ್ಮ ಮುಂದೆ ವಿವರಿಸಿದ್ದೇನೆ. ಇವು ಪವಿತ್ರ ಖುರ್‌ಆನ್ ಶಾಂತಿ ಸ್ಥಾಪಿಸಲು ಲೋಕದ ಜನರಿಗೆ ನೀಡಿದ ಸುವರ್ಣ ಕೀಲಿಗೈಗಳಾಗಿವೆ.

ಇಸ್ಲಾಮ್ ಧರ್ಮದ ಈ ಉಪದೇಶಗಳನ್ನು, ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರರು(ಸ) ಮತ್ತು ಅವರ ಶಿಷ್ಯರು ಪರಿಪೂರ್ಣವಾಗಿ ಅನುಸರಿಸಿದರು. ನಾನು ಹೀಗೆ ಇನ್ನೊಮ್ಮೆ ಪುನರಾವರ್ತಿಸಲು ಬಯಸುತ್ತೇನೆ – ಲೋಕಕ್ಕೆ ಈ ಶಾಂತಿ ಮತ್ತು ಸುರಕ್ಷೆಯ ಅತ್ಯಂತ ಹೆಚ್ಚು ಆವಶ್ಯಕತೆ ಇದೆ. ಇದು ಈಗಿನ ಕಾಲದ ಅತ್ಯಂತ ತುರ್ತು ಆವಶ್ಯಕತೆಯಾಗಿದೆ.

ಎಲ್ಲ ದೇಶಗಳು ಮತ್ತು ಎಲ್ಲ ಜನರು ಒಗ್ಗೂಡಬೇಕು ಮತ್ತು ಎಲ್ಲರ ಹಿತಕ್ಕೋಸ್ಕರ ಐಕ್ಯದಿಂದ ಎಲ್ಲ ರೂಪದ ಕ್ರೌರ್ಯ ಕೃತ್ಯಗಳನ್ನು, ಹಿಂಸಾಚಾರಗಳನ್ನು, ಅನ್ಯಾಯಗಳನ್ನು ಧರ್ಮದ ಹೆಸರಲ್ಲಿ ಅಥವಾ ಬೇರೆ ವಿಧದಲ್ಲಿ ಜಾರಿಗೊಳಿಸುವುದನ್ನು ತಡೆಗಟ್ಟಬೇಕು. ಇಂತಹ

ಹೀನ ಕೃತ್ಯಗಳಲ್ಲಿ ಧರ್ಮವನ್ನು ಅಪಹಾಸ್ಯ ಮಾಡುವುದು ಸಹ ಸೇರಿದೆ. ಇದರಿಂದ ಹತಾಶಭಾವನೆ ಮತ್ತು ಕ್ರೋಧ ಉತ್ಪತ್ತಿಯಾಗುತ್ತದೆ. ಭೀಕರವಾದಿ ಗುಂಪುಗಳ ದುಸ್ಸಹವಾದ ಚಟುವಟಿಕೆಗಳು ಮತ್ತು ತಮ್ಮ ಕುಕೃತ್ಯಗಳನ್ನು ಧರ್ಮದ ಹೆಸರಿನಲ್ಲಿ ಸಮರ್ಥಿಸುವುದು ಸಹ ಇದರಲ್ಲಿ ಸೇರಿದೆ.

ಇದಲ್ಲದೆ ನಾವು ಎಲ್ಲ ದೇಶಗಳೊಂದಿಗೆ ಪ್ರಾಮಾಣಿಕತೆಯಿಂದ ವರ್ತಿಸಬೇಕು ಮತ್ತು ಅವರಿಗೆ ಸಹಾಯ ನೀಡಲು ಪ್ರಯತ್ನಿಸಬೇಕು. ಈ ರೀತಿ ಪ್ರತಿಯೊಂದು ದೇಶ ಅಭಿವೃದ್ಧಿ ಹೊಂದಬಹುದು ಮತ್ತು ತನ್ನ ಪ್ರಗತಿಯ ಸಾಧ್ಯತೆಗಳನ್ನೂ ಅರಿತುಕೊಳ್ಳುವುದು. ನಾವು ಲೋಕದಲ್ಲಿ ಕಾಣುವ ದ್ವೇಷಾಸೂಯೆಗಳು ಮತ್ತು ಪ್ರತಿಸ್ಪರ್ಧೆಗಳು ಸಂಪತ್ತುಗಳಿಸುವ ಬಗ್ಗೆ ಇರುವ ಹುಚ್ಚು ಹಸಿವಿನ ಕಾರಣದಿಂದಾಗಿದೆ. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಒಂದು ಸುವರ್ಣ ತತ್ವ ಪ್ರತಿಪಾದಿಸಿದೆ – ಒಬ್ಬನು ಇನ್ನೊಬ್ಬನ ಸಂಪತ್ತನ್ನು ದುರಾಶೆಯಿಂದ ದಿಟ್ಟಿಸಿ ನೋಡಬಾರದೆಂದು. ಈ ತತ್ವವನ್ನು ಅನುಸರಿಸಿದರೆ ನಾವು ಜಾಗತಿಕ ಶಾಂತಿಯನ್ನು ಉತ್ತೇಜಿಸಲು ಸಾಧ್ಯವಾಗುವುದು.

ಸಮಾಜದ ಎಲ್ಲ ಹಂತಗಳಲ್ಲೂ ನ್ಯಾಯ ಪಾಲನೆಯ ಆವಶ್ಯಕತೆಗಳನ್ನು ಈಡೇರಿಸಬೇಕು. ಆ ಮೂಲಕ ಪ್ರತಿಯೊಬ್ಬನು, ಅವನು ಯಾವ ಧರ್ಮ, ಜಾತಿ ಅಥವಾ ವರ್ಣದವನಾದರೂ ತನ್ನ ಸ್ವಂತ ಎರಡು ಕಾಲುಗಳ ಮೇಲೆ ಘನತೆಯಿಂದಲೂ ಗೌರವದಿಂದಲೂ ನಿಲ್ಲಲು ಸಮರ್ಥನಾಗಬೇಕು. ಇಂದಿನ ಕಾಲದಲ್ಲಿ ಅನೇಕ ಪ್ರಥಮ–ಲೋಕ ದೇಶಗಳು ತಮ್ಮ ಭಂಡವಾಳ ಹೂಡಿಕೆಗಳನ್ನು ಬಡ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ವರ್ಧಿಸುತ್ತಾ ಇರುವುದನ್ನು ಕಾಣಬಹುದು.

ಈ ಶ್ರೀಮಂತ ದೇಶಗಳು ನ್ಯಾಯಬದ್ಧವಾಗಿ ವರ್ತಿಸುವುದು ಅನಿವಾರ್ಯವಾಗಿದೆ. ಅವರು ಬಡ ದೇಶಗಳ ಸಂಪನ್ಮೂಲಗಳನ್ನು ಮತ್ತು ಅಗ್ಗದ ಕಾರ್ಮಿಕ ಶಕ್ತಿಯನ್ನು ತಮ್ಮ ಸ್ವಂತ ರಾಷ್ಟ್ರೀಯ ಲಾಭಕ್ಕೆ ಬಳಸುವ ಲಾಭಕೋರರಾಗಬಾರದು. ಅವರು ಬಡದೇಶಗಳಲ್ಲಿ ಗಳಿಸುವ ಸಂಪತ್ತಿನ ಬಹು ಭಾಗವನ್ನು ಆ ದೇಶಗಳಲ್ಲಿ ಮರು ಹೂಡಿಕೆ ಮಾಡಿ ಅಲ್ಲಿನ ಜನರು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಮಾಡಬೇಕು.

ಬಡದೇಶಗಳಿಗೆ ಸಹಾಯ ನೀಡಲು ಅಭಿವೃದ್ಧಿ ಹೊಂದಿದ ದೇಶಗಳು ನಾನು ಮೇಲೆ ಹೇಳಿದಂತೆ ಕಾರ್ಯೋನ್ಮುಖವಾದರೆ ಬಡ ದೇಶಗಳಿಗೆ ಸಹಾಯ ಮಾಡಿದಂತೆ ಆಗುವುದು ಮಾತ್ರವಲ್ಲ, ಅದು ಪರಸ್ಪರ ಲಾಭಕರವೂ ಆಗುವುದು. ಅದರಿಂದ ಬಡದೇಶಗಳಲ್ಲಿ ವಿಶ್ವಾಸವು ಮತ್ತು ಆತ್ಮಧೈರ್ಯವು ವರ್ಧಿಸುವುದಲ್ಲದೆ ಬೆಳೆಯುತ್ತಿರುವ ಹತಾಶ ಮನೋಭಾವ ನೀಗುವುದು.

ಶ್ರೀಮಂತ ದೇಶಗಳು ಕೇವಲ ತಮ್ಮ ಸ್ವಂತ ಹಿತಾಸಕ್ತಿ ಬಗ್ಗೆ ಕಾಳಜಿವಹಿಸುತ್ತವೆ ಮತ್ತು ಬಡವರಿಗೆ ಅವರ ದೇಶದಲ್ಲಿರುವ ಸಂಪನ್ಮೂಲಗಳ ಲಾಭ ದೊರೆಯದಂತೆ ಮಾಡುತ್ತವೆ ಎಂಬ ಭಾವನೆ ಮೇಲಿನಂತೆ ವರ್ತಿಸಿದರೆ ದೂರೀಕರಿಸಲ್ಪಡುವುದು. ಅದಲ್ಲದೆ ಅದರ ಮೂಲಕ ದೇಶಗಳ ಆರ್ಥಿಕ ವ್ಯವಸ್ಥೆ ಸುಧಾರಣೆಯಾಗುವುದು ಮಾತ್ರವಲ್ಲ, ಅದರ ಮೂಲಕ ಜಾಗತಿಕ ಆರ್ಥಿಕ ವ್ಯವಸ್ಥೆಯ ಆರೋಗ್ಯ ಸಹ ಉತ್ತಮಗೊಳ್ಳುವುದು.

ಅದು ಜಾಗತಿಕ ಸಮಾಜ, ಕರುಣೆ ಮತ್ತು ಮಾನವೀಯತೆ ಭಾವನೆಯನ್ನು ಸ್ಥಾಪಿಸುವ ಮಾರ್ಗವಾಗುವುದು. ಅದು ಲೋಕದಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಅಸ್ತಿಭಾರವಾಗುವುದು. ನಾವು ಈ ವಿಷಯದ ಬಗ್ಗೆ ಲಕ್ಷ್ಯ ನೀಡದಿದ್ದರೆ ಇಂದಿನ ಲೋಕದ ಪರಿಸ್ಥಿತಿಯ ಕಾರಣ ವಿನಾಶಕಾರಿ ಜಾಗತಿಕ ಮಹಾಯುದ್ಧಕ್ಕೆ ಒಯ್ಯಲ್ಪಡುವೆವು. ಅಂತಹ ಯುದ್ಧ ಸಂಭವಿಸಿದರೆ ಅದರ ದೋಷ ಫಲಗಳನ್ನು ಮುಂದಿನ ಪೀಳಿಗೆಗಳು ಅನುಭವಿಸುವುವು ಮತ್ತು ಅವರು ನಮ್ಮನ್ನು ಕ್ಷಮಿಸಲಾರರು.

ಇಷ್ಟು ಹೇಳಿ ನಾನು ವಿರಮಿಸಲು ನಿಮ್ಮಿಂದ ಅನುಮತಿ ಕೋರುತ್ತೇನೆ. ಲೋಕದಲ್ಲಿ ನೈಜ ಶಾಂತಿ ಸ್ಥಾಪನೆ ಸಾಧ್ಯವಾಗುವಂತೆ ಅಲ್ಲಾಹನು ಮಾಡಲಿ ಎಂದು ಪ್ರಾರ್ಥಿಸುತ್ತೇನೆ. ನಿಮಗೆ ತುಂಬಾ ಧನ್ಯವಾದಗಳು. ■

———*****———

**LOVE FOR ALL**
**HATRED FOR NONE**
**ಎಲ್ಲರೊಂದಿಗೆ ಪ್ರೀತಿ**
**ಯಾರೊಂದಿಗೂ ದ್ವೇಷವಿಲ್ಲ**

# ಇಂದಿನ ಕಾಲದ ಜಾಗತಿಕ ಅವ್ಯವಸ್ಥೆಗೆ ವಾಸ್ತವಿಕವಾದ ಕಾರಣ ಧರ್ಮವೇ?

ಅಹ್ಮದಿಯಾ ಮುಸ್ಲಿಮ್ ಜಮಾಅತ್ 2015ರ ಯುನೈಟೆಡ್ ಕಿಂಗ್‌ಡಮ್‌ನ ವಾರ್ಷಿಕ ಸಮ್ಮೇಳನದಲ್ಲಿ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಸಮಾರೋಪ ಭಾಷಣ



***ಇಸ್ಲಾಮೀ ಲೋಕದಲ್ಲಿ ನಿರಂತರ ಬೆದರಿಕೆ ಒಡ್ಡುತ್ತಿರುವ ಉಗ್ರವಾದ ಮತ್ತು ತೀವ್ರಗಾಮಿ ಚಟುವಟಿಕೆಗಳು ರಾಷ್ಟ್ರಗಳ ಮಧ್ಯೆ ಸಂಘರ್ಷವನ್ನು ವರ್ಧಿಸುತ್ತಾ ಇದೆ. ಈ ಉಗ್ರವಾದಿ ಧ್ಯೇಯಗಳು ಪಾಶ್ಚಿಮಾತ್ಯ ದೇಶಗಳಿಗೂ ಸಾಗಿವೆ. ಭೀಕರ ವಾದದ ಪರಿಣಾಮಗಳಿಗೆ ಪೌರ್ವಾತ್ಯ ದೇಶಗಳ ಹಾಗೆ ಪಾಶ್ಚಿಮಾತ್ಯ ದೇಶಗಳೂ ಗುರಿಯಾಗಿವೆ. ಮಾನವರ ಬಗ್ಗೆ ಸಹಾನುಭೂತಿಯನ್ನು ವರ್ಧಿಸಿ ನ್ಯಾಯಪಾಲನೆ ಮಾಡುವ ಮೂಲಕ ಮಾತ್ರ ಇಂದಿನ ಕಾಲದ ಜಾಗತಿಕ ಗ್ರಾಮದಲ್ಲಿ ಶಾಂತಿಯನ್ನು ಹೊಂದುವ ಪ್ರತೀಕ್ಷೆ ಇಟ್ಟುಕೊಳ್ಳಬಹುದಾಗಿದೆ. ಆದರೆ, ಯುದ್ಧ ಮತ್ತು ಸಂಘರ್ಷದ ಅಂಚಿನಲ್ಲಿರುವ ಜಗತ್ತಿನಲ್ಲಿ ನ್ಯಾಯ, ಕರುಣೆ ಮತ್ತು ಸಹಾನುಭೂತಿಯ ಮೌಲ್ಯಗಳನ್ನು ಸ್ಥಾಪಿಸುವುದು ಹೇಗೆ?***

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಪಠಿಸಿದರು:

إِنَّ اللَّهَ يَأْمُرُ بِالْعَدْلِ وَالإِحْسَانِ وَإِيتَاءِ ذِي الْقُرْبَى وَيَنْهَى عَنِ الْفَحْشَاءِ وَالْمُنكَرِ وَالْبَغْيِ يَعِظُكُمْ لَعَلَّكُمْ تَذَكَّرُونَ

“ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ.” (16:91).

ಜಗತ್ತಿನಲ್ಲಿ ಹರಡಿರುವ ಅವ್ಯವಸ್ಥೆ ಮತ್ತು ಭ್ರಷ್ಟತೆ ಪ್ರತಿಯೊಬ್ಬ ಶಾಂತಿಪ್ರಿಯನಿಗೆ ಅಸಹನೀಯವಾಗಿದೆ. ಮಾನವರ ಬಗ್ಗೆ ಕರುಣೆ ಮತ್ತು ಸಹಾನುಭೂತಿ ಹೊಂದಿರುವ ಪ್ರತಿಯೊಬ್ಬನು ಇಂದಿನ ಲೋಕದ ಸ್ಥಿತಿಯ ಬಗ್ಗೆ ವ್ಯಥೆಯನ್ನು ಮತ್ತು ಆಶ್ಚರ್ಯವನ್ನು ಪ್ರಕಟಿಸುತ್ತಿದ್ದಾನೆ. ಈ ವಿಷಯದ ಬಗ್ಗೆ ಬಹಳ ಚರ್ಚಿಸಲಾಗಿದೆ ಮತ್ತು ಬರೆಯಲಾಗಿದೆ. ಇಸ್ಲಾಮೀ ಲೋಕದಲ್ಲಿ ಅಶಾಂತಿ ಹೆಚ್ಚು ತೀವ್ರವಾಗಿ ವ್ಯಾಪಿಸಿದೆ ಎಂದೂ ಅದಕ್ಕೆ ಕಾರಣ ಮುಸ್ಲಿಮರೆಂದೂ ಸೂಚಿಸಲಾಗುತ್ತಿದೆ. ಅದರ ಮೂಲಕ ಹೀಗೆ ನಿಷ್ಕರ್ಷಿಸಲಾಗುತ್ತಿದೆ: ಅಶಾಂತಿಗೆ ಕಾರಣ ಧರ್ಮವಾಗಿದೆ ಮತ್ತು ಮುಖ್ಯವಾಗಿ ಇಸ್ಲಾಮ್ ಧರ್ಮ ಅದರ ಮೂಲ ಕಾರಣವಾಗಿದೆ. (ಹೀಗೆ ಆಪಾದಿಸುವುದರಿಂದ ಅಲ್ಲಾಹನ ಅಭಯ ಕೋರುತ್ತೇವೆ). ಇಷ್ಟರವರೆಗೆ ಪಾಶ್ಚಿಮಾತ್ಯರು ನಂಬುತ್ತಾ ಇದ್ದುದೇನೆಂದರೆ ಎಲ್ಲ ಅಶಾಂತಿ ಪ್ರಕ್ರಿಯೆಗಳು ಇಸ್ಲಾಮೀ ಲೋಕಕ್ಕೆ ಅಥವಾ ಅಭಿವೃದ್ಧಿ ಹೊಂದದ ದೇಶಗಳಲ್ಲಿ ಸೀಮಿತವಾಗುವುವು. ಇದು ಅವರಿಗೆ ಮಾತ್ರ ಸಂಬಂಧಿಸಿದ ಪ್ರಶ್ನೆಯಾಗಿದೆ. ಅವರಿಗೆ ತಾವು (ಎಂದರೆ ಅಭಿವೃದ್ಧಿ ಹೊಂದಿದ ದೇಶಗಳು) ಪ್ರಶ್ನೆಗಳನ್ನು ಪರಿಹರಿಸುವ ಮತ್ತು ಶಾಂತಿಯನ್ನು ಸ್ಥಾಪಿಸುವ ಹೆಸರಿನಲ್ಲಿ ಸಹಾಯವನ್ನು ನೀಡುವುದನ್ನು ಮುಂದುವರಿಸುವೆವು.

ವಾಸ್ತವಿಕ ವಿಷಯವೇನೆಂದರೆ, ನ್ಯಾಯವನ್ನು ಸ್ಥಾಪಿಸಲು ಸಹಾಯ ಮಾಡುವ ನೆವನದಲ್ಲಿ ಅವರು ತಮ್ಮ ಮೇಧಾವಿತ್ವವನ್ನು ಸ್ಥಾಪಿಸಲು ಮತ್ತು ಆ ಅಭಿವೃದ್ಧಿ ಹೊಂದದ ದೇಶಗಳ ಸಾಧನ ಸಂಪತ್ತುಗಳ ಮೇಲೆ ಸ್ವಾಧೀನ ಹೊಂದಲು ಬಯಸುತ್ತಿದ್ದಾರೆ.

ನಿಶ್ಚಯವಾಗಿಯೂ ಕೆಲವು ಮಹಾಶಕ್ತಿ ರಾಷ್ಟ್ರಗಳು ಮತ್ತು ಧರ್ಮ ವಿರೋಧಿ ಶಕ್ತಿಗಳು ಬಹಳ ತಪ್ಪು ಗ್ರಹಿಕೆ ಹೊಂದಿದ್ದುವು. ಆದರೆ ಇದು ಕೇವಲ ಮುಸ್ಲಿಮ್ ಲೋಕಕ್ಕೆ ಮಾತ್ರ ಸಂಬಂಧಿಸಿದ ಸಮಸ್ಯೆ ಅಲ್ಲ ಎಂದು ಕಾಲವು ಪ್ರಕಟಿಸಿದೆ. ತೀವ್ರವಾದಿ ಮತ್ತು ಭೀಕರವಾದಿ ಮನೋಭಾವ ಇಸ್ಲಾಮೀ ಲೋಕಕ್ಕೆ ಸೀಮಿತಗೊಂಡಿಲ್ಲ. ಅದು ಪಶ್ಚಿಮದ ದೇಶಗಳಿಗೆ ಮತ್ತು ಅಭಿವೃದ್ಧಿ ಹೊಂದಿದ ಲೋಕಕ್ಕೆ ಚೆಲ್ಲಲ್ಪಟ್ಟಿರುವುದು ವಾಸ್ತವಿಕವಾಗಿದೆ. ಅದು ಅವರನ್ನು ಬಹಳ ಹೆದರಿಕೆಗೆ ಗುರಿಪಡಿಸಿದ್ದು ತಮ್ಮ ಮೇಲೆ ಉಂಟಾಗುವ ಭೀಕರ ಪರಿಣಾಮಗಳ ಬಗ್ಗೆ ಅವರು ಆತಂಕಿತರಾಗಿದ್ದಾರೆ.

ಕಳೆದ ಕೆಲವು ವರ್ಷಗಳಲ್ಲಿ ಲೋಕವು ಅಶಾಂತಿಯ ಸ್ಥಿತಿಯಲ್ಲಿರುವ ವಾಸ್ತವಿಕತೆ ಬಗ್ಗೆ ನಾನು ಅವರ ಗಮನವನ್ನು ಸೆಳೆಯುತ್ತಾ ಇದ್ದೆನು. ಲೋಕದ ಒಂದು ಚಿಕ್ಕ ಭಾಗ ಮಾತ್ರ ಭೀಕರತೆಯಿಂದ ಪ್ರಭಾವಿತವಾಗಿದೆ ಎಂದು ಭಾವಿಸುವುದು ಈಗ ತಪ್ಪಾಗಿದೆ. ಬಹುಸಂಖ್ಯಾತರು ನನ್ನ ಮಾತುಗಳನ್ನೂ ವಿವರಣೆಗಳನ್ನೂ ಅಂಗೀಕರಿಸಿದರೂ ಅನಂತರ ಅವರು, ಅಭಿವೃದ್ಧಿ ಹೊಂದಿದ ದೇಶಗಳು ನಾನು ವಿವರಿಸಿದ ಭೀಕರ ಪರಿಣಾಮಗಳಿಗೆ ಗುರಿಯಾಗಲಾರವು ಎಂದು ಹೇಳಿದರು. ಆದರೆ ಈಗ ಅವರ ನಾಯಕರು ಮತ್ತು ಜಾಗತಿಕ ಪರಿಸ್ಥಿತಿಯನ್ನು ಗಾಢವಾಗಿ ಅವಲೋಕನ ಮಾಡುವವರು ಹೇಳುವುದೇನೆಂದರೆ, ಅಭಿವೃದ್ಧಿ ಹೊಂದಿದ ದೇಶಗಳು ಸಹ ನಮ್ಮ ಮುಂದಿರುವ ಈ ಅಸ್ತವ್ಯಸ್ತತೆಯಿಂದಲೂ ಭಯಾನಕ ಸ್ಥಿತಿಯಿಂದಲೂ ಸುರಕ್ಷಿತವಾಗಿಲ್ಲ. ಬ್ರಿಟಿಷ್ ಪ್ರಧಾನ ಮಂತ್ರಿಯವರ ಹೇಳಿಕೆ ಈ ಅಪಾಯಕರ ಅವಸ್ಥೆಯನ್ನು ಪ್ರಸ್ತಾಪಿಸುತ್ತದೆ. ಆಸ್ಟ್ರೇಲಿಯದ ವಿದೇಶಕಾರ್ಯ ಮಂತ್ರಿ ಇದೇ ರೀತಿಯ ಆತಂಕವನ್ನು ಪ್ರಕಟಿಸಿದ್ದಾರೆ. ಯುನೈಟೆಡ್ ಕಿಂಗ್‌ಡಮಿನ ಮಾಜಿ ಸೇನಾಧಿಪತಿ ಸಹ ಇಂತಹ ಅಭಿಪ್ರಾಯಗಳನ್ನು ಹೇಳಿದ್ದಾರೆ. ವಿವಿಧ ಪತ್ರಿಕೆಗಳೂ ಇದರ ಬಗ್ಗೆ ಬರೆಯಲು ತೊಡಗಿವೆ. ವಾಸ್ತವಿಕವಾಗಿ ಇಂದಿನ ಲೋಕ ಕ್ರೂರತೆ ಮತ್ತು ಅವ್ಯವಸ್ಥೆಯಿಂದ ಆವರಿಸಲ್ಪಟ್ಟಿದೆ. ಅಭಿವೃದ್ಧಿ ಹೊಂದಿದ ಮತ್ತು ಉತ್ತಮ ವಿದ್ಯಾಭ್ಯಾಸ ಗಳಿಸಿದ ವರ್ಗದ ಜನರು ಇದರ ಮೂಲ ಕಾರಣ ಧರ್ಮವೆಂದೂ ಕೆಲವು ಮುಸ್ಲಿಮ್ ಗುಂಪುಗಳ ಕಾರಣದಿಂದ ಅದು ತೀವ್ರ ಸ್ಥಿತಿಗೆ ತಲಪಿದೆ ಎಂದೂ ನಂಬುತ್ತಾರೆ. ಆದರೆ ವಾಸ್ತವಿಕವಾದುದೇನೆಂದರೆ, ಅವರ ಈ ಅಭಿಪ್ರಾಯದ ಮೂಲ ಕಾರಣ ಅವರು ಧರ್ಮದ ಬಗ್ಗೆ ಸರಿಯಾಗಿ ಮನವರಿಕೆ ಮಾಡಿಲ್ಲ. ಈ ಅವ್ಯವಸ್ಥೆಯನ್ನು ಕೊನೆಗೊಳಿಸಲು ನಾವು ಧರ್ಮವನ್ನು ತ್ಯಜಿಸಬೇಕೆಂದು ಲೋಕವು ಭಾವಿಸುತ್ತದೆ ಮತ್ತು ಇದನ್ನು ಪ್ರತಿಪಾದಿಸಲು ಧಾರಾಳ ಪ್ರಚಾರಕಾರ್ಯ ನಡೆಯುತ್ತಿವೆ. ಪತ್ರಿಕೆಗಳು ಮತ್ತು ಸಂಪರ್ಕ ಮಾಧ್ಯಮಗಳು ತಮ್ಮ ಪಾಲಿನ ಕಾರ್ಯ ನಿರ್ವಹಿಸಿ ಹೀಗೆ ಹೇಳುತ್ತವೆ: ಧರ್ಮ ಮನುಷ್ಯನನ್ನು ಅಜ್ಞಾನಿಯನ್ನಾಗಿ ಮತ್ತು ದಡ್ಡನನ್ನಾಗಿ ಮಾಡುತ್ತದೆ ಅಥವಾ ಅವನನ್ನು ಭೀಕರನನ್ನಾಗಿ ಪರಿವರ್ತಿಸುತ್ತದೆ. ಧರ್ಮವನ್ನು ತ್ಯಜಿಸುವ ಮೂಲಕ ಮಾತ್ರ ಪ್ರಗತಿ ಹೊಂದಲು ಸಾಧ್ಯವೆಂದು ಅವು ಹೇಳುತ್ತವೆ. ಸರ್ವ ಶಕ್ತನಾದ ದೇವನಿಂದ ದೂರ ಸರಿಯುವ ಮೂಲಕ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಇಂತಹ ಜನರು ನಂಬುತ್ತಾರೆ. ಈ ಸುಳ್ಳು ಅಭಿಪ್ರಾಯದ ಪ್ರಚಾರದ ಕಾರಣ ದೇವನ ಅಸ್ತಿತ್ವವನ್ನು ನಿರಾಕರಿಸುವವರ ಸಂಖ್ಯೆ ದಿನೇ ದಿನೇ ವರ್ಧಿಸುತ್ತಾ ಇದೆ.

ಆದರೆ ಸತ್ಯವೇನೆಂದರೆ ಲೋಕವು ಅಸ್ತವ್ಯಸ್ತವಾಗಿರುವುದು ಅದು ಸರ್ವಶಕ್ತನಾದ ದೇವನನ್ನು ಮರೆತು ಬಿಟ್ಟ ಕಾರಣದಿಂದಾಗಿವೆ. ಈ ಅಸ್ತವ್ಯಸ್ತತೆ ಸರ್ವಶಕ್ತನಾದ ದೇವನ ಉಪದೇಶಗಳನ್ನು ದುರುಪಯೋಗ ಪಡಿಸಿದುದರಿಂದಾಗಿದೆ ಮತ್ತು ದೇವನ ಹೆಸರನ್ನು ಸ್ವಾರ್ಥ ಲಾಭ ಪಡೆಯಲು ಬಯಸಿದುದರಿಂದಾಗಿದೆ ಅಥವಾ ದೇವನ ಅಸ್ತಿತ್ವವನ್ನು ಸಂಪೂರ್ಣ ನಿರಾಕರಿಸಿದುದರಿಂದಾಗಿದೆ. ವಾಸ್ತವಿಕವಾಗಿ ಇಂತಹ ಜನರು ದೇವನ ಅಸ್ತಿತ್ವವನ್ನು ಲೇವಡಿ ಮಾಡುತ್ತಾರೆ ಮತ್ತು ಎಲ್ಲ ಸಭ್ಯತೆಯ ಗಡಿದಾಟಿ ನಿಂದಿಸುತ್ತಾರೆ.

ಇಂದಿನ ಕಾಲದಲ್ಲಿ ಲೋಕದ ಅವ್ಯವಸ್ಥೆಗೆ ಮುಖ್ಯ ಕಾರಣಗಳು ದೇವನ ಹೆಸರಲ್ಲಿ ಸ್ವಾರ್ಥಲಾಭ ಪಡೆಯುವುದು, ಮನುಷ್ಯರ ಹೃದಯಗಳಲ್ಲಿ ವಾಸ್ತವಿಕ ದೇವಭಯವಿಲ್ಲದಿರುವುದು ಅಥವಾ ದೇವನ ಅಸ್ತಿತ್ವದ ನಿರಾಕರಣೆಗಳೊಂದಿಗೆ ಲೌಕಿಕ ನಿಯಮಗಳಿಗೆ ಮತ್ತು ಸಿದ್ಧಾಂತಗಳಿಗೆ ಆದ್ಯತೆ ನೀಡುವುದಾಗಿದೆ. ಸರ್ವಶಕ್ತನಾದ ಅಲ್ಲಾಹನಿಂದ ಸೃಷ್ಟಿಸಲ್ಪಟ್ಟವನಾದರೂ ಸರ್ವಶಕ್ತನಾದ ಅಲ್ಲಾಹನು ವಿಧಿಸಿದ ಕಾರ್ಯ ವಿಧಾನಗಳು ಮತ್ತು ನ್ಯಾಯಪಾಲನೆಯ ವ್ಯವಸ್ಥೆ ಮನುಷ್ಯ ನಿರ್ಮಿತ ಆಚಾರಗಳಿಗೂ ನ್ಯಾಯಪಾಲನೆ ವ್ಯವಸ್ಥೆಗಳಿಗಿಂತಲೂ ಕೀಳೆಂದು ಮನುಷ್ಯನು ಭಾವಿಸುತ್ತಾನೆ. ಮನುಷ್ಯನು ಕೇಳುತ್ತಾನೆ: ಧಾರ್ಮಿಕ ಜ್ಞಾನವನ್ನೂ ಇಸ್ಲಾಮೀ ಧರ್ಮ ತತ್ವಗಳನ್ನೂ ನಮ್ಮ ಲೌಕಿಕ ಆಚಾರಗಳಿಗೆ, ಲೌಕಿಕ ಆಶಾಭಿಲಾಷೆಗಳಿಗೆ ಮತ್ತು ಲೌಕಿಕ ನಿಯಮಗಳಿಗೆ ಕಾಲಘಟ್ಟಗಳ ಆವಶ್ಯಕತೆಗಳಿಗನುಸಾರವಾಗಿ ಏಕೆ ಅಧೀನ ಗೊಳಿಸಬಾರದು? ಒಬ್ಬ ಯುನಿವರ್ಸಿಟಿ ಪ್ರೊಫೆಸರ್ ಇದೇ ಪ್ರಶ್ನೆ ನನ್ನೊಂದಿಗೆ ಕೇಳಿದ್ದರು.

ನಾವು ನೆನಪಿಡಬೇಕಾದುದೇನೆಂದರೆ ಈ ಪ್ರಶ್ನೆ ಎತ್ತಬೇಕಾದುದು ಧಾರ್ಮಿಕ ತತ್ವಗಳು ಭ್ರಷ್ಟಗೊಂಡಿರುವಾಗ ಮತ್ತು ಮನುಷ್ಯನ ಮೌಲ್ಯಗಳು ಮತ್ತು ಸಿದ್ಧಾಂತಗಳು ಧರ್ಮಗಳ ಮೂಲಭೂತ ಮೌಲ್ಯಗಳಿಗೂ ಸಿದ್ಧಾಂತಗಳಿಗಿಂತಲೂ ಉತ್ತಮವೆಂದು ಸಾಬೀತಾದಾಗ ಮಾತ್ರವಾಗಿದೆ. ಆದರೆ ನಾವು ನಂಬುವುದೇನೆಂದರೆ ಕಳೆದ ಹದಿನಾಲ್ಕು ನೂರು ವರ್ಷಗಳ ಕಾಲ ಸುರಕ್ಷಿತವಾಗಿರಿಸಲ್ಪಟ್ಟಿರುವ ಗ್ರಂಥ ಪ್ರತಿಪಾದಿಸುವ ತತ್ವಗಳು ಎಲ್ಲ ರೀತಿಗಳಲ್ಲೂ ಸರ್ವಶ್ರೇಷ್ಠವಾಗಿದೆ. ಅದು ಎಲ್ಲ ಕಾಲಗಳಲ್ಲೂ ಮನುಷ್ಯರು ಅನುಷ್ಠಾನಕ್ಕೆ ತರಬಹುದಾದ ಜೀವಿತದ ಪರಿಪೂರ್ಣ ಮಾರ್ಗದರ್ಶಿ ನಿಯಮ ಸಂಹಿತೆಯಾಗಿದೆ. ವಿಶ್ವದ ಒಡೆಯನಾದ ಮತ್ತು ಸರ್ವಜ್ಞನಾದ ಅಲ್ಲಾಹನು ಅದನ್ನು ಅವತೀರ್ಣಗೊಳಿಸಿರುವನು. ಅದು ಮನುಷ್ಯ ನಿರ್ಮಿತ ನಿಯಮಗಳಿಗೆ ಅಧೀನವಾಗುವುದರ ಆವಶ್ಯಕತೆ ಏನಿದೆ?

ಧರ್ಮದ ಉದ್ದೇಶ ಜನರು ಅದನ್ನು ಅನುಸರಿಸಬೇಕು ಎಂದಾಗಿದೆ. ಅದು ಲೋಕವನ್ನೂ ಜನರನ್ನೂ ಅನುಸರಿಸುವುದಿಲ್ಲ. ಇಂದು ಎಲ್ಲ ಜನರಿಗೂ ಆವಶ್ಯಕವಾದ ಧರ್ಮ ಇಸ್ಲಾಮ್ ಆಗಿದೆ ಮತ್ತು ಪವಿತ್ರ ಖುರ್‌ಆನ್ ಎಲ್ಲ ಜನರಿಗೂ ಎಲ್ಲ ಕಾಲಗಳಲ್ಲೂ ಮಾರ್ಗದರ್ಶನ ನೀಡುವ ಗ್ರಂಥವಾಗಿದೆ. ಆದರೆ ಶರತ್ತೇನೆಂದರೆ ಮನುಷ್ಯನು ಅದನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ಇಂದಿನ ಕಾಲದಲ್ಲಿ ಲೋಕದಲ್ಲಿ ಹಕ್ಕುಗಳನ್ನು ಕಿತ್ತುಗೊಳ್ಳಲಾಗುತ್ತಿದೆ. ಅದಕ್ಕೆ ಕಾರಣ ಧರ್ಮವಲ್ಲ. ಬದಲಾಗಿ, ಲೌಕಿಕ ನಿಯಮ ಮತ್ತು ಧರ್ಮದ ಹೆಸರಿನಲ್ಲಿ ಅನ್ಯರನ್ನು ಮೋಸಗೊಳಿಸುವ ಜನರಾಗಿದ್ದಾರೆ. ಇಂದಿನ ಕಾಲದಲ್ಲಿ ಲೋಕದಲ್ಲಿ ಯುದ್ಧಗಳ ಮೂಲಕ ನಡೆಸಲ್ಪಡುವ ಅನ್ಯಾಯಭರಿತ ಕೃತ್ಯಗಳಿಗೆ ಕಾರಣ ಧರ್ಮವಲ್ಲ. ಲೌಕಿಕ

ಲಾಭಗಳಿಸಲು ಪ್ರಯತ್ನಿಸುವವರಿಂದ ಆ ಅನ್ಯಾಯ ಕೃತ್ಯಗಳು ನಡೆಸಲ್ಪಡುತ್ತವೆ. ಸ್ವಾತಂತ್ರ್ಯದ ಹೆಸರಲ್ಲಿ ಜಾರಿಯಲ್ಲಿರುವ ಅಶ್ಲೀಲ ಕೃತ್ಯಗಳಿಗೆ ಮತ್ತು ಆಘಾತಕರ ಅಸಭ್ಯ ದೃಶ್ಯಗಳಿಗೆ ಧಾರ್ಮಿಕ ಉಪದೇಶಗಳು ಕಾರಣವಾಗಿಲ್ಲ. ಅವುಗಳಿಗೆ ಕಾರಣ ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳನ್ನು ನಾಶಗೊಳಿಸಿ ನಿರ್ಮಿಸಲ್ಪಟ್ಟ ಮಾನವ ನಿಯಮಗಳಿಂದುಂಟಾದ ಮಾನವರ ಅವನತಿಯಾಗಿದೆ. ತನ್ನ ಶಕ್ತಿ ಸಾಮರ್ಥ್ಯ ಮತ್ತು ಶ್ರೇಷ್ಠತೆಗಳನ್ನು ಪ್ರಕಟಿಸುವುದು ಅಲ್ಲಾಹನ ಉಪದೇಶಕ್ಕನುಸಾರವಾಗಿರುವ ವರ್ತನೆಯಲ್ಲ. ಅದು ಮನುಷ್ಯನ ಸ್ವಂತ ಆವಿಷ್ಕಾರವಾಗಿದೆ. ಮನುಷ್ಯನು ತಾನು ಎಲ್ಲದಕ್ಕಿಂತಲೂ ಶ್ರೇಷ್ಠನೆಂದು ಭಾವಿಸುತ್ತಾನೆ.

ನಾವು ಇಂದು ಲೋಕದಲ್ಲಿ ಕಾಣುತ್ತಿರುವ ದೃಶ್ಯಗಳಿಗೆ ಕಾರಣ ಮನುಷ್ಯನು ತನ್ನನ್ನು ಅತ್ಯಂತ ಬುದ್ಧಿವಂತನೆಂದು ಗಣಿಸುತ್ತಾ ಇರುವುದರಿಂದಾಗಿದೆ ಮತ್ತು ಅವನು ದೇವ ಸಂದೇಶವಾಣಿ ಎಂಬ ಪ್ರಕಾಶದಿಂದ ವಿರಹಿತನಾದುದರಿಂದಾಗಿದೆ. ಲೋಕದ ಈ ಪರಿಸ್ಥಿತಿಯ ಸ್ಪಷ್ಟ ಚಿತ್ರಣವನ್ನು ಪವಿತ್ರ ಖುರ್‌ಆನ್ ಈ ಕೆಳಗಿನಂತೆ ನೀಡಿದೆ:

ظَهَرَ الْفَسَادُ فِي الْبَرِّ وَالْبَحْرِ بِمَا كَسَبَتْ أَيْدِي النَّاسِ لِيُذِيقَهُمْ
بَعْضَ الَّذِي عَمِلُوا لَعَلَّهُمْ يَرْجِعُونَ

"ಮನುಷ್ಯರ ದುಷ್ಕೃತ್ಯಗಳ ಪರಿಣಾಮವಾಗಿ ನೆಲದಲ್ಲೂ ಜಲದಲ್ಲೂ ಗಲಭೆ ಗೊಂದಲ ಗೋಚರಿಸಿದೆ. ಅವರು ತಮ್ಮ ದುಷ್ಕೃತ್ಯಗಳನ್ನು ತೊರೆಯಲಿಕ್ಕೋಸ್ಕರ, ಅವರ ಕೆಲವು ಕೃತ್ಯಗಳ ಫಲಗಳನ್ನು ಅವರು ಅನುಭವಿಸುವಂತೆ ಅವನು (ಅಲ್ಲಾಹನು) ಮಾಡುತ್ತಾನೆ." (30:42)

ಮನುಷ್ಯನಿಂದ ಮಾಡಲ್ಪಟ್ಟ ಈ ಪಾತಕದ ಪರಿಣಾಮಗಳಿಂದ ಐಶ್ವರ್ಯವಂತರಾಗಲೀ ಬಡವರಾಗಲೀ ಸುರಕ್ಷಿತರಲ್ಲ. ಧಾರ್ಮಿಕರೂ (ಎಂದರೆ ಧಾರ್ಮಿಕರೆಂದು ಹೇಳಿಕೊಳ್ಳುವವರು) ಧರ್ಮ ರಹಿತರೂ ಸುರಕ್ಷಿತರಲ್ಲ. ಇಂತಹ ಸಂದರ್ಭಗಳಲ್ಲಿ ಮನುಷ್ಯನು ಸರ್ವಶಕ್ತನಾದ ದೇವನಿಂದ ಹಿಡಿಗೂಡಲ್ಪಡುವನು ಮತ್ತು ಶಿಕ್ಷಿಸಲ್ಪಡುವನು ಎನ್ನುವುದು ಸ್ಪಷ್ಟವಾಗಿದೆ. ಸರ್ವಶಕ್ತನಾದ ಸೃಷ್ಟಿಕರ್ತನಿಂದ ದೂರಸರಿದು ಹೋದುದರ ಸಹಜ ಪರಿಣಾಮ ಇದಾಗಿರುತ್ತದೆ. ಇದರ ಪರಿಣಾಮವಾಗಿ ಸರ್ವಶಕ್ತನಾದ ದೇವನಿಂದ ಶಿಕ್ಷೆ ಬಂದೆರಗುತ್ತದೆ. ಮನುಷ್ಯರ ಕೃತ್ಯಗಳಿಗೆ ಪರಲೋಕದಲ್ಲಿ ನೀಡುವ ಶಿಕ್ಷೆಯ ಬಗ್ಗೆ ಸರ್ವಶಕ್ತನಾದ ದೇವನಿಗೆ ಮಾತ್ರ ತಿಳಿದಿದೆ. ಅವನು ಅದನ್ನು ವಿಧಿಸುವ ಉತ್ತಮ ನ್ಯಾಯಾಧೀಶನಾಗಿದ್ದಾನೆ.

ಆದರೆ ದೇವನು ತನ್ನ ಸೃಷ್ಟಿಗಳಿಗೆ ಶಿಕ್ಷೆ ನೀಡುವುದರಲ್ಲಿ ಎಂದೂ ಸಂತೋಷಪಡುವುದಿಲ್ಲ. ತನ್ನ ಸೃಷ್ಟಿ ಸರಿಯಾದ ಮಾರ್ಗದಲ್ಲಿ ಸಾಗುತ್ತಾ ಅವ್ಯವಸ್ಥೆಯಿಂದ ದೂರ ಸರಿಯುತ್ತಾ ಇರುವುದನ್ನು ಕಾಣುವಾಗ ಅವನು, ಮಗುವನ್ನು ಅಪಾಯಕರ ಸಂದರ್ಭದಲ್ಲಿ ಕಳೆದುಕೊಂಡು ನಂತರ ಮರಳಿ ಪಡೆದ ತಾಯಿಗಿಂತ ಹೆಚ್ಚು ಸಂತೋಷಪಡುತ್ತಾನೆ. ತನ್ನ ಕಾಣೆಯಾದ ಮಗುವಿಗೋಸ್ಕರ ತಾಯಿ ಹುಚ್ಚು ಹಿಡಿದವಳ ಹಾಗೆ ಹುಡುಕುತ್ತಾಳೆ. ಅವಳು ಪ್ರತೀಕ್ಷೆ ಮತ್ತು ನಿರಾಶೆಯಿಂದ ಭರಿತಳಾಗಿ ಹುಡುಕುತ್ತಾಳೆ. ತನ್ನ ಮಗು ಜೀವದಿಂದಿದೆಯೋ ಇಲ್ಲವೋ ಎಂದು ಮರುಗುತ್ತಾಳೆ. ಆಗ ಥಕ್ಕನೆ ಮಗುವನ್ನು ಕಾಣುತ್ತಾಳೆ ಮತ್ತು ಅದನ್ನು ತಬ್ಬಿಕೊಳ್ಳುತ್ತಾಳೆ. ಆದರೆ ದೇವನು ತನ್ನ ಸೃಷ್ಟಿಗಳನ್ನು ಇದಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತಾನೆ. ಮನುಷ್ಯನು ದೇವನ ಕಡೆಗೆ ಸಾಗುವಾಗ ದೇವನು ಆ ತಾಯಿಗಿಂತ ಹೆಚ್ಚು ಸಂತೋಷಭರಿತನಾಗುತ್ತಾನೆ. ಸರ್ವಶಕ್ತನಾದ ದೇವನು ತನ್ನ ಈ ಪ್ರೀತಿಯ ಕಾರಣದಿಂದ ತನ್ನ ಪ್ರವಾದಿಗಳನ್ನು ಮತ್ತು ಸಂದೇಶ ವಾಹಕರನ್ನು ಲೋಕಕ್ಕೆ ಸುಧಾರಣೆಗೆ ಕಳುಹಿಸುತ್ತಾನೆ. ಅವರು ಸರಿಯಾದ ಮಾರ್ಗ ತೋರಿಸಿಕೊಡುತ್ತಾರೆ. ಆ ಮೂಲಕ ಲೋಕವು ನಾಶದಿಂದ ರಕ್ಷಿಸಲ್ಪಡುತ್ತದೆ ಹಾಗೂ ತಪ್ಪು ಕೃತ್ಯಗಳಿಂದ ಮತ್ತು ಅವ್ಯವಸ್ಥೆಗಳಿಂದ ದೊರಕುವ ಶಿಕ್ಷೆಯಿಂದಲೂ ರಕ್ಷಿಸಲ್ಪಡುತ್ತದೆ. ಸರ್ವಶಕ್ತನಾದ ದೇವನು ತನ್ನ ಜನರು ಅಗ್ನಿಕುಂಡಕ್ಕೆ ಬೀಳದಂತೆ ರಕ್ಷಿಸಲು ಬಯಸುತ್ತಾನೆ. ಅಗ್ನಿಕುಂಡಕ್ಕೆ ಬೀಳದಂತೆ ರಕ್ಷಿಸಲು ಮಾತ್ರವಲ್ಲ, ಅದರೊಂದಿಗೆ ಅವರಿಗೆ ಪಾರಿತೋಷಕಗಳನ್ನು ಸಹ ನೀಡಲು ಬಯಸುತ್ತಾನೆ.

ಈ ಪರಿಸ್ಥಿತಿಯ ಬಗ್ಗೆ ಮತ್ತು ಈ ಕಾಲಘಟ್ಟದ ಬಗ್ಗೆ ವಾಗ್ದತ್ತ ಮಸೀಹ್[ಅ] ಹೀಗೆ ಹೇಳಿದ್ದಾರೆ: "ಈ ಸಂದರ್ಭದಲ್ಲಿ ಮನುಷ್ಯರು ಆಧ್ಯಾತ್ಮಿಕ ಜಲಕ್ಕೋಸ್ಕರ ಆಶಿಸುವರು. ಆದರೆ ಭೂಮಿ ಸಂಪೂರ್ಣವಾಗಿ ಬರಡು ಮತ್ತು ಜೀವರಹಿತವಾಗಿರುವುದು. ಇದು ಎಂತಹ ಕಾಲವನ್ನು ಸೂಚಿಸುತ್ತದೆ ಎಂದರೆ ಅದರ ಬಗ್ಗೆ ಹೀಗೆ ಹೇಳಲಾಗಿದೆ: ظَهَرَ الْفَسَادُ فِي الْبَرِّ وَالْبَحْرِ 'ನೆಲದಲ್ಲೂ ಜಲದಲ್ಲೂ ಗಲಭೆ ಗೊಂದಲ ಗೋಚರಿಸಿದೆ.' (30:42). ಈ ವಚನದಲ್ಲಿ ನೆಲ ಎಂದು ಹೇಳಿದುದು ಅವಿಶ್ವಾಸಿಗಳ ಬಗ್ಗೆ ಮತ್ತು ಜಲ ಎಂದು ಹೇಳಿದುದು ಗ್ರಂಥ ನೀಡಲ್ಪಟ್ಟವರ ಬಗ್ಗೆಯಾಗಿದೆ. ಇದರ ಅರ್ಥ ಅಜ್ಞಾನಿಗಳಾದ ಜನರು ಮತ್ತು ವಿದ್ಯಾವಂತರಾದವರು ಎಂದು ಸಹ ಆಗಬಹುದಾಗಿದೆ. ಆದುದರಿಂದ ಸಮಾಜದ ಎಲ್ಲ ವರ್ಗಗಳಲ್ಲೂ ಇರುವ ಅವ್ಯವಸ್ಥೆಯನ್ನು ಈ ವಚನ ಸೂಚಿಸುತ್ತದೆ. ನೀವು ಲೋಕದ ಯಾವ ಪಾರ್ಶ್ವದ ಕಡೆಗೆ ನೋಡಿದರೂ ಅದು ಬದಲಾವಣೆ ಹೊಂದಿರುವುದಾಗಿ ನೀವು ಕಾಣುವಿರಿ. ಆಧ್ಯಾತ್ಮಿಕತೆ ಅಸ್ತಿತ್ವದಲ್ಲಿಯೇ ಇರುವುದಿಲ್ಲ ಮತ್ತು ಅದರ ಪ್ರಭಾವ ಎಲ್ಲಿಯೂ ಕಾಣಿಸುವುದಿಲ್ಲ. ಯುವ ಜನರೂ ವೃದ್ಧರೂ ಎಲ್ಲರೂ ದುಶ್ಶೀಲತೆಯಲ್ಲಿ ಮುಳುಗಿದ್ದಾರೆ. ದೇವಾರಾಧನೆ ಮತ್ತು ಅವನ ಅಸ್ತಿತ್ವದ ಬಗ್ಗೆ ವಿಶ್ವಾಸ ಸಂಪೂರ್ಣವಾಗಿ ಅಳಿಸಿ ಹೋಗಿದೆ. ಆಕಾಶದ ಜಲ ಮತ್ತು ಪ್ರವಾದಿತ್ವದ ಆಧ್ಯಾತ್ಮಿಕ ಪ್ರಕಾಶ ಇಳಿದು ಬರಬೇಕಾದ ಸೂಕ್ತ ಕಾಲ ಇದಾಗಿದೆ. ಇಚ್ಛಿಸುವವರ ಹೃದಯಗಳನ್ನು ಅದು ಬೆಳಗಿಸುವುದು. ಸರ್ವಶಕ್ತನಾದ ದೇವನಿಗೆ ಕೃತಜ್ಞತೆ ಅರ್ಪಿಸಿರಿ. ಅವನು ತನ್ನ ಅನುಗ್ರಹದ ಮೂಲಕ ತನ್ನ ಆಧ್ಯಾತ್ಮಿಕ ಪ್ರಕಾಶವನ್ನು ಈ ಕಾಲಘಟ್ಟದಲ್ಲಿ ಕಳುಹಿಸಿರುವನು. ಆದರೆ ಈ ಆಧ್ಯಾತ್ಮಿಕ ಬೆಳಕಿನಿಂದ ಲಾಭಗಳಿಸುವವರು ಕಡಿಮೆ ಜನರು ಮಾತ್ರ."

(ಮಲ್‌ಫೂಝಾತ್– ಸಂಪುಟ 4, ಪುಟ 444)

ಮಾನವರನ್ನು ರಕ್ಷಿಸಲು ಸರ್ವೋನ್ನತನಾದ ದೇವನು ತನ್ನ ನಡೆವಳಿಕೆ ಪ್ರಕಾರ ವರ್ತಿಸುತ್ತಾನೆ. ಮಾನವರಿಗೆ ಮಾರ್ಗದರ್ಶನ ನೀಡಲು ಮತ್ತು ಅವ್ಯವಸ್ಥೆಗಳಿಂದ ಅವರನ್ನು ರಕ್ಷಿಸಲು ಸರ್ವಶಕ್ತನಾದ ದೇವನು ತನ್ನ ಸಂದೇಶವಾಹಕರನ್ನು ಕಳುಹಿಸುತ್ತಾ ಇರುತ್ತಾನೆ. ಈ ಕಾಲಘಟ್ಟದಲ್ಲಿ ದೇವನು ವಾಗ್ದತ್ತ ಮಸೀಹರನ್ನು (ಖಾದಿಯಾನಿನ ಮಿರ್ಝಾ ಗುಲಾಮ್ ಅಹ್ಮದರನ್ನು) ಕಳುಹಿಸಿದ್ದಾನೆ. ಇಂದಿನ ಲೋಕದ ಸ್ಥಿತಿ ತೋರಿಸುವುದೇನೆಂದರೆ ಮುಸ್ಲಿಮರ ಸ್ಥಿತಿ ದುರವಸ್ಥೆಗೆ ತಲಪಿದೆ – ಒಬ್ಬ ಭಾಷಣಕಾರ ಒಂದು ನಿರ್ದಿಷ್ಟ ದೇಶಕ್ಕೆ ಸಂಬಂಧಿಸಿ ಹೀಗೆ ಹೇಳಿದ್ದಾರೆ – ಇದೇ ರೀತಿ ಇತರ ಧರ್ಮಗಳ ಜನರು ಮತ್ತು ಧರ್ಮವನ್ನು ಅನುಸರಿಸದ ಜನರು ಸಹ ದುರವಸ್ಥೆಗೆ ತಲಪಿದ್ದಾರೆ. ಲೋಕವು ಜಲ ಎಂದು ತಾನು ಭಾವಿಸುವುದರ ಕಡೆಗೆ ಓಡುತ್ತಿವೆ. ಆದರೆ ಅದು ಜಲವಾಗಿರದೆ ಮರೀಚಿಕೆಯಾಗಿದೆ. ಸರ್ವಶಕ್ತನಾದ ದೇವನಿಂದ ಇಳಿಸಲ್ಪಟ್ಟುದೇ ವಾಸ್ತವಿಕ ಜಲ ಮತ್ತು ಆಧ್ಯಾತ್ಮಿಕ ಬೆಳಕು ಆಗಿರುತ್ತವೆ. ಮುಸ್ಲಿಮ್ ಲೋಕ ಮತ್ತು ಉಳಿದ ಲೋಕ ಕೃತಜ್ಞತೆ ಹೊಂದಬೇಕು ಮತ್ತು ಈ ಆಧ್ಯಾತ್ಮಿಕ ಬೆಳಕಿನಿಂದ ಮಾರ್ಗದರ್ಶನ ಪಡೆಯಬೇಕು ಹಾಗೂ ಈ ಜಲಾಶಯದಿಂದ ನೀರು ಕುಡಿಯಬೇಕು. ಆದರೆ ಅವರು ಅದಕ್ಕೆ ಬದಲಾಗಿ ಅಂಧಕಾರದಲ್ಲಿ ಮುಳುಗಿದ್ದಾರೆ ಮತ್ತು ಕೊಳಕು ಹೊಂಡಗಳಿಂದ ನೀರನ್ನು ಕುಡಿಯುತ್ತಿದ್ದಾರೆ. ದುರದೃಷ್ಟಕರವಾಗಿ ಮುಸ್ಲಿಮರು ಪವಿತ್ರ ಪೈಗಂಬರರ(ಸ) ಸತ್ಯಸಂಧ ದಾಸನಾದ ವಾಗ್ದತ್ತ ಮಸೀಹರ(ಅ) ಕಡೆಗೆ ಯಾವ ಗಮನವನ್ನೂ ಕೊಡುವುದಿಲ್ಲ. ಕೊಳಕು ನೀರನ್ನು ಶುದ್ಧವೆಂದು ಭಾವಿಸಿ ಅವರು ದ್ವೇಷಾಸೂಯೆ ಭರಿತ ಮತಪಂಡಿತರ ಉಪದೇಶಗಳನ್ನು ಅನುಸರಿಸುತ್ತಾರೆ. ಅನ್ಯರು ಸಹ ಸತ್ಯ ಧರ್ಮವನ್ನು ಗುರುತಿಸಲು ಪ್ರಯತ್ನಿಸದೆ ನೆವನಗಳನ್ನು ಹೇಳುತ್ತಾರೆ. ಇದರ ಪರಿಣಾಮವಾಗಿ ಇಂದು ಲೋಕ ಧಾರ್ಮಿಕ ವಿಶ್ವಾಸವನ್ನು ತ್ಯಜಿಸುತ್ತಾ ಇದೆ. ಅವರು ಸರ್ವಶಕ್ತನಾದ ದೇವನ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ. ಮುಸ್ಲಿಮರಲ್ಲಿ ಬಹುತೇಕ ಜನರು ತಾವು ಮುಸ್ಲಿಮರೆಂದು ದೃಢವಾಗಿ ವಾದಿಸುತ್ತಾರೆ. ಆದರೆ ಅವರ ಮತಪಂಡಿತರು ಅವರ ಬುದ್ಧಿಯನ್ನು ಕೆಡಿಸಿ ಅವರ ವಿದ್ಯಾಭ್ಯಾಸವನ್ನು ಮತ್ತು ಆಚಾರಗಳನ್ನು ಹಾಳು ಮಾಡಿದ್ದಾರೆ. ಇದು ನಾನು ಅವರ ವಿರುದ್ಧ ಮಾಡುವ ಒಂದು ಆಕ್ಷೇಪವಲ್ಲ. ಇದು ಎಲ್ಲರಿಗೂ ಕಾಣಿಸುವ ಸತ್ಯವೇ ಆಗಿದೆ. ಮುಸ್ಲಿಮ್ ಲೋಕದಲ್ಲಿರುವ ಅವ್ಯವಸ್ಥೆ, ರಕ್ತಪಾತ, ಧರ್ಮದ ಹೆಸರಿನಲ್ಲಿ, ದೇವನ ಹೆಸರಲ್ಲಿ ಅಥವಾ ಪೈಗಂಬರರ(ಸ) ಹೆಸರಿನಲ್ಲಿ ಮಾಡುತ್ತಿರುವ ಭೀಕರ ಕೃತ್ಯಗಳು ಎಲ್ಲರಿಗೂ ಕಾಣಿಸುತ್ತಿವೆ. ಸರಕಾರಗಳು ತಮ್ಮ ಪ್ರಜೆಗಳ ವಿರುದ್ಧ ಮಾಡುತ್ತಿರುವ ಅನ್ಯಾಯಭರಿತ ಕ್ರಮಗಳು, ಪ್ರಜೆಗಳ ವಿದ್ರೋಹಕರ ಕೃತ್ಯಗಳು ಮತ್ತು ಅವರು ಮಾಡುವ ಅನ್ಯಾಯಗಳು ಇದಕ್ಕೆ ಪುರಾವೆಯಾಗಿವೆ. ಜನರು ತಮ್ಮ ಮತ ಪಂಡಿತರಿಂದ ಮಾರ್ಗದರ್ಶನ ಪಡೆಯಲು ಬಯಸುವಾಗ ಆ ಮತಪಂಡಿತರಲ್ಲಿ ಸ್ವಾರ್ಥ ಅಭಿಲಾಷೆಗಳ ಹೊರತು ಬೇರೆ ಏನನ್ನೂ ಕಾಣುವುದಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯ ನುಡಿಗಳು ಅಕ್ಷರಶಃ ಈಡೇರಿದುದಾಗಿ ನಾವು ಕಾಣುತ್ತೇವೆ. ಅವರು ಹೀಗೆ ಹೇಳಿದ್ದರು: ''ಮತಪಂಡಿತರಿಂದ ಗಲಭೆಗೊಂದಲಗಳ ಹೊರತು ಬೇರೆ ಏನೂ ಪ್ರತೀಕ್ಷಿಸಲು ಸಾಧ್ಯವಿಲ್ಲ. ಅವರ ಮಾತು ಮತ್ತು ಕೃತ್ಯಗಳಲ್ಲಿ ವೈರುದ್ಧ್ಯವಿರುವುದು. ಅಜ್ಞಾನ ಮತ್ತು ಒಡಕಿನ ಹೊರತು ಬೇರೆ ಏನನ್ನೂ ಅವರಿಂದ ಗಳಿಸಲು ಸಾಧ್ಯವಿಲ್ಲ.''

(ಅಲ್ ಜಾಮಿಇ ಲಿಶುಅಬಿಲ್ ಈಮಾನ್)

ಇಂದಿನ ಕಾಲದ ಮತಪಂಡಿತರ ಹೇಳಿಕೆಗಳು ಮತ್ತು ನಡೆವಳಿಕೆಗಳು ಹಝ್ರತ್ ಪೈಗಂಬರರ(ಸ) ಸತ್ಯತೆಗೆ ಸಾಕ್ಷ್ಯಗಳಾಗಿವೆ. ಮುಸ್ಲಿಮರು ನೈತಿಕ ಅಧಃಪತನಕ್ಕೆ ಈಡಾಗಿದ್ದಾರೆ. ವಿಶ್ವಾಸಕ್ಕೆ ಸಂಬಂಧಿಸಿ ಅವರ ಅವನತಿ ಸ್ಪಷ್ಟವಾಗಿ ಕಾಣಿಸುತ್ತದೆ. ಸಾಮಾನ್ಯ ಮುಸ್ಲಿಮರ ಸ್ಥಿತಿ ಹೇಗಿದೆ ಎಂದು ಅವರ ಮತಪಂಡಿತರು ಅಜ್ಞಾನದಿಂದ ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ಹೊರಡಿಸುವ ಧಾರ್ಮಿಕ ತೀರ್ಪುಗಳಿಂದ ವ್ಯಕ್ತವಾಗುತ್ತದೆ. ಈ ಮತಪಂಡಿತರು ಇಸ್ಲಾಮೀ ನಿಯಮಗಳನ್ನು ತಮ್ಮ ಸ್ವಾರ್ಥಕ್ಕೋಸ್ಕರ ವಿರೂಪಗೊಳಿಸುತ್ತಾ ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುವುದು ಧರ್ಮಬದ್ಧ ಎಂದು ಸಹ ತೀರ್ಪು ನೀಡುತ್ತಾರೆ. ಇಂತಹ ಧಾರ್ಮಿಕ ತೀರ್ಪುಗಳು ಪಾಕಿಸ್ತಾನದಲ್ಲಿ ಈಗ ಸಾಮಾನ್ಯವಾಗಿವೆ. ಏಕೆಂದರೆ ಅವರು ಅಹ್ಮದಿಯರನ್ನು ಇಸ್ಲಾಮಿನಿಂದ ಹೊರಗೆ ಎಂದು ಗಣಿಸುತ್ತಾರೆ. ಅಹ್ಮದಿಯರು ಇಸ್ಲಾಮಿನ ಮೂಲ ಮಂತ್ರವಾದ **ಲಾಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್** (ಅಲ್ಲಾಹನ ಹೊರತು ಅನ್ಯ ದೇವನಿಲ್ಲ. ಮುಹಮ್ಮದ್ ಅವನ ಸಂದೇಶ ವಾಹಕನಾಗಿದ್ದಾರೆ) ಎಂದು ಘೋಷಿಸುತ್ತಾರಾದರೂ ಅವರು ಈ ಮತಪಂಡಿತರ ಪ್ರಕಾರ ಇಸ್ಲಾಮಿನ ಭಾಗವಾಗಿಲ್ಲ. ಆದುದರಿಂದ ಅವರ ಸ್ವತ್ತನ್ನು ಲೂಟಿ ಮಾಡುವುದು ಮತ್ತು ಸ್ವಾಧೀನ ಪಡಿಸಿಕೊಳ್ಳುವುದು ಅವರಿಗೆ ಧರ್ಮಬದ್ಧ ಕೃತ್ಯವಾಗಿದೆ.

ಹೀಗಿದ್ದರೂ ಅಹ್ಮದಿಯೇತರ ಮುಸ್ಲಿಮರು ವಿವಿಧ ಪಂಗಡಗಳಾಗಿ ವಿಭಜಿಸಲ್ಪಟ್ಟಿದ್ದಾರೆ ಮತ್ತು ಅವರ ದ್ವೇಷದ ಅಗ್ನಿ ಅವರನ್ನು ಸುಡುತ್ತಿದೆ. ಮಹೋನ್ನತನಾದ ಅಲ್ಲಾಹನು ಪವಿತ್ರ ಖುರ್ಆನಿನಲ್ಲಿ ಮುಸ್ಲಿಮರ ಬಗ್ಗೆ ಹೀಗೆ ಹೇಳಿದ್ದಾನೆ: رُحَمَآءُ بَيۡنَهُمۡ ಅವರು ಪರಸ್ಪರ ದಯಾರ್ದ್ರರಾಗಿದ್ದಾರೆ. (48:30). ಆದರೆ ಅವರ ಸ್ಥಿತಿ ಹೇಗಿದೆ ಎಂದರೆ ಪ್ರೀತಿ ಮತ್ತು ಭ್ರಾತೃತ್ವ ಪ್ರದರ್ಶಿಸುವುದಕ್ಕೆ ಬದಲಾಗಿ ಅವರು ಒಬ್ಬರಿನ್ನೊಬ್ಬರ ಬಗ್ಗೆ ತೀವ್ರ ದ್ವೇಷವನ್ನು ಹೊಂದಿದ್ದಾರೆ. ಇದರಿಂದ ಸ್ಪಷ್ಟವಾಗುವುದು ಏನೆಂದರೆ ಮುಸ್ಲಿಮರಲ್ಲಿ ಭ್ರಷ್ಟತೆ ವ್ಯಾಪಿಸಿದೆ. ಇಂತಹ ಸಂದರ್ಭದಲ್ಲಿ ಮಹೋನ್ನತನಾದ ಅಲ್ಲಾಹನ ಕರುಣೆ ತನ್ನ ಒಬ್ಬ ಸಂದೇಶವಾಹಕನನ್ನು ಕಳುಹಿಸುವುದನ್ನು ಆವಶ್ಯಪಡುತ್ತದೆ. ಅಲ್ಲಾಹನು ತನ್ನ ನಡೆವಳಿಕೆ ಮತ್ತು ವಾಗ್ದಾನ ಪ್ರಕಾರ ಒಬ್ಬ ಸಂದೇಶ ವಾಹಕನನ್ನು ಕಳುಹಿಸಿದನು. ಆದರೆ ಮತಪಂಡಿತರು ಆ ಸಂದೇಶ ವಾಹಕನನ್ನು ಅಂಗೀಕರಿಸುವುದಕ್ಕೆ ಬದಲಾಗಿ ಮುಸ್ಲಿಮರನ್ನು ದಾರಿ ತಪ್ಪಿಸಿದರು. ಆದುದರಿಂದ ಮುಸ್ಲಿಮರು ತಮ್ಮ ವಿರೋಧವನ್ನು ವರ್ಧಿಸಿದರು. ಅಲ್ಲಾಹನ ಮತ್ತು ಅವನು ಕಳುಹಿಸಿದ ಪವಿತ್ರ

ಪ್ರವಾದಿಯ ಭವಿಷ್ಯವಾಣಿ ಪ್ರಕಾರ ಆಗಮಿಸಿದ ಅಲ್ಲಾಹನಿಂದ ನಿಯೋಜಿತರಾದವರ ಕಡೆಗೆ ಒಗ್ಗೊಟ್ಟು ಎಲ್ಲ ಮುಸ್ಲಿಮರು ಒಗ್ಗೂಡಿ ಏಕ ಸಮುದಾಯವಾಗುವುದಕ್ಕೆ ಬದಲಾಗಿ ಅವರು ಅವ್ಯವಸ್ಥೆಗೂ ಒಡಕಿಗೂ ತುತ್ತಾಗಿ ಪರಸ್ಪರ ರಕ್ತಪಾತ ಮಾಡುವುದರಲ್ಲಿ ನಿರತರಾಗಿದ್ದಾರೆ ಮತ್ತು ಲೋಕದ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತಾ ಇದ್ದಾರೆ. ಇದೇ ಕಾರಣದಿಂದ ಮುಸ್ಲಿಮ್ ವಿರೋಧಿ ಶಕ್ತಿಗಳು ಮುಸ್ಲಿಮರ ಬಲಹೀನ ಸ್ಥಿತಿಯ ಲಾಭ ಪಡೆಯಲು ಸಮರ್ಥ ಆಗಿವೆ. ಅವರು ಇಸ್ಲಾಮನ್ನು ಆಕ್ರಮಣ ಮಾಡುತ್ತಾ ಅದರ ವಿರುದ್ಧ ದೋಷಾರೋಪಗಳನ್ನು ಮಾಡುತ್ತಿದ್ದಾರೆ. ಇಸ್ಲಾಮ್ ಧರ್ಮ ಅರಾಜಕತೆ, ಅವ್ಯವಸ್ಥೆ ಮತ್ತು ತೀವ್ರವಾದದ ಧರ್ಮವೆಂದು ಹೇಳುತ್ತಿದ್ದಾರೆ. ಮುಸ್ಲಿಮೇತರರಿಂದ ಮತ್ತು ಧರ್ಮದಿಂದ ದೂರಸರಿದು ಹೋದವರಿಂದ ಮಾತ್ರ ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸಲು ಸಾಧ್ಯ ಎಂದು ಅವರು ಹೇಳುತ್ತಾರೆ. ಇಸ್ಲಾಮೀ ವಿರೋಧಿ ಶಕ್ತಿಗಳು ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ಹೇಳುತ್ತಾ ಇಲ್ಲವಾದರೂ ಅವರು ತಮ್ಮ ಕುಟಿಲೋಪಾಯಗಳನ್ನು ಬಹಳ ಚಾಣಾಕ್ಷತನದಿಂದ ಜಾರಿಗೊಳಿಸುತ್ತಾರೆ. ಒಂದು ಕಡೆ, ಅವರು ಮುಸ್ಲಿಮರಿಗೆ ಸಹಾನುಭೂತಿ ಪ್ರಕಟಿಸುತ್ತಾರೆ. ಮುಸ್ಲಿಮರೊಂದಿಗೆ ಶಾಂತಿ ಸಂಬಂಧ ಸ್ಥಾಪಿಸಲು ಮತ್ತು ಅರಾಜಕತೆಯನ್ನೂ ಅವ್ಯವಸ್ಥೆಯನ್ನೂ ಮುಸ್ಲಿಮ್ ಲೋಕದಂತೆ ದೂರಸರಿಸಲು ತಮ್ಮ ಸೇವೆಯ ಕೊಡುಗೆ ನೀಡುತ್ತಾರೆ. ಇನ್ನೊಂದು ಕಡೆ, ಅವರು ಇಸ್ಲಾಮ್ ಧರ್ಮವಾಗಲೀ ಮುಸ್ಲಿಮರಾಗಲೀ ಕೆಟ್ಟದಲ್ಲ ಎಂದು ಹೇಳುತ್ತಾರೆ. ಇಸ್ಲಾಮ್ ಭೀಕರವಾದವನ್ನು, ಆಕ್ರಮಣಗಳನ್ನು ಕಲಿಸುವುದಿಲ್ಲ ಎಂದೂ ನಾವು ಒಟ್ಟಿಗೆ ಸೇರಿ ಲೋಕದ ಅವ್ಯವಸ್ಥೆಯನ್ನು ಕೊನೆಗೊಳಿಸಲು ಪ್ರಯತ್ನ ಮಾಡಬೇಕೆಂದೂ ಮುಸ್ಲಿಮ್ ಲೋಕದಲ್ಲಿ ಅದು ಹೆಚ್ಚಿನ ಮಟ್ಟದಲ್ಲಿದೆ ಎಂದೂ ಅವರು ಹೇಳುತ್ತಾರೆ. ಆದರೆ ಭೀಕರ ಕೃತ್ಯಗಳಿಗೆ, ಹಿಂಸಾಚಾರಗಳಿಗೆ ಇಸ್ಲಾಮ್‌ನೊಂದಿಗೆ ಸಂಬಂಧ ಇದೆ ಎಂದೂ ತೀವ್ರವಾದಗಳಿಗೆ ಕಾರಣ ಇಸ್ಲಾಮ್ ಧರ್ಮದ ಉಪದೇಶಗಳೆಂದೂ ಅವರು ಹೇಳುತ್ತಾರೆ. ಇಸ್ಲಾಮನ್ನು ವಿರೋಧಿಸುವ ಶಕ್ತಿಗಳನ್ನು ಮತ್ತು ಅದರ ಜೊತೆ ಮುಸ್ಲಿಮರನ್ನೂ ಅವರು ತುಷ್ಟೀಕರಿಸಲು ಇಚ್ಛಿಸುತ್ತಾರೆ. ಅವರು ಒಬ್ಬ ನಾಯಕನೊಂದಿಗೆ ಒಂದು ಮಾತು ಹೇಳಲು ಉಪದೇಶಿಸುತ್ತಾರೆ ಮತ್ತು ಅದೇ ಸಮಯ ಬೇರೆ ನಾಯಕರು ತದ್ವಿರುದ್ಧ ಹೇಳಿಕೆ ನೀಡಲು ಪ್ರೋತ್ಸಾಹಿಸುತ್ತಾರೆ.

ನಾವು ಅಂತಹ ಜನರಿಗೆ ಹೇಳಲು ಬಯಸುವುದೇನೆಂದರೆ, ಇಸ್ಲಾಮಿನ ಉಪದೇಶಗಳು ಶಾಂತಿ, ಸುರಕ್ಷೆ ಮತ್ತು ಸೌಹಾರ್ದದ ಅಸ್ತಿಭಾರ ಹಾಕುತ್ತವೆ ಮತ್ತು ಅವು ಬೇರೆ ಎಲ್ಲೂ ಕಾಣದಂತಹ ಅದ್ವಿತೀಯ ಉಪದೇಶಗಳಾಗಿವೆ. ಮುಸ್ಲಿಮರ ವಿರುದ್ಧ ಹೇಳಿಕೆ ನೀಡುವವರು ನೆನಪಿಡಬೇಕಾದುದು ಏನೆಂದರೆ ಅವರು ಅಂತಹ ಹೇಳಿಕೆ ನೀಡಿ ತಥಾಕಥಿತ ಇಸ್ಲಾಮೀ ಭೀಕರ ಗುಂಪುಗಳಿಗೆ ಊರ್ಜ ನೀಡುತ್ತಾರೆ. ಆ ರೀತಿಯ ಹೇಳಿಕೆಗಳನ್ನು ನೀಡಿ ಕಡಿಮೆ ವಿದ್ಯಾಭ್ಯಾಸ ಹೊಂದಿದ ಮತ್ತು ತಮ್ಮ ಪರಿಸ್ಥಿತಿಯ ಕಾರಣದಿಂದ ನಿರಾಶರಾದ ಮುಸ್ಲಿಮರನ್ನು ಉದ್ರೇಕಿಸುತ್ತಾರೆ. ಧರ್ಮವನ್ನು ನಿಂದಿಸುವ ಮೂಲಕ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗದು. ಧರ್ಮವನ್ನು ಬದಿಗಿರಿಸಿ ಅತಿಕ್ರಮ ಮತ್ತು ಅನ್ಯಾಯಗಳ ವಿರುದ್ಧ ಚಳುವಳಿ ಹೂಡುವ ಮೂಲಕ ಶಾಂತಿ ಸ್ಥಾಪಿಸಲು ಸಾಧ್ಯವಾಗುವುದು. ಅನ್ಯಾಯಕರ ಕೃತ್ಯಗಳು ಮತ್ತು ದೌರ್ಜನ್ಯಗಳ ವಿರುದ್ಧ ಅವರು ಚಳುವಳಿ ನಡೆಸಿದರೆ ಮಾತ್ರ ಜಯ ಲಭಿಸುವುದು. ಆದುದರಿಂದ ಮಹಾಶಕ್ತಿ ರಾಷ್ಟ್ರಗಳು ಮತ್ತು ಇತರ ದೇಶಗಳ ನಾಯಕರು ತಮ್ಮ ಕಾರ್ಯತಂತ್ರಗಳನ್ನು ಮತ್ತು ಧೋರಣೆಗಳನ್ನು ನ್ಯಾಯದ ಮೇಲೆ ಸ್ಥಾಪಿಸಬೇಕು. ಲೌಕಿಕ ಮನುಷ್ಯನಿಗೆ ಆಧ್ಯಾತ್ಮಿಕ ದೃಷ್ಟಿ ಇಲ್ಲವೆಂಬುದರ ಬಗ್ಗೆ ಸಂಶಯವಿಲ್ಲ. ಆದುದರಿಂದ ಅವನು ವಿಷಯಗಳನ್ನು ಲೌಕಿಕ ದೃಷ್ಟಿಕೋನದಿಂದ ಕಾಣುತ್ತಾನೆ. ಈ ಕಾರಣದಿಂದ ಅವನು ಶಾಂತಿ ಸ್ಥಾಪನೆಗೆಂದು ಮಾಡುವ ಕೃತ್ಯಗಳು ವಾಸ್ತವಿಕವಾಗಿ ಅವ್ಯವಸ್ಥೆಗೆ ಕಾರಣವಾಗುತ್ತವೆ. ಆದುದರಿಂದ ಮಹಾಶಕ್ತಿ ರಾಷ್ಟ್ರಗಳು ತಮ್ಮ ಶಕ್ತಿಯ ಬಗ್ಗೆ ಹೆಮ್ಮೆ ಪಡಬಾರದು. ನಾವು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಬಯಸುವುದಾದರೆ ಜಾಗತಿಕ ಶಕ್ತಿ ರಾಷ್ಟ್ರಗಳು ತಮ್ಮ ಮನೋಭಾವವನ್ನು ಬದಲಾಯಿಸಬೇಕು. ಹಾಗೆ ಮಾಡದಿದ್ದರೆ ಲೋಕವು ಹಿಂಸಾಚಾರ ಮತ್ತು ಯುದ್ಧಗಳಿಂದ ಹೆಚ್ಚು ತೀವ್ರವಾಗಿ ಆವರಿಸಲ್ಪಡುವುದು.

ಅದೇ ರೀತಿ ಮುಸ್ಲಿಮರು ಮಹೋನ್ನತನಾದ ದೇವನ ಕರೆಯನ್ನು ಆಲಿಸಬೇಕು ಮತ್ತು ತಮ್ಮ ಖೋಟಾ ಮತಪಂಡಿತರಿಂದ, ನಾಯಕರಿಂದ ಮತ್ತು ಸಂಸ್ಥೆಗಳಿಂದ ಘೋಷಿಸಲ್ಪಡುವ ಘೋಷಣೆಗಳನ್ನು ಸರ್ವಶಕ್ತನಾದ ಅಲ್ಲಾಹನ ಉಪದೇಶಗಳ ನಿರ್ದಿಷ್ಟ ಮಟ್ಟದ ಬೆಳಕಿನಲ್ಲಿ ಪರೀಕ್ಷಿಸಬೇಕು. ಇಸ್ಲಾಮಿನ ತತ್ವೋಪದೇಶಗಳು ಎಷ್ಟು ಸುಂದರವಾಗಿವೆ ಎಂದು ಅವರು ಕಾಣಬೇಕು. ಅಲ್ಲಾಹನು ಅವರಿಂದ ಏನನ್ನು ಪ್ರತೀಕ್ಷಿಸುತ್ತಾನೆಂದು ತಿಳಿಯಲು ಪ್ರಯತ್ನಿಸಬೇಕು. ಮಹೋನ್ನತನಾದ ಅಲ್ಲಾಹನು ತಾನು ಯಾರನ್ನು ಕಳುಹಿಸಿರುವನೋ ಅವರ ಕಡೆಗೆ ನೋಡಬೇಕೆಂದು ಬಯಸುತ್ತಾನೆ. ಮುಸ್ಲಿಮರು ಹೀಗೆ ಮಾಡುವಾಗ ಪರಸ್ಪರ ಭಿನ್ನಾಭಿಪ್ರಾಯಗಳು ನಿವಾರಿಸಲ್ಪಡುವುವು; ಪ್ರೀತಿ, ಸ್ನೇಹ ಮತ್ತು ನ್ಯಾಯ ಸ್ಥಾಪಿಸಲ್ಪಡುವುವು. ಮುಸ್ಲಿಮರು ಏಕ ಸಮುದಾಯವಾಗುವರು ಮತ್ತು ಅವರು ಮುಸ್ಲಿಮೇತರ ಶಕ್ತಿಗಳ ದಾಸತ್ವದಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯ ಗಳಿಸುವರು.

ನಾವು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಪಾಶ್ಚಿಮಾತ್ಯ ಅಥವಾ ಜಾತ್ಯತೀತ ವಿದ್ಯಾಭ್ಯಾಸ ಅಥವಾ ಸಮಾಜ ವ್ಯವಸ್ಥೆ ಲೋಕದಲ್ಲಿ ಶಾಂತಿ ಮತ್ತು ಭದ್ರತೆಯ ಖಾತರಿ ನೀಡಲಾರವು ಮತ್ತು ಅವು ಯಾವಾಗಲೂ ಹಾಗೆ ಇರಲಾರವು. ಜಾಗತಿಕ ಶಾಂತಿಗೆ ಮತ್ತು ಭದ್ರತೆಗೆ ಖಾತರಿ ನೀಡುವಂತಹದು ಇಸ್ಲಾಮಿನ ಧರ್ಮ ತತ್ವಗಳಾಗಿವೆ. ಇಸ್ಲಾಮ್ ಧರ್ಮದ ಮೊದಲು ಯಾವುದೇ ಧರ್ಮ ಅಂತಹ ತತ್ವಗಳನ್ನು ಸೂಚಿಸಿರಲಿಲ್ಲ; ಇಂದಿನ ಕಾಲದ ಯಾವುದೇ ಫಿಲಾಸಫಿ ಮತ್ತು ಇಸಮ್‌ಗಳಲ್ಲಿ ನಾವು ಕಾಣಲಾರೆವು. ಇಸ್ಲಾಮಿನ ಸುಂದರ ತತ್ವಗಳು ಖಂಡಿತವಾಗಿಯೂ ಲೋಕದಲ್ಲಿ ಶಾಂತಿ ಮತ್ತು ಭದ್ರತೆ ಸ್ಥಾಪಿಸುವ ಖಾತರಿ ನೀಡುತ್ತವೆ.

ಆದುದರಿಂದ ಮುಸ್ಲಿಮೇತರ ಶಕ್ತಿಗಳು ಶಾಂತಿ ಮತ್ತು ಭದ್ರತೆಗೆ ನಮಗೆ ಮಾರ್ಗದರ್ಶನ ನೀಡುವುದಕ್ಕೆ ಬದಲಾಗಿ ನಾವು ಇಸ್ಲಾಮ್ ಧರ್ಮ ತತ್ವಗಳ ಬೆಳಕಿನಲ್ಲಿ ಅವರಿಗೆ ಶಾಂತಿ ಮತ್ತು ಭದ್ರತೆಗಿರುವ ಸತ್ಯವಾದ ಮಾರ್ಗವನ್ನು ತೋರಿಸಿ ಕೊಡಬೇಕಾಗಿದೆ. ನಾನು ಪಠಿಸಿದ ಚಿಕ್ಕ ವಚನದಲ್ಲಿ ಈ ತತ್ವೋಪದೇಶಗಳ ಭವ್ಯತೆ ಪ್ರಕಟವಾಗುತ್ತದೆ. ಆದುದರಿಂದ ಪ್ರತಿರೋಧಕ ನಿಲುವು ಕೈಗೊಳ್ಳುವುದಕ್ಕೆ ಬದಲಾಗಿ ಪ್ರತಿಯೊಬ್ಬ ಮುಸ್ಲಿಮನು ಈ ಮಹತ್ವಪೂರ್ಣ ತತ್ವವನ್ನು ಪಂಥಾಹ್ವಾನ ರೂಪದಲ್ಲಿ ಲೋಕದ ಮುಂದೆ ಇರಿಸಬೇಕು. 1400 ವರ್ಷಗಳ ಹಿಂದೆ ಪವಿತ್ರ ಪೈಗಂಬರರಿಗೆ[ಸ] ಅವತೀರ್ಣಗೊಂಡ ತತ್ವೋಪದೇಶಗಳ ಬೆಳಕಿನಲ್ಲಿ ನಾನು ಕೆಲವು ವಿಷಯಗಳನ್ನು ವಿವರಿಸುವೆನು. ಮಹಾನ್ ಪೈಗಂಬರರು[ಸ] ಮತ್ತು ಅವರ ನಂತರ ನೇರಮಾರ್ಗವನ್ನು ಅವಲಂಬಿಸಿದ ಖಲೀಫರು ಮತ್ತು ಕೆಲವು ನಿಸ್ವಾರ್ಥಿ ರಾಷ್ಟ್ರ ನಾಯಕರು ಮುಸ್ಲಿಮ್ ಸಮುದಾಯದ ಏಳಿಗೆ ಬಗ್ಗೆ ನೋವನ್ನು ಹೊಂದಿ ಈ ತತ್ವೋಪದೇಶವನ್ನು ಅನುಷ್ಠಾನಕ್ಕೆ ತಂದು ಆ ಮೂಲಕ ಸುಂದರ ಸಮಾಜವನ್ನು ನಿರ್ಮಿಸಿದರು.

ಆದರೆ ನಾನು ಒಂದು ವಾಸ್ತವಿಕತೆಯನ್ನು ಅಲ್ಲಗಳೆಯುವುದಿಲ್ಲ. ಅನಂತರ ಕಾಲದಲ್ಲಿ ಈ ಸುಂದರ ತತ್ವಗಳ ಮೇಲೆ ಬಹುತೇಕ ಮುಸ್ಲಿಮ್ ಸರಕಾರಗಳು, ಮುಸ್ಲಿಮ್ ನಾಯಕರು ಮತ್ತು ಮತ ವಿದ್ವಾಂಸರು ತಮ್ಮ ಸ್ವಾರ್ಥ ಲಾಭಾಪೇಕ್ಷೆಗಳ ಕಾರಣ ಪರದೆ ಹಾಕಿದರು. ಆದರೆ ನಾನು ಹಿಂದೆ ಹೇಳಿದ ಹಾಗೆ ಮಹೋನ್ನತನಾದ ಅಲ್ಲಾಹನು ತನ್ನ ಪ್ರವಾದಿಗಳನ್ನೂ ತಾನು ಆಯ್ಕೆ ಮಾಡಿದ ಜನರನ್ನೂ ಪ್ರತಿಯೊಂದು ಅವ್ಯವಸ್ಥೆಯ ಮತ್ತು ಭ್ರಷ್ಟತೆಯ ಕಾಲಘಟ್ಟದಲ್ಲಿ ಮಾನವರಿಗೆ ಮಾರ್ಗದರ್ಶನ ನೀಡಲು ಕಳುಹಿಸುತ್ತಾನೆ. ಅಲ್ಲಾಹನೇ ವಾಗ್ದತ್ತ ಮಸೀಹರನ್ನು ಕಳುಹಿಸಿದನು. ಅವರು ಇಸ್ಲಾಮಿನ ಸುಂದರ ತತ್ವಗಳನ್ನು ಸ್ಪಷ್ಟವಾಗಿ ನಮಗೆ ವಿವರಿಸಿಕೊಟ್ಟರು. ಅವರು ತನ್ನ ಆಗಮನಕ್ಕೆ ಎರಡು ಉದ್ದೇಶ ಲಕ್ಷ್ಯಗಳಿವೆ ಎಂದು ಹೇಳಿದರು: ಒಂದನೆಯದು, ಮಹೋನ್ನತನಾದ ಅಲ್ಲಾಹನೊಂದಿಗೆ ಮನುಷ್ಯನ ಸಂಬಂಧ ಸ್ಥಾಪಿಸುವುದು ಮತ್ತು ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವ ಬಗ್ಗೆ ಗಮನ ಹರಿಸುವುದು. ತನ್ನ ಆಗಮನದ ಎರಡನೆಯ ಉದ್ದೇಶ ಲಕ್ಷ್ಯ ತನ್ನ ಸಹಜೀವಿಗಳಾದ ಮಾನವರಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮನುಷ್ಯರ ಗಮನ ಹರಿಸುವುದು.

ಈ ಎರಡು ಹಕ್ಕುಗಳ ಈಡೇರಿಸುವಿಕೆ ಬಗ್ಗೆ ಇಸ್ಲಾಮ್ ನಮ್ಮ ಗಮನ ಸೆಳೆಯುತ್ತದೆ. ನಾವು ಇದರ ಬಗ್ಗೆ ಪವಿತ್ರ ಖುರ್‌ಆನಿನ ಉಪದೇಶಗಳ ಬೆಳಕಿನಲ್ಲಿ ಪರಿಶೋಧನೆ ನಡೆಸಬೇಕು. ನಾನು ಹಿಂದೆ ಹೇಳಿದ ಹಾಗೆ, ಪವಿತ್ರ ಖುರ್‌ಆನಿನಿಂದ ನಾನು ಉಲ್ಲೇಖಿಸಿದ ವಚನದ ಬೆಳಕಿನಲ್ಲಿ ನೋಡುವಾಗ ಈ ಹಕ್ಕುಗಳನ್ನು ಎಷ್ಟು ಉನ್ನತ ಮಟ್ಟದಲ್ಲಿ ಈಡೇರಿಸಿ ಕೊಡಬಹುದೆಂದು ಮತ್ತು ಲೋಕದಲ್ಲಿ ಸಮಾನತೆ, ನ್ಯಾಯ, ಪ್ರೀತಿ ಮತ್ತು ಭ್ರಾತೃತ್ವ ಸ್ಥಾಪಿಸಬಹುದೆಂದು ತಿಳಿಯುತ್ತದೆ. ಇಸ್ಲಾಮಿನ ಪವಿತ್ರ ಪೈಗಂಬರರು[ಸ] ತನ್ನ ಮಾದರಿ ವರ್ತನೆ ಮೂಲಕ ಎಷ್ಟು ಚೆನ್ನಾಗಿ ಈ ಕಾರ್ಯಗಳನ್ನು ನಿರ್ವಹಿಸಿದರೆಂದು ಕಾಣಬಹುದಾಗಿದೆ. ಇಂದಿನ ಕಾಲಘಟ್ಟದಲ್ಲಿ ಸಹ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಮಹಾನುಭಾವರು ಈ ವಚನದ ಮೂಲಕ ನಮಗೆ ಮಾರ್ಗದರ್ಶನ ನೀಡಿ ನಾವು ಈ ಎರಡು ಹಕ್ಕುಗಳನ್ನು ಹೇಗೆ ಈಡೇರಿಸಬಹುದೆಂದು ಸ್ಪಷ್ಟಪಡಿಸಿದ್ದಾರೆ. ವಾಗ್ದತ್ತ ಮಸೀಹ್[ಅ] ಹೀಗೆ ಹೇಳಿದ್ದಾರೆ: ''ಪವಿತ್ರ ಖುರ್‌ಆನ್ ಎರಡು ಮಹತ್ವಪೂರ್ಣ ಆಜ್ಞೆಗಳನ್ನು ನೀಡುತ್ತದೆ. ಒಂದನೆಯದು, ಅಲ್ಲಾಹನ ಏಕತ್ವವನ್ನು ಅಂಗೀಕರಿಸಿ ಅವನನ್ನು ಪ್ರೀತಿಸಿ ಆರಾಧಿಸುವುದು. ಎರಡನೆಯದು, ಸಹಜೀವಿಗಳಿಗೆ ಕರುಣೆ ತೋರಿಸುವುದು.

''ಅಲ್ಲಾಹನು ಈ ಆಜ್ಞೆಗಳನ್ನು ಮೂರು ಹಂತಗಳಾಗಿ ವಿಭಜಿಸಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: إِنَّ اللّٰهَ يَأْمُرُ بِالْعَدْلِ وَالْإِحْسَانِ وَإِيتَاءِ ذِي الْقُرْبٰى 'ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ'.'' (16:91)

ವಾಗ್ದತ್ತ ಮಸೀಹರು ಪವಿತ್ರ ಖುರ್‌ಆನಿನ ಈ ವಚನವನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳುತ್ತಾರೆ: ''ಸೃಷ್ಟಿಕರ್ತನಿಗೆ ವಿಧೇಯನಾಗಿರುವುದರಲ್ಲಿ ನ್ಯಾಯನಿಷ್ಠೆ ಹೊಂದಬೇಕು. ಅನ್ಯಾಯದಿಂದ ವರ್ತಿಸುವುದರಿಂದ ದೂರ ಸರಿಯಬೇಕು. ವಾಸ್ತವಿಕವಾಗಿ ಅವನ ಹೊರತು ಆರಾಧನೆಗೆ ಬೇರೆ ಯಾರೂ ಅರ್ಹನಲ್ಲ. ಪ್ರೀತಿಸಲು ಅರ್ಹನಾದವನೂ ಭರವಸೆಯಿರಿಸಲು ಅರ್ಹನಾದವನೂ ಅವನ ಹೊರತು ಬೇರೆ ಯಾರೂ ಇಲ್ಲ. ಪ್ರತಿಯೊಂದು ಅಧಿಕಾರ ಅವನಿಗೆ ಮಾತ್ರ ಸೇರಿದೆ. ಏಕೆಂದರೆ ಅವನು ಸೃಷ್ಟಿಕರ್ತನೂ ಪಾಲಕ ಪೋಷಕನೂ ಪ್ರಭುವೂ ಆಗಿದ್ದಾನೆ. (ಅವನೇ ನಮ್ಮನ್ನು ಸೃಷ್ಟಿಸಿದನು. ಅವನು ನಮಗೆ ಜೀವವನ್ನು ನೀಡಿದವನೂ ಪರಿಪಾಲಕನೂ ಆಗಿದ್ದಾನೆ. ಅವನು ಮಾತ್ರ ಆರಾಧನೆಗೆ ಅರ್ಹನಾಗಿದ್ದಾನೆ). ಆರಾಧನೆಯಲ್ಲೂ ಪ್ರೀತಿದೋರುವುದರಲ್ಲೂ ಪ್ರಭುತ್ವದಲ್ಲೂ ಬೇರೆ ಯಾರನ್ನೂ ಅವನಿಗೆ ಸಹಭಾಗಿಯನ್ನಾಗಿ ಮಾಡಬಾರದು. ಈ ರೀತಿ ಮಾಡಲು ನೀವು ಸಮರ್ಥರಾದರೆ ನೀವು **ಅದ್‌ಲ್** (ನ್ಯಾಯನಿಷ್ಠೆ) ಪಾಲಿಸಿದಂತೆ ಆಗುವುದು. ಹೀಗೆ ಮಾಡುವುದು ನಿಮಗೆ ಕಡ್ಡಾಯವಾಗಿದೆ. ನೀವು ಇನ್ನಷ್ಟು ಪ್ರಗತಿ ಗಳಿಸಲು ಬಯಸುವಿರಾದರೆ ಅನಂತರದ ಹಂತ **ಇಹ್‌ಸಾನ್** (ಅನ್ಯರಿಗೆ ಒಳಿತುಂಟುಮಾಡುವುದು) ಆಗಿದೆ. ಎಂದರೆ ಅವನ ಮಹೋನ್ನತ ಸ್ಥಾನದ ಬಗ್ಗೆ ದೃಢ ವಿಶ್ವಾಸ ಹೊಂದಿ ನಿಷ್ಠಾಪೂರ್ವಕವಾಗಿ ಆರಾಧನೆ ಮಾಡುತ್ತಾ ಅವನ ಪ್ರೀತಿಯಲ್ಲಿ ತಲ್ಲೀನನಾಗಿ ಅವನ ಭವ್ಯತೆ, ಶ್ರೇಷ್ಠತೆ ಮತ್ತು ಸೌಂದರ್ಯ ಕಾಣುವಂತಾಗುವ ಸ್ಥಿತಿ. ಅನಂತರದ ಹಂತ **ಈತಾಇ ಧಿಲ್ ಖುರ್‌ಬಾ** (ನಿಕಟ ಬಂಧುಗಳಿಗೆಂಬಂತೆ ಕೊಡುವುದು) ಆಗಿರುವುದು. ಈ ಹಂತ ತಲಪುವಾಗ ನಿಮ್ಮ ಆರಾಧನೆ, ಪ್ರೀತಿ ಮತ್ತು ವಿಧೇಯತೆ ಸಂಪೂರ್ಣವಾಗಿ ತೋರಿಕೆಯಿಂದ ಮುಕ್ತವಾಗುವುದು ಮತ್ತು ನೀವು ನಿಮ್ಮ ತಂದೆ ತಾತಂದಿರನ್ನು ಸ್ಮರಿಸುವಂತೆ ಅವನನ್ನು ಸ್ಮರಿಸುವಿರಿ. ನಿಮ್ಮ

ಪ್ರೀತಿ ಒಂದು ಮಗು ತಾಯಿಯನ್ನು ಪ್ರೀತಿಸುವ ಹಾಗಿರಬೇಕು.

"ಎರಡನೆಯದಾಗಿ, ಮಾನವರ ಬಗ್ಗೆ ನಿಮ್ಮ ಸಹಾನುಭೂತಿ ಬಗ್ಗೆ ಹೇಳುವುದಾದರೆ ನೀವು ನಿಮ್ಮ ಸಹೋದರರೊಂದಿಗೆ ಮತ್ತು ಸಹಜೀವಿಗಳಾದ ಜನರೊಂದಿಗೆ ನ್ಯಾಯಪೂರ್ಣವಾಗಿ ವರ್ತಿಸಬೇಕು. ನಿಮಗೆ ಎಷ್ಟು ಹಕ್ಕು ಇದೆಯೋ ಅದಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದು. (ನೀವು ನಿಮ್ಮ ಹಕ್ಕುಗಳನ್ನು ಪಡೆಯಬಹುದು. ಆದರೆ ನಿಮಗೆ ಎಷ್ಟು ಹಕ್ಕು ಇದೆಯೋ ಅದಕ್ಕಿಂತ ಹೆಚ್ಚಾಗಬಾರದು.) ಇದರಿಂದ ಮುಂದುವರಿದ ಹಂತ **ಇಹ್‌ಸಾನ್** ಹಂತವಾಗಿದೆ. ನಿಮ್ಮ ಸಹೋದರ ನಿಮ್ಮ ವಿರುದ್ಧ ಮಾಡಿದ ತಪ್ಪಿಗೆ ಪ್ರತಿಯಾಗಿ ಒಳಿತನ್ನು ಮಾಡುವುದು ಈ ಹಂತವಾಗಿದೆ. ಬೈಗಳಿಗೆ ಪ್ರತಿಯಾಗಿ ಕರುಣೆದೋರುವುದು ಮತ್ತು ಕರುಣೆಯಿಂದಲೂ ಪ್ರೀತಿಯಿಂದಲೂ ಸಹಾಯ ಮಾಡುವುದಾಗಿದೆ.

"ಅನಂತರದ ಹಂತ **ಈತಾಇ ಧ್ಲ್ ಖುರ್‌ಬಾ** (ನಿಕಟ ಬಂಧುಗಳಿಗೆಂಬಂತೆ ಕೊಡುವುದು). ನೀವು ನಿಮ್ಮ ಸಹೋದರನಿಗೆ ಮಾಡುವ ಒಳಿತು ಮತ್ತು ನೀವು ಮಾನವರಿಗೋಸ್ಕರ ಮಾಡುವ ಒಳಿತು ನೀವು ಮಾಡುವ ಒಂದು ಉಪಕಾರ ಎಂದು ಗಣಿಸಬಾರದು. ಅದು ಸಹಜ ಮನೋಭಾವದ ಮೂಲಕ ಯಾವುದೇ ಉದ್ದೇಶ ಲಕ್ಷ್ಯ ಹೊಂದದೆ ಮಾಡಬೇಕು (ನೀವು ಮಾಡುವ ಒಳಿತು ನೀವು ಮಾಡುವ ಒಂದು ಉಪಕಾರ ಎಂದು ಭಾವಿಸಬಾರದು. ಈ ರೀತಿ ಯೋಚಿಸದೆ ಮಾಡಬೇಕು). ಒಬ್ಬ ಸಂಬಂಧಿಕ ತನ್ನ ನಿಕಟ ಬಾಂಧವ್ಯದ ಕಾರಣ ಇನ್ನೊಬ್ಬ ಸಂಬಂಧಿಕನಿಗೆ ಸಹಾಯ ಮಾಡುವ ರೀತಿಯಲ್ಲಿ ಸಹಾಯ ಮಾಡಬೇಕು. ಇದು ನೈತಿಕ ಅಭಿವೃದ್ಧಿಯ ಅಂತಿಮ ಹಂತವಾಗಿದೆ. ಯಾವುದೇ ಸ್ವಾರ್ಥ ಉದ್ದೇಶವಿಲ್ಲದೆ ಸಹಾಯ ಮಾಡುವುದು ಇದಾಗಿದೆ. ವಾಸ್ತವಿಕವಾಗಿ ತನ್ನ ಸಹೋದರನ ಬಗ್ಗೆ ಮತ್ತು ನಿಕಟ ಸಂಬಂಧಿಕರ ಬಗ್ಗೆ ಇರುವ ಪ್ರೇಮ ಭಾವನೆ ಹೇಗಿರುತ್ತದೆ ಎಂದರೆ ಒಬ್ಬನು ಯಾವುದೇ ಕಾರಣವಿಲ್ಲದೆ, ಯಾವುದೇ ಉಪಕಾರ ಸ್ಮರಣೆ ಆಶಿಸದೆ ಸಹಾಯ ಮಾಡುತ್ತಾನೆ."

ಮೇಲೆ ವಿವರಿಸಿದ ಹಕ್ಕುಗಳ ಬಗ್ಗೆ ಮನವರಿಕೆ ಮಾಡಿಕೊಂಡು ಅವುಗಳನ್ನು ಈಡೇರಿಸಲು ಪ್ರಯತ್ನ ಮಾಡದಿದ್ದರೆ ನ್ಯಾಯಪಾಲನೆ ಮತ್ತು ಸಮಾನತೆ ಸೃಷ್ಟಿಸುವ ವಾದ ಕೇವಲ ವಾದವಾಗಿ ಉಳಿಯುವುದು. ಮನುಷ್ಯ ನಿರ್ಮಿತ ನಿಯಮಗಳು **ಅದ್‌ಲ್** (ನ್ಯಾಯಪಾಲನೆ)ಗಿಂತ ಮುಂದೆ ಸಾಗುವುದಿಲ್ಲ. ನ್ಯಾಯ ವ್ಯವಸ್ಥೆಯನ್ನು ಸ್ಥಾಪಿಸಿ ಲೋಕದಲ್ಲಿ ಶಾಂತಿ ಸ್ಥಾಪನೆಯ ಎಲ್ಲ ಹಂತಗಳನ್ನು ದಾಟಿ ಹೋಗಿರುವೆವು ಮತ್ತು ಗಳಿಸಬೇಕಾದುದನ್ನು ಗಳಿಸಿರುವೆವು ಎಂದು ಲೋಕದ ಜನರು ಭಾವಿಸುತ್ತಾರೆ. ಆದರೆ ಇಂತಹ ಸ್ಥಿತಿಗಳಲ್ಲೂ ಅನ್ಯಾಯಗಳು ಬಾಕಿಯಾಗಿ ಉಳಿಯುತ್ತವೆ. ಸ್ವಾರ್ಥ ಹಿತಾಸಕ್ತಿಗಳಿರುವಾಗ **ಅದ್‌ಲ್** (ನ್ಯಾಯ) ಸ್ಥಾಪಿತವಾಗಲಾರದು. ಇದು ಲೋಕದ ಶ್ರೀಮಂತರಿಗೂ ಬಡವರಿಗೂ ಅನ್ವಯಿಸುತ್ತದೆ. ಅವರು ಮಾಡಬಹುದಾದುದು **ಇಹ್‌ಸಾನ್** (ಪರರಿಗೆ ಉಪಕಾರ) ಮಾತ್ರವಾಗಿದೆ. ಆದರೆ ಅವರು ಉಪಕಾರ ಮಾಡುವುದು ತಮ್ಮ ಹೊಣೆಗಾರಿಕೆ ಎಂಬ ಉದ್ದೇಶದಿಂದಲ್ಲ. ಈ ಕಾರಣದಿಂದ ಅವರು ತಾವು ಮಾಡಿದ ಉಪಕಾರದ ಬಗ್ಗೆ ತಾವು ಉಪಕಾರ ಮಾಡಿದವರಿಗೆ ನೆನಪಿಸಿ ಕೊಡುತ್ತಾರೆ. ನಾವು ಲೋಕದಲ್ಲಿ ಕಾಣುವುದೇನೆಂದರೆ ಒಬ್ಬನು ಕರುಣೆಯಿಂದ ಇನ್ನೊಬ್ಬನಿಗೆ ಕೊಡಲು ಬಯಸುವಾಗ ವಿವಿಧ ಶರತ್ತುಗಳನ್ನು ವಿಧಿಸಲಾಗುತ್ತಿದೆ. ಇಂದಿನ ಕಾಲದಲ್ಲಿ ಮಹಾ ಶಕ್ತಿ ರಾಷ್ಟ್ರಗಳು ಈ ರೀತಿ ವರ್ಧಿಸುವುದಾಗಿ ಕಾಣಿಸುತ್ತದೆ. ಬಡ ದೇಶಗಳಿಗೆ ನೆರವು ನೀಡುವಾಗ ಅನೇಕ ಶರತ್ತುಗಳನ್ನು ವಿಧಿಸಲಾಗುತ್ತಿದೆ. ಆದರೆ ಇಸ್ಲಾಮ್ ಕಲಿಸುವುದೇನೆಂದರೆ, ನೆರವು ನೀಡಿದ ನಂತರ ಅದಕ್ಕೆ ಮೆಚ್ಚಿಗೆ ಬಯಸುವುದಾದರೆ ಅಥವಾ ಅದರ ಬಗ್ಗೆ ಪ್ರಸ್ತಾಪಿಸಿ ನೋವಿಸುವುದಾದರೆ ಅದೊಂದು ಸತ್ಕರ್ಮವಲ್ಲ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

لاَ تُبْطِلُوا صَدَقَاتِكُمْ بِالْمَنِّ وَالأَذَى

"ನೀವು ಮಾಡಿದ ಉಪಕಾರದ ಬಗ್ಗೆ ನೆನಪು ಹುಟ್ಟಿಸಿಯೂ ಮನ ನೋಯಿಸುವ ಮಾತನ್ನಾಡಿಯೂ ನಿಮ್ಮ ದಾನಧರ್ಮವನ್ನು ನಿಷ್ಫಲಗೊಳಿಸಬೇಡಿರಿ." (2:265)

ಈ ವಚನಕ್ಕೆ ವ್ಯಾಖ್ಯಾನ ರೂಪದಲ್ಲಿ ಅರ್ಥ ನೀಡುತ್ತಾ ವಾಗ್ದತ್ತ ಮಸೀಹರು[ಅ] ಹೀಗೆ ಹೇಳಿದ್ದಾರೆ: "ಓ ಉಪಕಾರಶೀಲರೇ, ನೀವು ಮಾಡಿದ ಉಪಕಾರದ ಕುರಿತು ಉಪಕಾರ ಪಡೆದವರಿಗೆ ನೆನಪು ಹುಟ್ಟಿಸುತ್ತಾ ದುಃಖವನ್ನು ಕೊಡುತ್ತಾ ನಿಮ್ಮ ದಾನವನ್ನು ನಿಷ್ಫಲಗೊಳಿಸಬೇಡಿರಿ." (ಇಸ್ಲಾಮ್ ಧರ್ಮ ತತ್ವಜ್ಞಾನ, ಪುಟ–51).

ಹೃದಯ ಪ್ರಾಮಾಣಿಕತೆ ರಹಿತವಾಗಿದ್ದರೆ ಮತ್ತು ಭಕ್ತಿ ರಹಿತವಾಗಿದ್ದರೆ ಇಂತಹ ದಾನ ಮತ್ತು ನೆರವು ಔದಾರ್ಯವಾಗಿ ಗಣಿಸಲಾಗದು. **ಈತಾಇ ಧ್ಲ್ ಖುರ್‌ಬಾ** (ನಿಕಟ ಬಂಧುಗಳಿಗೆಂಬಂತೆ ಕೊಡುವುದು) ಇದರ ಬಗ್ಗೆ ಲೋಕಕ್ಕೆ ಯೋಚಿಸಲು ಕೂಡ ಸಾಧ್ಯವಿಲ್ಲ. ನಾನು ಹಿಂದೆ ಹೇಳಿದ ಹಾಗೆ ಮಾನವ ನಿರ್ಮಿತ ನಿಯಮಗಳು **ಅದ್‌ಲ್ –** ನ್ಯಾಯವನ್ನು ದಾಟಿ ಮುಂದೆ ಸಾಗದು. ಆಗ ಕೂಡ ಅವರ ನ್ಯಾಯ ಕೇವಲ ಮಾತಿಗೆ ಸೀಮಿತವಾಗಿರುತ್ತದೆ. ಅದರೊಂದಿಗೆ ಸೇರಿದ ಅನೇಕ ಶರತ್ತುಗಳು ಅದನ್ನು ನಾಶಗೊಳಿಸುತ್ತವೆ. ಆದರೆ ಸರ್ವಶಕ್ತನಾದ ದೇವನು ಆಜ್ಞಾಪಿಸುವುದೇನೆಂದರೆ, ನೀವು ನ್ಯಾಯ ಪಾಲನೆ ಮಾಡಬೇಕು, ಪರರಿಗೆ ಒಳಿತನ್ನು ಮಾಡಬೇಕು ಮತ್ತು ನಿಕಟ ಸಂಬಂಧಿಕರೆಂಬಂತೆ ಕೊಡಬೇಕು. ನ್ಯಾಯ ಮತ್ತು ಸಮಾನತೆಯ ಆವಶ್ಯಕತೆ ಈಡೇರಿಸಬೇಕು. ನೀವು ಮಾಡುವ ಉಪಕಾರ ಕೃತ್ಯಗಳ ನಂತರ ಯಾವುದೇ ರೀತಿಯ ನೋವು ಉಂಟುಮಾಡಬಾರದು. ನೀವು ಕೇವಲ ಅದ್‌ಲ್ (ನ್ಯಾಯ) ಮತ್ತು ಇಹ್‌ಸಾನ್ (ಉಪಕಾರ) ಹಂತವನ್ನು ತಲಪಿದರೆ ಸಾಲದು. ನೀವು ನಿಕಟ ಸಂಬಂಧಿಗಳಿಗೆ ಮಾಡುವಂತಹ ಉಪಕಾರ ಮಾಡಬೇಕು. ನೀವು ಯಾವುದೇ ಸ್ವಾರ್ಥ ಉದ್ದೇಶ ಹೊಂದಬಾರದು. ನೀವು ಅನ್ಯರು ಅನುಭವಿಸುವ ನೋವನ್ನು ನೀವೇ ಅನುಭವಿಸುವ ಹಾಗೆ ಭಾವಿಸಬೇಕು. ಈ ಶರತ್ತುಗಳನ್ನು ಪಾಲಿಸಿದರೆ ನೀವು ಮೂಮಿನ್

(ಸತ್ಯವಿಶ್ವಾಸಿ) ಆಗುವಿರಿ.

ಸರ್ವಶಕ್ತನಾದ ದೇವನು ಅವತೀರ್ಣಗೊಳಿಸಿದ ಆಜ್ಞೆಗಳು ಮತ್ತು ರೂಪಿಸಿದ ನಿಯಮಗಳು ಎಷ್ಟು ಶ್ರೇಷ್ಠವಾಗಿವೆ! ಇವುಗಳಿಂದ ತಿಳಿಯುವುದೇನೆಂದರೆ, ಒಬ್ಬ ನಿಸ್ವಾರ್ಥನಾಗಿ ನ್ಯಾಯ, ಕರುಣೆ ಮತ್ತು ಪ್ರೀತಿಯ ನಿರ್ದೇಶಿತ ಮಟ್ಟವನ್ನು ತಲಪುವ ತನಕ ನೈಜ ಶಾಂತಿಗೆ ಖಾತರಿ ನೀಡಲಾರನು. ಇದು ಎಂತಹ ಉಪದೇಶವೆಂದರೆ ಅದು ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡುವ ಉನ್ನತ ಶೃಂಗವನ್ನು ತಲಪಿಸುತ್ತದೆ. ಸರ್ವಶಕ್ತನಾದ ದೇವನ ಸೃಷ್ಟಿಗಳಿಗೆ ಕರುಣೆದೋರುವುದಕ್ಕೆ ಮತ್ತು ಶಾಂತಿ ಸ್ಥಾಪನೆಗೆ ಸಂಬಂಧಿಸಿ ಮನುಷ್ಯ ನಿರ್ಮಿತ ನಿಯಮಗಳು ಮಾತ್ರವಲ್ಲ ಇಸ್ಲಾಮಿನ ಹೊರತು ಬೇರೆ ಯಾವುದೇ ಧರ್ಮ ಹಿಂದೆ ಇಂತಹ ನಿಯಮವನ್ನು ಪ್ರಸ್ತಾಪಿಸಿಲ್ಲ. ಅನ್ಯರ ಹಕ್ಕುಗಳನ್ನು ಈಡೇರಿಸಿ ಕೊಡುವ ಬಗ್ಗೆ ಮತ್ತು ಶಾಂತಿ ಸ್ಥಾಪನೆ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು ಬೇರೆ ಎಲ್ಲವುಗಳ ಮೇಲೆ ಉನ್ನತ ಸ್ಥಾನದಲ್ಲಿವೆ. ಮುಸ್ಲಿಮನೆಂದು ಹೇಳಿಕೊಳ್ಳುವವನು, ಇಸ್ಲಾಮೀ ಸರಕಾರ, ಇಸ್ಲಾಮಿನ ಹೆಸರಿನಲ್ಲಿ ರಚಿಸಲ್ಪಟ್ಟ ಗುಂಪುಗಳು ಇಸ್ಲಾಮಿನ ನೈಜ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸಿ ತೀವ್ರವಾದಿ ಕೃತ್ಯಗಳನ್ನು ಮಾಡುವುದಾದರೆ ಅವರೆಲ್ಲರೂ ಪವಿತ್ರ ಖುರ್‌ಆನಿನ ತತ್ವಗಳಿಗೆ ವಿರುದ್ಧವಾಗಿ ವರ್ತಿಸುವವರಾಗಿದ್ದಾರೆ. ಇಸ್ಲಾಮ್ ತನ್ನ ಅನುಯಾಯಿಗಳು ಎಲ್ಲರೂ ಈ ಉಪದೇಶಗಳನ್ನು ಎಲ್ಲ ಸಂದರ್ಭಗಳಲ್ಲೂ ಪಾಲಿಸಬೇಕೆಂದು ಆಜ್ಞಾಪಿಸಿದೆ. ಇಸ್ಲಾಮಿನ ಹೆಸರಿನಲ್ಲಿ ಯಾರಾದರೂ ಒಂದು ತಪ್ಪು ಕೃತ್ಯ ಮಾಡಿದರೆ ಇಸ್ಲಾಮ್ ಧರ್ಮ ತಪ್ಪು ಕೃತ್ಯಗಳನ್ನು ಮಾಡಲು ಅನುಮತಿ ನೀಡುತ್ತದೆ ಎಂದು ವಾದಿಸಲು ಸಾಕ್ಷ್ಯಾಧಾರವಾಗಲಾರದು. ನ್ಯಾಯ ಮತ್ತು ಶಾಂತಿಯ ಧ್ವಜವಾಹಕರೆಂದು ತಮ್ಮನ್ನು ಗಣಿಸುವ ಇಸ್ಲಾಮಿನ ವಿಮರ್ಶಕರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವಾಗ ನ್ಯಾಯಪಾಲನೆ ಮಾಡಬೇಕು. ಪಶ್ಚಿಮದ ದೇಶಗಳ ನಾಯಕರು ಮತ್ತು ರಾಜಕಾರಣಿಗಳು, ಇಸ್ಲಾಮ್ ಮತ್ತು ತೀವ್ರವಾದದ ಮಧ್ಯೆ ಸಂಬಂಧ ಇದೆ ಎನ್ನುವುದನ್ನು ತಾವು ನಿರಾಕರಿಸಲಾರೆವು ಎಂದು ಹೇಳುತ್ತಾರೆ. ಹೀಗೆ ಅವರು ಹೇಳುವುದು ಅಜ್ಞಾನದಿಂದಾಗಿದೆ ಅಥವಾ ಅವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದರಲ್ಲಿ ಅನ್ಯಾಯ ಮಾಡುವುದ ರಿಂದಾಗಿದೆ. ಅವರು ತಮ್ಮ ಸ್ವಂತ ಕೃತ್ಯಗಳನ್ನು ಮನವರಿಕೆ ಮಾಡುವುದಿಲ್ಲ. ಅವರು ನ್ಯಾಯಪಾಲನೆಯ ನೆವನದಲ್ಲಿ ನ್ಯಾಯವನ್ನು ಸಂಪೂರ್ಣವಾಗಿ ಅಳಿಸಿ ಬಿಡುತ್ತಾರೆ ಮತ್ತು ಎಲ್ಲ ವಿಧಗಳ ಅನ್ಯಾಯಭರಿತ ಕೃತ್ಯಗಳನ್ನು ಮಾಡುತ್ತಾರೆ. ನಾನು ಇವುಗಳ ಬಗ್ಗೆ ನನ್ನ ಸ್ವಂತ ಅಭಿಪ್ರಾಯ ನೀಡುವ ಆವಶ್ಯಕತೆ ಇಲ್ಲ. ಏಕೆಂದರೆ ಅವರ ಸ್ವಂತ ಲೇಖಕರು ಅವರ ನ್ಯಾಯಪಾಲನೆಯ ಮತ್ತು ಶಾಂತಿ ಸ್ಥಾಪನೆಯ ವಾಸ್ತವಿಕ ಸ್ಥಿತಿಯನ್ನು ಬಹಿರಂಗಪಡಿಸಿದ್ದಾರೆ. ದಿ ವೆಸ್ಟ್ಸ್ ಲಿಬ್ಯನ್ ಲೆಜೆಸಿ (The west's Libyan Legacy) ಎಂಬ ಶೀರ್ಷಿಕೆಯ ಲೇಖನದಲ್ಲಿ ಜಾನ್ ವೈಟ್ (Jhon Wight) ಹೀಗೆ ಬರೆದಿದ್ದಾರೆ:

''ಪಶ್ಚಿಮದ ದೇಶಗಳ ಇತ್ತೀಚೆಗಿನ ಹಲವು ಸೈನಿಕ ಕಾರ್ಯಾಚರಣೆ ಗಳಲ್ಲಿ 2011ರಲ್ಲಿ ನ್ಯಾಟೋ (Nato) ಲಿಬ್ಯಾದಲ್ಲಿ ನಡೆಸಿದ ಕಾರ್ಯಾಚರಣೆ ಅತ್ಯಂತ ಘೋರವೂ ವಿನಾಶಕಾರವೂ ಆಗಿತ್ತು. ಅದು ದೇಶವನ್ನು ಸೋತ ದೇಶವನ್ನಾಗಿ ಪರಿವರ್ತಿಸಿತು. ನ್ಯಾಟೋದ ಹಸ್ತಕ್ಷೇಪ ದೇಶದ ಸಮಾಜದಲ್ಲಿ ಅರಾಜಕತೆಯನ್ನೂ ಸಂಕಟಮಯ ಸ್ಥಿತಿಯನ್ನೂ ಉಂಟುಮಾಡಿತು. ಸಮಾಜವು ಕೂಡಲೇ ಅನೇಕ ಗೋತ್ರಗಳಾಗಿಯೂ ಪಂಗಡಗಳಾಗಿಯೂ ಒಡೆಯಿತು. ಅತ್ಯಂತ ಕ್ರೂರ ಆಂತರಿಕ ಸಂಘರ್ಷಗಳು ಸುವ್ಯವಸ್ಥಿತವಾಗಿದ್ದ ಒಂದು ದೇಶವನ್ನು ಮತ್ತು ಸಮಾಜವನ್ನು ಕೆಡಿಸಿತು. ಅದರೊಳಗೆ ಇಸ್ಲಾಮಿಕ್ ಸ್ಟೇಟ್ (IS) ಸುಭದ್ರ ಸ್ಥಾನ ಹೊಂದಿದೆ.''

ಲೇಖಕ ಮುಂದುವರಿದು ಹೀಗೆ ಬರೆಯುತ್ತಾರೆ: ''ನ್ಯಾಟೋ ಹಸ್ತಕ್ಷೇಪಕ್ಕೆ ಮೊದಲು ಲಿಬ್ಯಾದಲ್ಲಿ ಭೀಕರವಾದಿಗಳ ತರಬೇತಿ ಕೇಂದ್ರಗಳು ಇರಲಿಲ್ಲ.''

ವಾಸ್ತವಿಕವಾಗಿ ಪಶ್ಚಿಮದ ದೇಶಗಳು ಲಿಬ್ಯಾದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವ ಉದ್ದೇಶ ಹೊಂದಿರಲಿಲ್ಲ. ಅವರು ಉದ್ದೇಶಿಸಿದುದು ಲಾಭಕರವಾದ ತೈಲದ ಅನ್ವೇಷಣೆ ಮತ್ತು ಲಾಭಕರವಾದ ಆರ್ಥಿಕ ಸಂಬಂಧ ಸ್ಥಾಪನೆಯಾಗಿದೆ. (The West's Libyan Legacy. www.rt.com )

ಶಾಂತಿ ಮತ್ತು ನ್ಯಾಯ ಸ್ಥಾಪಿಸುವ ಹೆಸರಿನಲ್ಲಿ ಮಾಡಿದ ಅನ್ಯಾಯಗಳ ಒಂದು ಮಿಂಚುನೋಟ ಮಾತ್ರ ಇದಾಗಿದೆ. ಬೇರೆ ಅನೇಕ ಜನರು ಇದೇ ರೀತಿ ಇರಾಖ್ ವಿರುದ್ಧ ಮಾಡಿದ ಯುದ್ಧ ತಪ್ಪಾಗಿತ್ತೆನ್ನುವ ಬಗ್ಗೆ ಮತ್ತು ಬೇರೆ ಅನೇಕ ಅನ್ಯಾಯ ಕೃತ್ಯಗಳ ಬಗ್ಗೆ ಬರೆದಿರುವರು. ಆದರೆ ಪಾಶ್ಚಿಮಾತ್ಯರು ವಿಮರ್ಶಿಸುವ ಇಸ್ಲಾಮ್ ನ್ಯಾಯಪಾಲನೆಯನ್ನು ಸತ್ಕರ್ಮಗಳಲ್ಲಿ ಅತ್ಯುತ್ತಮ ಎಂದು ಉಪದೇಶಿಸುತ್ತದೆ. ನ್ಯಾಯಪಾಲನೆ ಮಹತ್ವಪೂರ್ಣ ಮಾತ್ರವಲ್ಲ, ಇಸ್ಲಾಮ್ ಪ್ರಕಾರ ಅದು ಎಲ್ಲ ಸತ್ಕರ್ಮಗಳ ಅಸ್ತಿಭಾರವಾಗಿದೆ. ಆದರೆ ಪಾಶ್ಚಿಮಾತ್ಯರು ನ್ಯಾಯ ಮತ್ತು ಸಮಾನತೆಯ ಘೋಷಣೆಯನ್ನು ಮಹತ್ವಪೂರ್ಣ ಕೃತ್ಯವೆಂದು ಗಣಿಸುತ್ತಾರೆ. ಈ ಜನರು ತಮ್ಮ ಘೋಷಣೆ ಪ್ರಕಾರ ಕಾರ್ಯನಿರತರಾಗುವವರಾದರೆ ಅವರು ಲೌಕಿಕ ಜನರಾದ ಕಾರಣ ಅದು ಅವರಿಗೆ ಮಹತ್ವಪೂರ್ಣ ಕೃತ್ಯ ಎಂದು ನಾವು ಗಣಿಸಬಹುದು. ಆದರೆ ನಾನು ಹಿಂದೆ ಹೇಳಿದ ಹಾಗೆ ಅವರ ನ್ಯಾಯ ಪಾಲನೆಯ ಮಟ್ಟ ಅವರ ಸ್ವಾರ್ಥ ಲಾಭಕ್ಕೆ ಸಂಬಂಧಿಸಿ ಬದಲಾಯಿಸುತ್ತದೆ.

ಇಸ್ಲಾಮ್ ನ್ಯಾಯಪಾಲನೆಯ ಒಂದು ಸುಂದರ ಮಟ್ಟವನ್ನು ಹೀಗೆ ಸೂಚಿಸುತ್ತದೆ:

يَا أَيُّهَا الَّذِينَ آمَنُوا كُونُوا قَوَّامِينَ لِلَّهِ شُهَدَاءَ بِالْقِسْطِ وَلَا يَجْرِمَنَّكُمْ شَنَآنُ قَوْمٍ عَلَىٰ أَلَّا تَعْدِلُوا اعْدِلُوا هُوَ أَقْرَبُ لِلتَّقْوَىٰ وَاتَّقُوا اللَّهَ إِنَّ اللَّهَ خَبِيرٌ بِمَا تَعْمَلُونَ

''ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸು ವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ

ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವ ಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯ ಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ.'' (ಪವಿತ್ರ ಖುರ್‌ಆನ್ 5:9)

ಇದು ಇಸ್ಲಾಮ್ ಧರ್ಮದ ಸುಂದರ ಉಪದೇಶವಾಗಿದೆ. ಶತ್ರುಗಳ ವಿರುದ್ಧ ಕೂಡ ತಪ್ಪಾಗಿ ವರ್ತಿಸಬಾರದು. ತಪ್ಪು ಕೆಲಸವನ್ನು ಸಮರ್ಥಿಸಬಾರದು. ಈ ವಚನದಲ್ಲಿ ಬಳಸಿದ ಖವ್ವಾಮ್ ಎಂಬ ಶಬ್ದ ಸರಿಯಾಗಿ ಮತ್ತು ಸ್ಥಿರವಾಗಿ ಕೆಲಸ ಮಾಡುವ ಬಗ್ಗೆ ಸೂಚಿಸುತ್ತದೆ. ಮುಸ್ಲಿಮನು ಯಾವಾಗಲೂ ಸರಿಯಾಗಿಯೂ ಸ್ಥಿರವಾಗಿಯೂ ನ್ಯಾಯಪಾಲನೆ ಮಾಡಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಅವನು ಯಾವಾಗಲೂ ಅಲ್ಲಾಹನ ಆಜ್ಞೆಗಳನ್ನು ಗಮನದಲ್ಲಿರಿಸಿಕೊಂಡು ತನ್ನ ಕೆಲಸಗಳನ್ನು ಮಾಡಬೇಕು. ಮೂಮಿನ್(ಸತ್ಯವಿಶ್ವಾಸಿ) ಸರ್ವಶಕ್ತನಾದ ದೇವನ ಆಜ್ಞೆಗಳನ್ನು ಸೂಕ್ಷ್ಮವಾಗಿ ಪರಿಶೋಧಿಸಿ ಕೆಲಸ ನಿರ್ವಹಿಸಬೇಕು. ಸತ್ಯವಿಶ್ವಾಸಿ ಯಾವಾಗಲೂ ಸರ್ವಶಕ್ತನ ಆಜ್ಞೆಗಳ ಬಗ್ಗೆ ಶ್ರದ್ಧೆ ನೀಡಬೇಕು ಮತ್ತು ಅವುಗಳನ್ನು ಹುಡುಕುತ್ತಾ ಇರಬೇಕು. ಒಬ್ಬ ಸತ್ಯವಿಶ್ವಾಸಿ ಹೀಗೆ ವರ್ತಿಸುವಾಗ ಅವನು ಸತ್ಯ ಮುಸ್ಲಿಮ್ ಎಂದು ಗಣಿಸಲ್ಪಡುವನು. ನ್ಯಾಯಪಾಲನೆ ಬಗ್ಗೆ ದೇವಾಜ್ಞೆಯನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಜನರ ಶತ್ರುತ್ವ ನಿಮ್ಮನ್ನು ನ್ಯಾಯಪಾಲನೆಯಿಂದ ದೂರ ಸರಿಸುವಂತಾಗಬಾರದು. ಸರ್ವಶಕ್ತನಾದ ದೇವನು ಶತ್ರುಗಳೊಂದಿಗೆ ನ್ಯಾಯಯುತವಾಗಿಯೂ ಉತ್ತಮವಾಗಿಯೂ ವರ್ತಿಸಬೇಕೆಂದು ಮುಸ್ಲಿಮರಿಗೆ ಆಜ್ಞೆ ನೀಡಿರುವನಲ್ಲದೆ ನಾವು ಸತ್ಕರ್ಮಗಳನ್ನು ವರ್ಧಿಸಬೇಕೆಂದು ಸಹ ಉಪದೇಶಿಸಿದ್ದಾನೆ. ಅಂಕಣಗಾರನು ಬರೆದ ಹಾಗೆ ಲಿಬ್ಯಾ ದೇಶದ ವಿರುದ್ಧ ಮಾಡಿದ ಯುದ್ಧ ಮತ್ತು ಗದ್ದಾಫಿಯ ಪದಚ್ಯುತಿಯನ್ನು ಮಾಡಿದ ಕಾರಣ ಆರ್ಥಿಕವಾಗಿತ್ತು. ತೈಲದಿಂದ ಗಳಿಸುವ ಸಂಪಾದನೆ ಮೇಲೆ ಬಿಗಿಯಾದ ಹಿಡಿತ ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು. ಪಾಶ್ಚಿಮಾತ್ಯರು ಪವಿತ್ರ ಖುರ್‌ಆನ್ ತೀವ್ರವಾದವನ್ನು ಪ್ರೋತ್ಸಾಹಿಸುತ್ತದೆ ಎಂದು ವಿಮರ್ಶಿಸುತ್ತಾರೆ. ಆದರೆ ಪವಿತ್ರ ಖುರ್‌ಆನ್ ಉಪದೇಶಿಸುವುದೇನೆಂದರೆ ಅನ್ಯರ ಸಂಪತ್ತನ್ನು ಅಸೂಯೆಯಿಂದ ನೋಡಬಾರದು. ನಾನು ಯು.ಎಸ್.ಎ.ದಲ್ಲಿ ರಾಜಕಾರಣಿಗಳ ಮುಂದೆ ಇದನ್ನು ಹೇಳಿದಾಗ ಆಫ್ರಿಕನ್ – ಅಮೇರಿಕನ್ ವರ್ಗದ ಒಬ್ಬ ರಾಜಕಾರಣಿ ನನ್ನ ಬಳಿಗೆ ಬಂದು ಹೀಗೆ ಹೇಳಿದರು: ಅನ್ಯರ ಸಂಪತ್ತಿನ ಕಡೆಗೆ ಅಸೂಯೆಯಿಂದ ನೋಡಬಾರದು ಮತ್ತು ಅದರಿಂದ ಅನ್ಯಾಯವಾಗಿ ಪ್ರಯೋಜನ ಪಡೆಯಬಾರದು ಎಂದು ನೀವು ಹೇಳಿದುದು ಸತ್ಯ ಮತ್ತು ಸರಿಯಾದ ಹೇಳಿಕೆಯಾಗಿದೆ. ನಮಗೆ ಇಲ್ಲಿ ಇದರ ಆವಶ್ಯಕತೆ ಇದೆ. ಈ ಜನರ ಸ್ಥಿತಿ ಹೀಗಿರುವಾಗ ಅವರಿಗೆ ಇಸ್ಲಾಮನ್ನು ವಿಮರ್ಶಿಸಲು ಹೇಗೆ ತಾನೆ ಸಾಧ್ಯ?

ನಾನು ಇದರ ಮೊದಲು ಉಲ್ಲೇಖಿಸಿದ ಹಾಗೆ ಪಾಶ್ಚಿಮಾತ್ಯ ದೇಶಗಳ ಸ್ವಂತ ಜರ್ನಲಿಸ್ಟ್‌ಗಳು (ಅವರಲ್ಲೊಬ್ಬರ ಲೇಖನದಿಂದ ನಾನು ಉಲ್ಲೇಖಿಸಿದ್ದೇನೆ) ಹೀಗೆ ಬರೆಯಲು ಪ್ರಾರಂಭಿಸಿದ್ದಾರೆ: ಇರಾಖ್ ವಿರುದ್ಧ ಯುದ್ಧ ಮತ್ತು ಅನ್ಯಾಯದ ಧೋರಣೆಗಳ ಕಾರಣದಿಂದ ಮುಸ್ಲಿಮ್ ಉಗ್ರವಾದಿ ಗುಂಪುಗಳು ಹುಟ್ಟಿಕೊಂಡಿವೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಎರಡು ನಗರಗಳ ಮೇಲೆ ಆಟಮ್‌ಬಾಂಬ್ ಹಾಕಿ ನಿರಪರಾಧಿಗಳಾದ ಜನರನ್ನು ಸಾಮೂಹಿಕ ಸಂಹಾರ ಮಾಡುವ ಮೂಲಕ ಈ ಜನರು ಎಂತಹ ನ್ಯಾಯ ಪ್ರದರ್ಶಿಸಿದ್ದಾರೆ! ಈ ಜನರು ಆಗ ಮಾನವ ಸಹಾನುಭೂತಿಯನ್ನು ಪ್ರಕಟಿಸಿದ್ದರೋ? ಇದೇ ವಿಷಯ ಈಗ ಪ್ರಸ್ತಾಪಿಸಲ್ಪಡುವಾಗ ಈ ಜನರ ಪ್ರತಿಕ್ರಿಯೆ ಹೇಗಿದೆ? ಈಗ ಸಹ ಆ ಘಟನೆ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಅದು ತಪ್ಪಾದ ಕೆಲಸವಾಗಿತ್ತು. ಅದು ಹಾಗೆ ಆಗಬಾರದಿತ್ತು ಎಂದು ಹೇಳುವುದಕ್ಕೆ ಬದಲಾಗಿ ಅವರು ಯಾವುದೇ ಖೇದ ಕೂಡ ಪ್ರಕಟಿಸುವುದಿಲ್ಲ. ಪ್ರೆಸಿಡೆಂಟ್ ಟ್ರೂಮನ್ (ಯು.ಎಸ್.ಎ.ದ ಮಾಜಿ ಪ್ರೆಸಿಡೆಂಟ್) ಅವರ ಮೊಮ್ಮಗ ಕ್ಲಿಂಟನ್ ಟ್ರೂಮನ್ ಒಂದು ಸಂದರ್ಶನದ ವೇಳೆಯಲ್ಲಿ ಆ ಬಾಂಬ್ ದಾಳಿಗಳ ಬಗ್ಗೆ ಅವು ಬಹಳ ಮಹತ್ವಪೂರ್ಣವಾದವು ಎಂದು ಹೇಳಿದರು. ಅವರು ತನ್ನ ಅಜ್ಜನ ಬಗ್ಗೆ ಹೇಳಿದರು – ''ಅವರು ಯುದ್ಧವನ್ನು ಮುಕ್ತಾಯಗೊಳಿಸಿದರು'' ಎಂದು. ಆ ಮೂಲಕ ಎರಡು ವಿರುದ್ಧ ಸೇನಾ ವಿಭಾಗಗಳ ಲಕ್ಷಗಟ್ಟಲೆ ಜನರ ಜೀವಗಳನ್ನು ರಕ್ಷಿಸಲಾಯಿತೆಂದೂ ಆ ಕಾರಣದಿಂದ ಬಾಂಬ್ ದಾಳಿ ಮಾಡಲಾಯಿತು ಎಂದೂ ತನ್ನ ಅಜ್ಜ ಹೇಳಿರುವುದಾಗಿ ಅವರು ಹೇಳಿದರು. ಈ ಬಾಂಬ್ ದಾಳಿಗಳ ಬಗ್ಗೆ ಜಪಾನಿನ ಕ್ಷಮೆ ಯಾಚಿಸುವ ಆವಶ್ಯಕತೆ ಇಲ್ಲ ಎಂದು ಸಹ ಅವರು ಹೇಳಿದರು.

''ಡೈಲಿ ಟೆಲಿಗ್ರಾಫ್'' ಪತ್ರಿಕೆಯ ಅಂಕಣಗಾರ ಅಗಸ್ಟ್ ದಿನಾಂಕ 9ರ ಸಂಚಿಕೆಯಲ್ಲಿ ಹೀಗೆ ಬರೆದಿದ್ದಾರೆ: ಹಿರೋಶಿಮ ಮತ್ತು ನಾಗಸಾಕಿಯ ಮೇಲೆ ಆಟಮ್‌ಬಾಂಬ್ ದಾಳಿ ನಡೆಸಿ ನರ ಸಂಹಾರ ಮಾಡಿದುದು ಸಮರ್ಥನೀಯ.''

ಈ ಜನರ ಮನೋಭಾವ ಮತ್ತು ಅಭಿಪ್ರಾಯ ಹೀಗಿದೆ. ಯುದ್ಧವು ಸೈನಿಕರ ಮಧ್ಯೆ ನಡೆಯುವುದಾದರೂ ನಿಷ್ಕಳಂಕ ಮಕ್ಕಳು, ವೃದ್ಧರು ಮತ್ತು ಮಹಿಳೆಯರು ಸಾಯುತ್ತಾರೆ! ಈ ಜನರು ಎಲ್ಲ ವಿಧಗಳಲ್ಲೂ ಉಪಾಯದಿಂದ ಸಮರ್ಥಿಸುತ್ತಾರೆ. ಆದರೆ ಒಂದು ಇಸ್ಲಾಮೀ ಗುಂಪು ಯಾವುದಾದರೂ ತಪ್ಪು ಕೃತ್ಯ ಮಾಡಿದರೆ ಈ ಜನರು ತಕ್ಷಣ ಇಸ್ಲಾಮೀ ತತ್ವಗಳ ಮೇಲೆ ದೋಷಾರೋಪ ಹೊರಿಸುತ್ತಾರೆ. ಆದರೆ ಇಸ್ಲಾಮ್ ಧರ್ಮ ಉಪದೇಶಿಸುವುದು ನ್ಯಾಪಾಲನೆಯನ್ನು ಮತ್ತು ಅನ್ಯರಿಗೆ ಒಳಿತನ್ನು ಮಾಡಬೇಕೆಂದಾಗಿದೆ. ನಿಕಟ ಬಂಧುಗಳ ಹಾಗೆ ಗಣಿಸಿ ಎಲ್ಲ ಸಂದರ್ಭಗಳಲ್ಲೂ ಅನ್ಯರಿಗೆ ಸಹಾಯ ಮಾಡಬೇಕೆಂದು ಹೇಳುತ್ತದೆ. ಇಸ್ಲಾಮ್ ಅನ್ಯಾಯವನ್ನೂ ವಿದ್ರೋಹಕರ ಕೃತ್ಯಗಳನ್ನೂ ತಿರಸ್ಕರಿಸುತ್ತದೆ. ಪವಿತ್ರ ಖುರ್‌ಆನ್ ನ್ಯಾಯಪಾಲನೆಯನ್ನು ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನನ್ನು ಅತ್ಯಂತ ನಿಷ್ಠಾವಂತರಾಗಿ ಅನುಸರಿಸಿದವರು ಹಝ್ರತ್ ಮುಹಮ್ಮದ್ ಪೈಗಂಬರ್[ಸ]

ಆಗಿದ್ದಾರೆ. ಒಬ್ಬ ಯಹೂದಿ ಹರ್ಝ್‌ರತ್ ಪೈಗಂಬರರ(ಸ) ಬಳಿಗೆ ಒಬ್ಬ ಮುಸ್ಲಿಮನ ವಿರುದ್ಧ ದೂರಿನ ತೀರ್ಮಾನ ಪಡೆಯಲು ಬಂದನು. ಎರಡು ವಿಭಾಗದವರನ್ನು ವಿಚಾರಣೆ ಮಾಡಿದ ಹರ್ಝ್‌ರತ್ ಪೈಗಂಬರರು(ಸ) ಮುಸ್ಲಿಮನ ವಿರುದ್ಧ ಮತ್ತು ಯಹೂದಿಯ ಪರವಾಗಿ ತೀರ್ಪು ನೀಡಿದರು. (ಮುಸ್‌ನದ್ ಅಹ್ಮದ್ ಬಿನ್ ಹಂಬಲ್)

ಇಂದಿನ ಕಾಲದಲ್ಲಿ ವೈಯಕ್ತಿಕವಾಗಿ ಮತ್ತು ಸರಕಾರಿ ಮಟ್ಟದಲ್ಲಿ ಸಾಲಗಳನ್ನು ಪಡೆಯಲಾಗುತ್ತಿದೆ. ಆದರೆ ಸಾಲವನ್ನು ಮರುಪಾವತಿ ಮಾಡಬೇಕಾದ ಕಾಲದಲ್ಲಿ ಹಲವಾರು ವಿಧಗಳ ನೆವನಗಳನ್ನು ಹೇಳಿ ಸಾಲದ ಮರುಪಾವತಿಯನ್ನು ಮಾಡುವುದಿಲ್ಲ. ಆದರೆ ಹರ್ಝ್‌ರತ್ ಪೈಗಂಬರರ(ಸ) ಉದಾಹರಣೆಯನ್ನು ಕಾಣುವಾಗ ಅದು ಇಸ್ಲಾಮ್ ಧರ್ಮದ ತತ್ವವನ್ನು ಪ್ರತಿಬಿಂಬಿಸುತ್ತದೆ. ಹರ್ಝ್‌ರತ್ ಪೈಗಂಬರರು(ಸ) ಸಾಲ ಪಡೆದಾಗ ಅದನ್ನು ಮರುಪಾವತಿ ಮಾಡಬೇಕಾದ ಸಮಯದ ಮೊದಲೇ ಮರುಪಾವತಿ ಮಾಡುತ್ತಿದ್ದರಲ್ಲದೆ ಅವರು ಸಾಲ ಪಡೆದುದಕ್ಕಿಂತ ಹೆಚ್ಚಿನ ಹಣವನ್ನು ತನ್ನ ಔದಾರ್ಯದ ಕಾರಣದಿಂದ ನೀಡುತ್ತಿದ್ದರು.

ಯುದ್ಧದ ಬಗ್ಗೆ ಇದರ ಮೊದಲು ಪ್ರಸ್ತಾಪಿಸಿದ್ದೆ. ಯುದ್ಧ ಕೈದಿಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

مَا كَانَ لِنَبِيٍّ أَنْ يَكُونَ لَهُ أَسْرَى حَتَّى يُثْخِنَ فِي الأَرْضِ

"(ಯುದ್ಧ ಮಾಡಿ) ದೇಶದಲ್ಲಿ ಶತ್ರುಗಳನ್ನು ಸೋಲಿಸುವ ಮೂಲಕ ಹೊರತು ಯುದ್ಧ ಕೈದಿಗಳನ್ನು ಹೊಂದುವುದು ಒಬ್ಬ ಪ್ರವಾದಿಗೆ ಸಲ್ಲದು." (8:68).

ಆ ಕಾಲಘಟ್ಟದಲ್ಲಿ ವಿರೋಧಿ ಗೋತ್ರಗಳ ಜನರನ್ನು ಸೆರೆಹಿಡಿಯುವುದು ಸಂಪ್ರದಾಯವಾಗಿತ್ತು. ಇಸ್ಲಾಮ್ ಅದರ ವಿರುದ್ಧ ಧ್ವನಿಯೆತ್ತಿತು. ಇಸ್ಲಾಮ್ ವಿರುದ್ಧ ಅಸ್ತ್ರವನ್ನು ಎತ್ತಿಕೊಂಡು ಆಕ್ರಮಣ ಮಾಡದವನನ್ನು ಸೆರೆ ಹಿಡಿಯುವುದು ನ್ಯಾಯ ಮತ್ತು ಉತ್ತಮ ವರ್ತನೆಗೆ ವಿರುದ್ಧವಾಗಿದೆ ಎಂದು ಇಸ್ಲಾಮ್ ಒತ್ತಿ ಹೇಳುತ್ತದೆ. ಇಂದಿನ ಕಾಲದಲ್ಲಿ ಒಂದು ಸರಕಾರ ಅಥವಾ ತಥಾಕಥಿತ ಸರಕಾರ ಇಸ್ಲಾಮಿನ ಹೆಸರಿನಲ್ಲಿ ಈ ಕೆಲಸ ಮಾಡುವುದಾದರೆ ಅದು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣ ವಿರುದ್ಧವೂ ನಿಷಿದ್ಧವೂ ಆಗಿದೆ.

ಯುದ್ಧ ಕೈದಿಗಳ ಬಗ್ಗೆ ಇಸ್ಲಾಮ್ ಹೀಗೆ ಪುನಃ ಹೇಳುತ್ತದೆ: فَإِمَّا مَنًّا بَعْدُ وَإِمَّا فِدَاءً "ಅನಂತರ ಒಂದೋ ಅವರೊಂದಿಗೆ (ಯುದ್ಧ ಕೈದಿಗಳೊಂದಿಗೆ) ಔದಾರ್ಯದಿಂದ ವರ್ತಿಸಿರಿ ಅಥವಾ ಅವರಿಂದ ಪರಿಹಾರ ಧನವನ್ನು ಪಡೆಯಿರಿ." (ಪವಿತ್ರ ಖುರ್‌ಆನ್ 47:5)

ಯುದ್ಧ ಕೈದಿಗಳೊಂದಿಗೆ ದಯೆಯಿಂದ ವರ್ತಿಸಬೇಕೆಂದು ಆಜ್ಞಾಪಿಸಲಾಗಿದೆ. ಅಂದಿನ ಕಾಲಘಟ್ಟದಲ್ಲಿ ಯುದ್ಧದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಸೈನಿಕ ತನ್ನ ಆಯುಧ ಮತ್ತು ಸಲಕರಣೆಗಳನ್ನು ತಾನೇ ಸಿದ್ಧಪಡಿಸಬೇಕಾಗುತ್ತಿತ್ತು. ಅವನು ಸೆರೆ ಹಿಡಿಯಲ್ಪಟ್ಟರೆ ಅವನೇ ಬಿಡುಗಡೆಗೆ ಹೊಣೆಯಾಗುತ್ತಿದ್ದನು. ಅವನು ಸೆರೆ ಹಿಡಿಯಲ್ಪಟ್ಟರೆ ಅವನು ಸ್ವತಃ ತನ್ನ ಬಿಡುಗಡೆಗೆ ವ್ಯವಸ್ಥೆ ಮಾಡುತ್ತಿದ್ದನು ಅಥವಾ ಅವನ ಸಂಬಂಧಿಕರು ಅವನ ಬಿಡುಗಡೆಗೆ ಏರ್ಪಾಡು ಮಾಡುತ್ತಿದ್ದರು. ಕೆಲವು ಸಾರಿ ಕೆಲವು ಸಂಬಂಧಿಕರು ಕಠಿಣ ಹೃದಯರಾಗಿ ಸಂಪತ್ತು ಸಂಗ್ರಹಿಸಿಡಲು ಅವನನ್ನು ಗುಲಾಮಗಿರಿಯಲ್ಲಿ ಬಿಟ್ಟುಬಿಡುತ್ತಿದ್ದರು. ಕೈದಿಗೆ ಹತ್ತಿರದ ಸಂಬಂಧಿಕರಿಲ್ಲದಿದ್ದರೆ ದೂರದ ಸಂಬಂಧಿಕರು ಹೀಗೆ ಮಾಡುತ್ತಿದ್ದರು. ಕೆಲವು ಸಾರಿ ಯುದ್ಧ ಕೈದಿಗೆ ಪರಿಹಾರ ಧನ ನೀಡುವ ಯಾವ ದಾರಿಯೂ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَالَّذِينَ يَبْتَغُونَ الْكِتَابَ مِمَّا مَلَكَتْ أَيْمَانُكُمْ فَكَاتِبُوهُمْ إِنْ عَلِمْتُمْ فِيهِمْ خَيْرًا وَآتُوهُمْ مِنْ مَالِ اللَّهِ الَّذِي آتَاكُمْ

"ನಿಮ್ಮ ಗುಲಾಮರ ಪೈಕಿ ಯಾರಾದರೂ ಬಿಡುಗಡೆಯ ಒಪ್ಪಂದವನ್ನು ಬರೆದು ಕೊಡಲು ಅಪೇಕ್ಷಿಸಿದರೆ– ಅವರಿಗೆ ಅರ್ಹತೆ ಇದೆ ಎಂದು ನಿಮಗೆ ಮನವರಿಕೆಯಾದರೆ– ಬರೆದು ಕೊಡಿರಿ. ನಿಮಗೆ ಅಲ್ಲಾಹನು ದಯಪಾಲಿಸಿದ ಸಂಪತ್ತಿನಿಂದ ಅವರಿಗೂ ಕೊಡಿರಿ." (24:34)

ಯುದ್ಧ ಕೈದಿಗಳಲ್ಲಿ ಕೆಲವರನ್ನು ನೀವು ಔದಾರ್ಯದಿಂದ ಬಿಡುಗಡೆ ಮಾಡಲಾಗುವುದಿಲ್ಲ ಮತ್ತು ಅವರ ಸಂಬಂಧಿಕರು ಅವರನ್ನು ಪರಿಹಾರ ನೀಡಿ ಬಿಡುಗಡೆ ಮಾಡುವುದೂ ಇಲ್ಲ. ಅಂತಹ ಜನರು ಸ್ವತಃ ತಮ್ಮ ಶಕ್ತಿಸಾಮರ್ಥ್ಯ ಬಳಸಿ ದುಡಿದು ಹಣ ಸಂಪಾದಿಸಿ ಪರಿಹಾರದ ಹಣ ಸಲ್ಲಿಸಲು ಇಚ್ಛಿಸುವರಾದರೆ, ಅಂತಹ ಜನರನ್ನು ಬಿಡುಗಡೆ ಮಾಡಿದರೆ ಅವರಿಗೆ ಸ್ವತಃ ಸಂಪಾದಿಸಲು ಸಾಧ್ಯವಾಗುವುದೆಂದು ಭಾವಿಸಬಹುದಾದರೆ, ಅವರನ್ನು ಒಪ್ಪಂದ ಬರೆಯಿಸಿ ಬಿಡುಗಡೆ ಮಾಡಬೇಕು. ಪವಿತ್ರ ಖುರ್‌ಆನ್ ಒಂದು ಹೆಜ್ಜೆ ಮುಂದೆ ಸಾಗಿ ಹೀಗೆ ಹೇಳುತ್ತದೆ: ಅಂತಹ ಯುದ್ಧ ಕೈದಿಗಳಿಗೆ ಬಿಡುಗಡೆಗೆ ಧನ ಸಹಾಯ ಸಹ ಮಾಡಬೇಕು. ಮುಸ್ಲಿಮರು ತಮ್ಮ ಸಂಪಾದನೆಯಿಂದ ದೇಣಿಗೆ ನೀಡಬೇಕು ಮತ್ತು ಸಾಂಪತ್ತಿಕ ಸಹಾಯದ ಮೂಲಕ ಅವರನ್ನು ವಿಮೋಚಿಸಲು ಪ್ರಯತ್ನಿಸಬೇಕು.

ಇಂದಿನ ಕಾಲದಲ್ಲಿ ನ್ಯಾಯ ಮತ್ತು ಉತ್ತಮ ವರ್ತನೆ ಬಗ್ಗೆ ಘೋಷಣೆ ಮಾಡುವವರು ಇಂತಹ ಶ್ರೇಷ್ಠ ಮಾದರಿಯ ಪ್ರಕಟಣೆಯ ಸಮೀಪಕ್ಕೆ ಕೂಡ ಬರುವುದಿಲ್ಲ. ಮಾನವ ಹಕ್ಕುಗಳ ಬಗ್ಗೆ ಹೋರಾಡುವವರೆಂದು ಹೇಳಿಕೊಳ್ಳುವ ಗುಂಪುಗಳು ಧಾರ್ಮಿಕ ಅಥವಾ ರಾಜಕೀಯ ಕಾರಣದಿಂದ ಸೆರೆ ಹಿಡಿಯಲ್ಪಟ್ಟವರನ್ನು ಕೂಡ ಬಿಡುಗಡೆಗೊಳಿಸಲು ಸಮರ್ಥರಾಗುವುದಿಲ್ಲ — ಯುದ್ಧ ಕೈದಿಗಳ ವಿಷಯ ಬಿಡಿರಿ.

ನಾನು ಹಿಂದೆ ಹೇಳಿದ ಹಾಗೆ ಮುಸ್ಲಿಮರು ತಮ್ಮ ಧರ್ಮದ ಉಪದೇಶಗಳನ್ನು ಮರೆತು ಬಿಟ್ಟಿರುವರು. ಅವರು ತಮ್ಮ ಧರ್ಮದ ಉಪದೇಶಗಳ ಬಗ್ಗೆ ಗಾಢವಾಗಿ ಚಿಂತಿಸುವರಾದರೆ ಅವರು ಎಂದೂ ಇಂದು ಇಸ್ಲಾಮಿಗೆ ಕೆಟ್ಟ ಹೆಸರು ತರುವ ರೀತಿಯಲ್ಲಿ ಅನ್ಯಾಯದಿಂದ ಜನರನ್ನು ಸೆರೆ ಹಿಡಿಯುತ್ತಿರಲಿಲ್ಲ.

ನಾವು ಇಸ್ಲಾಮಿನ ಉಪದೇಶಗಳ ಬಗ್ಗೆ ಚರ್ಚಿಸುತ್ತಿದ್ದೇವೆ.

ಇಸ್ಲಾಮ್ ಮಾನವರ ಸ್ವಾತಂತ್ರ್ಯದ ಹಕ್ಕುಗಳನ್ನು ಪ್ರತಿಪಾದಿಸುತ್ತಾ ಹೀಗೆ ಉಪದೇಶಿಸುತ್ತಿದೆ: ಒಬ್ಬನು ಮುಸ್ಲಿಮರ ಶತ್ರು ಪಕ್ಷದಲ್ಲಿ ಖಡ್ಗವೆತ್ತಿ ಹೋರಾಡಿದ ನಂತರ ಯುದ್ಧದಲ್ಲಿ ಸೋತ ಕಾರಣ ಅಥವಾ ಬೇರೆ ಕಾರಣದಿಂದ ಸೆರೆ ಹಿಡಿಯಲ್ಪಟ್ಟರೆ ಮುಸ್ಲಿಮರು ಅವನ ಬಿಡುಗಡೆಗೆ ದಯಾಪೂರ್ಣವಾಗಿ ಪ್ರಯತ್ನಿಸಬೇಕು.

ನಾನು ಹಿಂದೆ ಹೇಳಿದ ಹಾಗೆ, ಜಪಾನ್ ದೇಶದಲ್ಲಿ ಬಾಂಬ್ ದಾಳಿ ಮಾಡಿ ನಾಗರಿಕರನ್ನು ಸಾಮೂಹಿಕ ಹತ್ಯೆ ಮಾಡಿದ ಬಗ್ಗೆ ಈಗ ಸಹ ಹೇಗೆ ಸಮರ್ಥಿಸಲಾಗುತ್ತಿದೆ ಎಂಬ ಬಗ್ಗೆ ಪ್ರಸ್ತಾಪಿಸಿರುವೆನು. ನಾವು ಆ ಕಾಲದ ಚಿತ್ರಗಳನ್ನು ನೋಡಿದರೆ ಒಬ್ಬನು ಮೆಟ್ಟಲುಗಳ ಮೇಲೆ ಕುಳಿತಿರುವಾಗ ಅವನ ಚರ್ಮ ಕೂಡಲೆ ಕರಗಿ ನೇತಾಡುವುದು ಮತ್ತು ಅವನು ವಿಗ್ರಹದ ಹಾಗೆ ಆಗಿರುವುದನ್ನು ಕಾಣಬಹುದು. ಆಟಮ್‌ಬಾಂಬ್ ಧಾಳಿಯಿಂದ ತಕ್ಷಣ ಮೃತ್ಯು ಸಂಭವಿಸಿದೆ ಮತ್ತು ಅನಂತರ ಸಹ ದೀರ್ಘಕಾಲ ರೇಡಿಯೇಶನ್ ಕಾರಣ ಸಾವು ಸಂಭವಿಸುತ್ತಾ ಇತ್ತು ಮತ್ತು ಮಕ್ಕಳು ಅಂಗವಿಕಲರಾಗಿ ಜನಿಸುತ್ತಿದ್ದರು. ಇಷ್ಟೆಲ್ಲ ವರ್ಷಗಳ ನಂತರ ಜಪಾನಿನ ಯುದ್ಧದ ಬಗ್ಗೆ ಈಗ ಪ್ರಸ್ತಾಪಿಸುತ್ತಾ ಇರುವುದು ಏಕೆ? ಅನ್ಯಾಯ ಮಾಡಿದವರನ್ನು ಈ ಜನರು ಉತ್ತೇಜಿಸುತ್ತಿದ್ದಾರೆಯೇ?

ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದ್ದರು: "ಶತ್ರುಗಳನ್ನು ಯುದ್ಧದಲ್ಲಿ ಸೋಲಿಸಿದ ನಂತರ ಅವರು ಸೆರೆ ಹಿಡಿಯಲ್ಪಟ್ಟರೆ ಅವರ ಮುಖವನ್ನು ವಿಕೃತ ಗೊಳಿಸಬಾರದು. ಶತ್ರುವನ್ನು ಯುದ್ಧದಲ್ಲಿ ವಂಚಿಸಬಾರದು. ಯಾವುದೇ ರೀತಿಯ ಮೋಸದ ತಂತ್ರ ಹೂಡಬಾರದು." (ಸಹೀಹ್ ಮುಸ್ಲಿಮ್)

"ಯುದ್ಧದಲ್ಲಿ ಮಕ್ಕಳನ್ನೂ ಮಹಿಳೆಯರನ್ನೂ ಕೊಲ್ಲಬಾರದು. ಪುರೋಹಿತರನ್ನೂ ಮತಪಂಡಿತರನ್ನೂ ಕೊಲ್ಲಬಾರದು. ವೃದ್ಧರನ್ನೂ ಮಕ್ಕಳನ್ನೂ ಮಹಿಳೆಯರನ್ನೂ ಆಕ್ರಮಿಸಬಾರದು."

(ಮುಸ್‌ನದ್ ಅಹ್ಮದ್ ಬಿನ್ ಹಂಬಲ್)

"ಯಾವಾಗಲೂ ಶಾಂತಿಯಿಂದಲೂ ಕರುಣೆಯಿಂದಲೂ ವರ್ತಿಸಬೇಕು. ಶತ್ರುಗಳ ದೌರ್ಜನ್ಯದ ಕಾರಣದಿಂದ ಶತ್ರುಗಳ ದೇಶವನ್ನು ಪ್ರವೇಶಿಸಿ ಯುದ್ಧ ಮಾಡಬೇಕಾಗಿ ಬಂದರೆ ಮುಸ್ಲಿಮರು ಆ ದೇಶದ ಸಾಮಾನ್ಯ ಜನರ ಹೃದಯಗಳಲ್ಲಿ ಭಯವುಂಟುಮಾಡಬಾರದು ಮತ್ತು ಅವರೊಂದಿಗೆ ಕಟುವಾಗಿ ವರ್ತಿಸಬಾರದು." (ಸಹೀಹ್ ಮುಸ್ಲಿಮ್)

"ಸೈನ್ಯದ ಸಂಚಾರ ಜನರಿಗೆ ಅಡ್ಡಿಯನ್ನು ಮತ್ತು ಹಿಂಸೆಯನ್ನು ಉಂಟುಮಾಡಬಾರದು." (ಸುನನ್ ಅಬೂ ದಾವೂದ್).

"ಶತ್ರುಗಳ ಮುಖವನ್ನು ಗಾಯಗೊಳಿಸಿ ವಿಕೃತಗೊಳಿಸಬಾರದು. ಅವರಿಗೆ ಅತ್ಯಂತ ಕಡಿಮೆ ಹಾನಿ ಉಂಟುಮಾಡಬೇಕು." (ಸ. ಬುಖಾರಿ)

"ಒಬ್ಬ ಮುಸ್ಲಿಮನು ಅನ್ಯಾಯವಾಗಿ ಒಬ್ಬ ಯುದ್ಧ ಕೈದಿಯ ಮೇಲೆ ದೌರ್ಜನ್ಯ ಮಾಡಿದರೆ ಆ ಮುಸ್ಲಿಮ್ ಕೂಡಲೆ ಅವನನ್ನು ಬಿಡುಗಡೆ ಮಾಡಬೇಕು." (ಸಹೀಹ್ ಮುಸ್ಲಿಮ್)

"ಯುದ್ಧ ಕೈದಿಗಳ ಸೌಕರ್ಯಗಳಿಗೆ ಗಮನ ಹರಿಸಬೇಕು. ಇಬ್ಬರು ಕೈದಿಗಳು ಪರಸ್ಪರ ಸಂಬಂಧಿಕರಾಗಿದ್ದರೆ ಅವರನ್ನು ಜೊತೆಯಲ್ಲಿ ಇರಿಸಬೇಕು; ಬೇರೆಯಾಗಿ ಇರಿಸಬಾರದು." (ತಿರ್ಮಿಧೀ)

"ಯುದ್ಧ ಕೈದಿಗಳ ಯಜಮಾನನು ತಾನು ತಿನ್ನುವ ಆಹಾರವನ್ನೇ ಅವರಿಗೆ ಕೊಡಬೇಕು."

ಇವುಗಳನ್ನೆಲ್ಲ ಹೇಗೆ ವರ್ಣಿಸಲು ಸಾಧ್ಯ? ಇವುಗಳೆಲ್ಲ ನ್ಯಾಯಪಾಲನೆಯ ಮಟ್ಟಕ್ಕಿಂತ ಮೇಲೆ ಇವೆ. ವಾಸ್ತವಿಕವಾಗಿ ಇವುಗಳನ್ನು ಅರಬಿ ಭಾಷೆಯಲ್ಲಿ ಇಹ್‌ಸಾನ್ (ಅನ್ಯರಿಗೆ ಪ್ರಯೋಜನ ಉಂಟುಮಾಡುವುದು) ಎನ್ನುತ್ತಾರೆ. ಇಂತಹ ರೀತಿ ಕೈದಿಗಳೊಂದಿಗೆ ಬೇರೆ ಯಾರು ವರ್ತಿಸುತ್ತಾರೆ?

ಹಿಂದಿನ ಕಾಲದ ಯಾವುದೇ ತತ್ವೋಪದೇಶಗಳು ಇವುಗಳಿಗೆ ಸರಿಹೋಲುತ್ತವೆಯೇ? ಇಂದಿನ ಕಾಲದ ಮಾನವ ಹಕ್ಕುಗಳ ನಿಯಮಗಳು ಈ **ಅದ್‌ಲ್** (ನ್ಯಾಯ) ಮತ್ತು **ಇಹ್‌ಸಾನ್** (ಪರೋಪಕಾರ) ಮಟ್ಟವನ್ನು ತಲಪುತ್ತವೆಯೇ?

ನಾನು ಯುದ್ಧ ಕೈದಿಗಳ ಬಗ್ಗೆ ವಿವರಿಸಿದ ಎಲ್ಲವೂ ಯುದ್ಧವನ್ನು ಮುಂದುವರಿಸುವ ಉದ್ದೇಶ ಹೊಂದಿದವುಗಳಲ್ಲ. ಅವು ಯುದ್ಧಗಳನ್ನು ತಡೆಯುವವುಗಳಾಗಿವೆ.

ಹಝ್ರತ್ ಪೈಗಂಬರರು(ಸ) ಮದೀನದಲ್ಲಿ ಒಪ್ಪಂದ ಮಾಡಿದಾಗ ಅವರು ಯಹೂದಿಯರಿಗೂ ಮುಸ್ಲಿಮರಿಗೆ ನೀಡಲಾದ ಹಕ್ಕುಗಳನ್ನೇ ನೀಡಿದರು. ಸತ್ಯವಿಶ್ವಾಸಿಗಳು ಯಹೂದಿಯರರೊಂದಿಗೆ ಅನ್ಯಾಯವಾಗಿ ವರ್ತಿಸಬಾರದೆಂದೂ ಯಾವನಾದರೂ ಸತ್ಯವಿಶ್ವಾಸಿ ಅಥವಾ ಬೇರೆ ಯಾರಾದರೂ ಯಹೂದಿಯರೊಂದಿಗೆ ಅನ್ಯಾಯದಿಂದ ವರ್ತಿಸಿದರೆ ಅದನ್ನು ತಡೆಯಲು ಯಹೂದಿಯರಿಗೆ ಸಹಾಯ ನೀಡಲಾಗುವುದು ಎಂದು ಶರತ್ತು ವಿಧಿಸಲಾಗಿತ್ತು. (ಸೀರತ್ತುನ್ನಬೀ – ಹಿಬ್ನು ಹಿಶಾನ್)

ಮದೀನದ ಒಪ್ಪಂದದ ಅನೇಕ ಶರತ್ತುಗಳಲ್ಲಿ ಈ ಶರತ್ತು ಯಹೂದಿಯರಿಗೆ ಶಾಂತಿಯ ಖಾತರಿ ನೀಡುತ್ತಿತ್ತು. ಅವರು ಮದೀನದಲ್ಲಾಗಲೀ ಮದೀನದಿಂದ ಹೊರಗಾಗಲೀ ಜೀವಿಸುವಾಗ ಇದು ಅವರಿಗೆ ಅನ್ವಯಿಸುತ್ತಿತ್ತು.

ಹಝ್ರತ್ ಪೈಗಂಬರರು(ಸ) ಸ್ಥಾಪಿಸಿದ ನ್ಯಾಯ ವ್ಯವಸ್ಥೆ ಆ ರೀತಿ ಇತ್ತು. ಮುಸ್ಲಿಮರು ನ್ಯಾಯಪಾಲನೆಯಲ್ಲಿ ಈ ಮಟ್ಟವನ್ನು ಸ್ಥಾಪಿಸುವವರಾದರೆ ಮತ್ತು ತಮ್ಮ ಒಪ್ಪಂದಗಳನ್ನು ಪಾಲಿಸು ವವರಾದರೆ ಅವರು ಎಂದೂ ಹೀನೈಸುವಿಕೆಯನ್ನು ಅನುಭವಿಸಲಾರರು. ಮುಸ್ಲಿಮರ ಚರಿತ್ರೆ ತೋರಿಸಿಕೊಡುವುದೇನೆಂದರೆ, ಅವರು ತಮ್ಮ ಒಪ್ಪಂದಗಳನ್ನು ಪಾಲಿಸುತ್ತಾ ಇದ್ದಾಗ ಅವರು ಜಯಶಾಲಿಗಳಾಗುತ್ತಾ ಇದ್ದರು. ಆದರೆ ಮುಸ್ಲಿಮರು ತಮ್ಮ ಒಪ್ಪಂದಗಳನ್ನು ಈಡೇರಿಸು ವುದನ್ನು ನಿಲ್ಲಿಸಿದಾಗ ಮತ್ತು ನ್ಯಾಯಪಾಲನೆಯನ್ನು ತ್ಯಜಿಸಿದಾಗ ಅವರು ಹೀನೈಸಲ್ಪಟ್ಟರು. ಒಪ್ಪಂದವನ್ನು ಪಾಲಿಸಿದ ಒಂದು ದೊಡ್ಡ ಉದಾಹರಣೆ ರೋಮನ್ ಸೈನ್ಯ ಆಕ್ರಮಿಸಿದಾಗ ಮುಸ್ಲಿಮರು ದೇಶ ಬಿಟ್ಟುಹೋದ ಸಂದರ್ಭದ್ದಾಗಿದೆ. ಮುಸ್ಲಿಮರು ಮುಸ್ಲಿಮೇತರರಿಗೆ

ಸಂರಕ್ಷಣೆ ನೀಡಲು ಮತ್ತು ಶಾಂತಿ ಸ್ಥಾಪಿಸಲು ಪಡೆದ ತೆರಿಗೆಯ ಹಣವನ್ನು ಅವರಿಗೆ ಹಿಂತಿರುಗಿಸಿದರು. ಮುಸ್ಲಿಮೇತರರಿಗೆ ರಕ್ಷಣೆ ಮತ್ತು ಶಾಂತಿ ನೀಡಲು ಅಸಾಧ್ಯವಾದ ಕಾರಣ ತಮಗೆ ಆ ಹಣವನ್ನು ಇಟ್ಟುಕೊಳ್ಳುವ ಹಕ್ಕು ಇಲ್ಲವೆಂದು ಮುಸ್ಲಿಮರು ಯೋಚಿಸಿ ಹಣವನ್ನು ಹಿಂತಿರುಗಿಸಿದರು. ಅಲ್ಲಿನ ಮುಸ್ಲಿಮೇತರ ಜನರ ಪ್ರತಿಕ್ರಿಯೆ ಸಹ ಚರಿತ್ರೆಯ ಒಂದು ಸುವರ್ಣ ಅಧ್ಯಾಯವಾಗಿದೆ. ಅವರು ಮುಸ್ಲಿಮ ರೊಂದಿಗೆ ಹೇಳಿದರು: ''ನಾವು ನಮ್ಮವರಿಂದಲೇ ದೌರ್ಜನ್ಯ ಪೀಡಿತ ರಾಗಿದ್ದೆವು. ಆದರೆ ಮುಸ್ಲಿಮರು ನಮ್ಮ ದೇಶವನ್ನು ಪ್ರವೇಶಿಸಿದಾಗ ಒಪ್ಪಂದಗಳನ್ನು ಪಾಲಿಸಿದರು ಮತ್ತು ನ್ಯಾಯದ ಉತ್ತಮ ಮಟ್ಟವನ್ನು ಸ್ಥಾಪಿಸಿದರು. ನಾವು ಮುಸ್ಲಿಮರಾದ ನಿಮ್ಮೊಂದಿಗೆ ಹೋರಾಡುವೆವು.''

ಆ ರೀತಿ ಮುಸ್ಲಿಮರಿಗೆ ರೋಮನ್ ಸೈನ್ಯವನ್ನು ಸೋಲಿಸಲು ಸಾಧ್ಯವಾಯಿತು. ಮುಸ್ಲಿಮ್ ಆಡಳಿತೆ ಪುನಃ ಸ್ಥಾಪಿಸಲ್ಪಟ್ಟಿತು. ಮುಸ್ಲಿಮರು ನಗರವನ್ನು ಪ್ರವೇಶಿಸಿದಾಗ ಅವರಿಗೆ ಸಂಭ್ರಮ ಭರಿತ ಸ್ವಾಗತ ಲಭಿಸಿತು. (ಖಿತಾಬುಲ್ ಖಿರಾಜ್ — ಅಬೂ ಯೂಸುಫ್‌ರಿಂದ ರಚಿತ).

ಮುಸ್ಲಿಮ್ ಸರಕಾರಗಳು ಈ ಘಟನೆಯಿಂದ ನೀತಿಪಾಠ ಕಲಿಯುವುದಾದರೆ, ಅವರು ತಮ್ಮ ಜನರ ವಿರುದ್ಧ ಮತ್ತು ಅನ್ಯರ ವಿರುದ್ಧ ಮಾಡುವ ಅನ್ಯಾಯಗಳನ್ನು ನಿಲ್ಲಿಸುವುದಾದರೆ ಅವರು ಅಪಮಾನಿತರಾಗುವುದಕ್ಕೆ ಮತ್ತು ಹೀನೈಸಲ್ಪಡುವುದಕ್ಕೆ ಬದಲಾಗಿ ಲೋಕದ ನಾಯಕರಾಗುವರು. ಆದರೆ ಹೀಗೆ ಸಂಭವಿಸಲು ಅವರು ಈ ಕಾಲಘಟ್ಟದ ಇಮಾಮರ ಕರೆಗೆ ಕಿವಿಗೊಡಬೇಕು. ಪವಿತ್ರ ಖುರ್‌ಆನ್‌ನಲ್ಲಿ ನ್ಯಾಯಪಾಲನೆ, ಅನ್ಯರಿಗೆ ಒಳಿತು ಮಾಡುವ ಬಗ್ಗೆ ಮತ್ತು ನಿಕಟ ಬಂಧುಗಳಿಗೆಂಬಂತೆ ಕೊಡುವ ಬಗ್ಗೆ ಅಸಂಖ್ಯಾತ ಆಜ್ಞೆಗಳಿವೆ. ಹಝ್ರತ್ ಪೈಗಂಬರರ(ಸ) ಜೀವಿತ ಸಹ ಇಂತಹ ಉದಾಹರಣೆಗಳಿಂದ ತುಂಬಿವೆ.

ಇಂದಿನ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹರು(ಅ) إِنَّ اللَّهَ يَأْمُرُ بِالْعَدْلِ وَالإِحْسَانِ وَإِيتَاءِ ذِي الْقُرْبَى ''ನ್ಯಾಯನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ.'' (16:91) ಎಂಬ ಪವಿತ್ರ ಖುರ್‌ಆನ್ ವಚನದ ಬಗ್ಗೆ ತನ್ನ ಗ್ರಂಥಗಳಲ್ಲಿ ಅನೇಕ ಕಡೆ ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಈ ಎಲ್ಲ ಉಲ್ಲೇಖಗಳನ್ನು ಓದಿ ಹೇಳಲು ಹಲವು ಗಂಟೆಗಳು ಬೇಕಾಗಬಹುದು.

''ನಿಕಟ ಬಂಧುಗಳಿಗೆ ಎಂಬಂತೆ ಅನ್ಯರಿಗೆ ಕೊಡುವ'' ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ಇದ್ದ ಅಭಿಲಾಷೆಯ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಅದು ಸರ್ವಶಕ್ತನಾದ ದೇವನಿಂದ ದೂರಸರಿದ ಜನರಿಗೆ ಸಂಬಂಧಿಸಿದೆ. ಸತ್ಯವಿಶ್ವಾಸಿಗಳನ್ನು ಮಾತ್ರವಲ್ಲ ಮಾನವರೆಲ್ಲರನ್ನೂ ಎಂದರೆ ವಿಗ್ರಹಾರಾಧಕರನ್ನು, ಅವಿಶ್ವಾಸಿಗಳನ್ನು ಮತ್ತು ಎಲ್ಲ ಧರ್ಮಗಳ ಜನರನ್ನು ನಿಕಟ ಬಂಧುಗಳಂತೆ ಕಾಣಬೇಕೆಂದು ಅವರು ಬಯಸಿದ್ದರು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ್ರತ್ ಪೈಗಂಬರರ(ಸ) ಕಾಳಜಿಯನ್ನು ಉಲ್ಲೇಖಿಸಿದ್ದಾನೆ. ಸರ್ವಶಕ್ತನಾದ ದೇವನಿಂದ ದೂರಸರಿದು ತಮ್ಮ ಪರಲೋಕ ಜೀವಿತವನ್ನು ಕೆಡಿಸಿ ಸರ್ವಶಕ್ತನಾದ ದೇವನ ಅಸಂತುಷ್ಟಿ ಮತ್ತು ಕೋಪಕ್ಕೆ ಗುರಿಯಾದ ಜನರ ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ಇದ್ದ ದುಃಖ ಆ ಜನರ ಮಾತಾಪಿತೃಗಳು ಅವರ ಬಗ್ಗೆ ಹೊಂದುವ ದುಃಖಕ್ಕಿಂತ ಹೆಚ್ಚಿಗೆ ಇತ್ತು. ಹಗಲು ಅವರು ಅದರ ಬಗ್ಗೆ ಆತಂಕಿತರಾಗಿರುತ್ತಿದ್ದರು. ರಾತ್ರಿ ಅವರು ಅದರ ಬಗ್ಗೆ ಚಿಂತಿಸಿ ಕಳವಳಪಡುತ್ತಿದ್ದರು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅವರ ಬಗ್ಗೆ ದುಃಖದ ಕಾರಣದಿಂದ ಅವರು ಬಹಳ ನೋವು ಅನುಭವಿಸುತ್ತಿದ್ದರು. ಹಝ್ರತ್ ಪೈಗಂಬರರ(ಸ) ಈ ದುಃಖ ಮತ್ತು ಸಂಕಟದ ಬಗ್ಗೆ ಅಲ್ಲಾಹನು ಹೀಗೆ ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಿದ್ದಾನೆ: لَعَلَّكَ بَاخِعٌ نَفْسَكَ أَلاَّ يَكُونُوا مُؤْمِنِينَ ''ಪ್ರಾಯಶಃ, ಅವರು ನಂಬುವುದಿಲ್ಲವೆಂಬ ಕಾರಣದಿಂದ (ವ್ಯಾಕುಲಗೊಂಡು) ನೀನು ನಿನ್ನ ಜೀವವನ್ನು ಹಾನಿಗೊಳಿಸುವೆ.'' (26:4).

ಮಾನವರ ಬಗ್ಗೆ ಹೃತ್ಪೂರ್ವಕ ನೋವನ್ನು ಪ್ರಕಟಿಸುವ ಇದಕ್ಕಿಂತ ಮಿಗಿಲಾದ ಪದ ಪುಂಜಗಳಿಲ್ಲ.

ಹಝ್ರತ್ ಪೈಗಂಬರರು(ಸ) ಹೀಗೆ ಭಾವನೆಗಳನ್ನು ಹೊಂದಿದುದು ಕೇವಲ ಮುಸ್ಲಿಮರ ಸಂಖ್ಯೆಯನ್ನು ವರ್ಧಿಸುವ ದೃಷ್ಟಿಯಿಂದ ಅಲ್ಲ. ಅವರಿಗೆ ಮಾನವರ ಬಗ್ಗೆ ಗಾಢವಾದ ಹಿತೈಷಿ ಕಾಳಜಿ ಇತ್ತು. ಹೀಗಿದ್ದರೂ ಇಸ್ಲಾಮಿನ ವಿಮರ್ಶಕರು ಇಸ್ಲಾಮೀ ಉಗ್ರವಾದಿ ಗುಂಪುಗಳ ಕೃತ್ಯಗಳು ಇಸ್ಲಾಮ್ ಧರ್ಮದ ಉಪದೇಶಗಳ ಕಾರಣದಿಂದಾಗಿವೆ ಎಂದು ಹೇಳುತ್ತಾರೆ ಅಥವಾ ಅವರು ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳನ್ನು ಆಕ್ಷೇಪಿಸುತ್ತಾರೆ. ಮುಸ್ಲಿಮ್ ಉಗ್ರವಾದಿಗಳು ಇಸ್ಲಾಮ್ ಧರ್ಮದ ಉಪದೇಶಗಳಿಂದ ದೂರಸರಿದು ಹೋಗಿರುವ ಕಾರಣದಿಂದ ಭೀಕರ ಕೃತ್ಯಗಳನ್ನು ಮಾಡುತ್ತಾರೆ. ಆದುದರಿಂದ ಹಿಂದೆ ನಾನು ಹೇಳಿದ ಹಾಗೆ ಇಸ್ಲಾಮಿನ ನೈಜ ತತ್ವಗಳನ್ನು ಅನುಸರಿಸಲು ಯಾವುದೇ ಉಗ್ರವಾದಿ ಮುಸ್ಲಿಮ್ ಗುಂಪಿನ ಆವಶ್ಯಕತೆ ಇಲ್ಲ. ಯಾರನ್ನು ಸರ್ವಶಕ್ತನಾದ ಅಲ್ಲಾಹನು ನಿಯೋಜಿಸಿರುವನೋ ಅವರನ್ನು ಅನುಸರಿಸುವುದು ಆವಶ್ಯಕವಾಗಿದೆ. ಇಸ್ಲಾಮನ್ನು ವಿಮರ್ಶಿಸುವವರು ತಮ್ಮ ಕಣ್ಣುಗಳನ್ನು ತೆರೆಯಬೇಕು ಮತ್ತು ಬುದ್ಧಿಯನ್ನು ಬಳಸಿ ಇಸ್ಲಾಮಿನ ಸುಂದರ ಉಪದೇಶಗಳನ್ನು ನೋಡಬೇಕು.

ಇಂದಿನ ಕಾಲದಲ್ಲಿ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನ ಕರ್ತವ್ಯವೇನೆಂದರೆ, ನ್ಯಾಯಪಾಲನೆಯನ್ನು ಮಾಡುವ ಅಲ್ಲಾಹನ ಆಜ್ಞೆಯನ್ನು ಪಾಲಿಸಿಕೊಂಡು ಅನ್ಯರಿಗೆ ಒಳಿತನ್ನು ಮಾಡಬೇಕು ಮತ್ತು ಜೀವಿತದ ಎಲ್ಲ ಕಾಲಗಳಲ್ಲೂ ನಿಕಟ ಬಂಧುಗಳಿಗೆ ಕೊಡುವ ರೀತಿಯಲ್ಲಿ ಎಲ್ಲರಿಗೂ ಕೊಡಬೇಕು ಮತ್ತು ಲೋಕದ ಪ್ರತಿಯೊಬ್ಬ ವ್ಯಕ್ತಿಗೆ ಈ ಸಂದೇಶ ತಲಪಿಸಬೇಕು. ಸರ್ವಶಕ್ತನಾದ ದೇವನಿಂದ ಈ ಕಾಲಘಟ್ಟದಲ್ಲಿ ನಿಯೋಜಿಸಲ್ಪಟ್ಟ ಮಹಾನುಭಾವರ ಮಾತುಗಳನ್ನು ಆಲಿಸಬೇಕೆಂದು ಪ್ರತಿಯೊಬ್ಬನೊಂದಿಗೆ ಹೇಳಬೇಕು. ತನ್ನ ಯಜಮಾನರಿಗೆ ವಿಧೇಯರಾಗಿದ್ದ ವಾಗ್ದತ್ತ ಮಸೀಹರಿಗೆ ಇದ್ದ ನೋವು

ಅಹ್ಮದಿಯರೆಲ್ಲರೂ ಹೊಂದಬೇಕು. ಸರ್ವಶಕ್ತನಾದ ಅಲ್ಲಾಹನು ವಾಗ್ದತ್ತ ಮಸೀಹರೊಂದಿಗೆ ಸಹ ಹೀಗೆ ಹೇಳಿದ್ದನು: لَعَلَّكَ بَاخِعٌ نَفْسَكَ أَلاَّ يَكُونُوا مُؤْمِنِينَ ಪ್ರಾಯಶಃ ಅವರು ನಂಬುವುದಿಲ್ಲವೆಂಬ ಕಾರಣದಿಂದ (ವ್ಯಾಕುಲಗೊಂಡು) ನೀನು ನಿನ್ನ ಜೀವವನ್ನು ಹಾನಿಗೊಳಿಸುವೆ. (ಪವಿತ್ರ ಖುರ್‌ಆನ್ 26:4)

ಸರ್ವಶಕ್ತನಾದ ಅಲ್ಲಾಹನು ನಾವೆಲ್ಲರೂ ಮಾನವರ ಬಗ್ಗೆ ಇಂತಹ ಸಹಾನುಭೂತಿ ಹೊಂದುವಂತೆ ಮಾಡಲಿ. ಪ್ರತಿಯೊಬ್ಬ ಮನುಷ್ಯನು ತನ್ನ ಶಕ್ತಿ ಸಾಮರ್ಥ್ಯಗಳ ಮಟ್ಟವನ್ನು ಮತ್ತು ಭಾವನೆಗಳನ್ನು ಅನುಸರಿಸಿ ಈ ಸಹಾನುಭೂತಿಯನ್ನು ವರ್ಧಿಸಲು ಪ್ರಯತ್ನಿಸಬೇಕು.

ನಾಶದ ಕಡೆಗೆ ಸಾಗುವುದಕ್ಕೆ ಬದಲಾಗಿ ಲೋಕವು ನ್ಯಾಯಪಾಲನೆ, ಅನ್ಯರಿಗೆ ಒಳಿತು ಮಾಡುವ ಮತ್ತು ನಿಕಟ ಬಂಧುಗಳಿಗೆಂಬಂತೆ ಕೊಡುವ ವಿಷಯಗಳನ್ನು ಮನವರಿಕೆ ಮಾಡಿಕೊಂಡು ತನ್ನನ್ನು ರಕ್ಷಿಸುವಂತೆ ಮಾಡಲಿ. ಸರ್ವಶಕ್ತನಾದ ಅಲ್ಲಾಹನು ಲೋಕವು ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳುವಂತೆ ಮಾಡಲಿ. ಆ ಮೂಲಕ ಲೋಕವನ್ನು ಸ್ವರ್ಗ ಸಮಾನವನ್ನಾಗಿ ಮಾಡಲಿ ಮತ್ತು ಪರಲೋಕದ ಸ್ವರ್ಗಕ್ಕೆ ಮಾರ್ಗವನ್ನು ಉಂಟುಮಾಡುವಂತಾಗಲಿ.

ನಾವು ಪ್ರಾರ್ಥಿಸುವೆವು. ಸರ್ವಶಕ್ತನಾದ ಅಲ್ಲಾಹನು ಈ ಸಮ್ಮೇಳನವನ್ನು ಎಲ್ಲ ವಿಧಗಳಲ್ಲೂ ಸತ್ಯವಾಗಿ ಅನುಗ್ರಹಿಸಿರುವನು. ಸಮ್ಮೇಳನದಲ್ಲಿ ಉಪಸ್ಥಿತರಾದ ಜನರ ಸಂಬಂಧಿಸಿಯೂ ಹವಾಗುಣದ ಸಂಬಂಧಿಸಿಯೂ ಅನುಗ್ರಹಿಸಿರುವನು. ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನೆಲ್ಲ ಸುರಕ್ಷಿತವಾಗಿ ನಿಮ್ಮ ಮನೆಗಳಿಗೆ ತಲಪಿಸಲಿ. ನಾವು ಪ್ರಾರ್ಥಿಸೋಣ.

**(The Review Of Religions – December 2015ರ ಸಂಚಿಕೆಯಿಂದ. ಭಾಷಾಂತರ: ಯಂ. ಉಬೈದುಲ್ಲಾ).**

———*****———

## Statement about ownership and other particulars about the Newspaper Yugarashmi Quarterly (Form IV see Rule 8)

| | |
|---|---|
| 1. Place of publication | : Mangalore |
| 2. Period of its publication | : Quarterly |
| 3. Printer's Name | : Muhammad Yusuf |
| Whether citizen of India | : Yes |
| Address | : 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : Muhammad Yusuf |
| Whether citizen of India | : Yes |
| Address | : 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : Muhammad Yusuf |
| Whether citizen of India | : Yes |
| Address | : 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or shareholders hold ing more than one percent of the capital | : Jamath Ahmadiyya "Darussalam" Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.

Sd/-

Date : 1-6-2016

Muhammad Yusuf

# ನಮ್ಮ ದೇವ

♦ **ಡಾಕ್ಟರ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್**
(ಮಾಜಿ ಪ್ರೊಫೆಸರ್ ಎಸ್ಟ್ರಾನೊಮೀ, ಉಸ್ಮಾನಿಯಾ ಯುನಿವರ್ಸಿಟಿ, ಹೈದರಾಬಾದ್)
(ಖಾದಿಯಾನಿನ ಜಲ್ಸಾಸಾಲಾನದಲ್ಲಿ 1998ರಲ್ಲಿ ಮಾಡಿದ ಭಾಷಣ.)

اَللّٰهُ لَآ اِلٰهَ اِلَّا هُوَ لَهُ الْاَسْمَاءُ الْحُسْنٰى

'ಅಲ್ಲಾಹ್– ಅವನ ಹೊರತು ಬೇರೆ ದೇವನಿಲ್ಲ. ಅವನಿಗೆ ಅತಿ ಸುಂದರವಾದ ನಾಮಗಳಿವೆ.' (ಪವಿತ್ರ ಖುರ್‌ಆನ್ 20:9)

**ಮೆರೀ ರಾತ್ ದಿನ್ ಬಸ್ ಯಹೀ ಎಕ್ ಸದಾ ಹೈ**
**ಕೆ ಇಸ್ ಆಲಮೆ ಕೌನ್ ಕಾ ಎಕ್ ಖುದಾ ಹೈ**
**ಉಸೀನೆ ಹೈ ಪೈದಾ ಕಿಯಾ ಇಸ್ ಜಹಾಂ ಕೊ**
**ಸಿತಾರೋಂ ಕೊ ಸೂರಜ್ ಕೊ ಔರ್ ಆಸ್‌ಮಾಂ ಕೊ**
**ಓ ಹೈ ಏಕ್ ಉಸ್‌ಕಾ ನಹೀಂ ಕೊಯೀ ಹಮ್‌ಸರ್**
**ಓ ಮಾಲಿಕ್ ಹೈ ಸಬ್‌ಕಾ ಓ ಹಾಕಿಮ್ ಹೈ ಸಬ್‌ಪರ್.**

ನನ್ನ ಹಗಲು ರಾತ್ರಿ ಇದೊಂದೇ ಶಬ್ದವಿದೆ
ಈ ವಿಶ್ವಕ್ಕೊಬ್ಬ ಸೃಷ್ಟಿಕರ್ತನಾದ ದೇವನಿದ್ದಾನೆಂದು.
ಅವನೇ ಈ ವಿಶ್ವವನ್ನು ಸೃಷ್ಟಿಸಿದನು
ನಕ್ಷತ್ರಗಳನ್ನು, ಸೂರ್ಯನನ್ನು ಮತ್ತು ಆಕಾಶವನ್ನು.
ಅವನು ಏಕನು, ಅವನಿಗೆ ಯಾವ ಸಹಭಾಗಿಯೂ ಇಲ್ಲ.
ಅವನು ಎಲ್ಲರ ಒಡೆಯನಾಗಿದ್ದಾನೆ.
ಅವನು ಎಲ್ಲರ ಅಧಿಕಾರಿಯಾಗಿದ್ದಾನೆ.
(ಕಲಾಮೆ ಮಹ್‌ಮೂದ್).

ನನ್ನ ಭಾಷಣದ ಶೀರ್ಷಿಕೆ "ನಮ್ಮ ದೇವ" ಎಂದಾಗಿದೆ. ಹೊಸದಾಗಿ ಜಮಾಅತಿಗೆ ಸೇರುವವರನ್ನು ಪರಿಗಣಿಸಿ ಸರಳ ಭಾಷೆಯಲ್ಲಿ ಈ ವಿಷಯವನ್ನು ವಿವರಿಸಲು ನನ್ನೊಂದಿಗೆ ಅಪೇಕ್ಷಿಸಲಾಗಿದೆ – ಅಲ್ಲಾಹನು ಹಾಗೆ ಮಾಡುವ ಭಾಗ್ಯ ನನಗೆ ನೀಡಲಿ.

ಈ ವಿಶ್ವ ಮತ್ತು ನಾವೆಲ್ಲರೂ ಅನಾದಿಕಾಲದಿಂದ ಇದ್ದವರಲ್ಲ. ಭೂಮಿ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳು ಮತ್ತು ನಮ್ಮನ್ನೂ ಇತರ ಎಲ್ಲವುಗಳನ್ನೂ ಸೃಷ್ಟಿಸಿದವನು ನಮ್ಮ ದೇವನಾಗಿದ್ದಾನೆ. ಅವನ ಸ್ವಂತ ಹೆಸರು ಅಲ್ಲಾಹ್ ಎಂದಾಗಿದೆ. ಉರ್ದು ಭಾಷೆಯಲ್ಲಿ ಖುದಾ ಎಂದು ಹೇಳುತ್ತಾರೆ. ಇದರ ಅರ್ಥ ಯಾರಿಂದಾದರೂ ಸೃಷ್ಟಿಸಲ್ಪಡದವನು; ಅನಾದಿ ಕಾಲದಿಂದ ಸ್ವತಃ ಇರುವವನಾಗಿದ್ದಾನೆ. ಒಂದು ಕಾಲಘಟ್ಟದಲ್ಲಿ ಅಲ್ಲಾಹನೊಬ್ಬನು ಮಾತ್ರವಿದ್ದನು. ಅವನ ಹೊರತು ಬೇರೆ ಏನೂ ಇರಲಿಲ್ಲ. ಅವನು ಎಲ್ಲವನ್ನೂ ಸೃಷ್ಟಿಸಿದನು. ಅವನು ವೈಭವಶಾಲಿಯೂ ಬೃಹತ್ತಾದ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೂ ಆಗಿರುವನು. ಅವನು ವೈಭವಶಾಲಿಯಾಗಿದ್ದಾನೆ. ಆದುದರಿಂದ ನಾವು ಉರ್ದು ಭಾಷೆಯಲ್ಲಿ ಅಲ್ಲಾಹ್ ತಆಲಾ – ಮಹೋನ್ನತನಾದ ಅಲ್ಲಾಹ್ ಎಂದು ಹೇಳುತ್ತೇವೆ. ಅಲ್ಲಾಹನು ಎಲ್ಲ ನ್ಯೂನತೆಗಳಿಂದ ಮುಕ್ತನಾದವನಾಗಿದ್ದಾನೆ. ಎಲ್ಲ ಒಳಿತುಗಳು ಪೂರ್ಣರೂಪದಲ್ಲಿ ಅವನಲ್ಲಿ ಅಡಕವಾಗಿವೆ. ಅವನು ನಮ್ಮನ್ನೂ ಸಂಪೂರ್ಣ ವಿಶ್ವವನ್ನೂ ಉದ್ದೇಶರಹಿತವಾಗಿ ಸೃಷ್ಟಿಸಿಲ್ಲ. ನಾವು ಅವನನ್ನು ಗುರುತಿಸಬೇಕು ಎಂಬ ಉದ್ದೇಶಲಕ್ಷ್ಯಕ್ಕೋಸ್ಕರ ಅವನು ನಮ್ಮನ್ನು ಸೃಷ್ಟಿಸಿದ್ದಾನೆ. ನಾವು ಅವನನ್ನು ಆರಾಧಿಸಲು, ನಾವು ಅಭಿವೃದ್ಧಿ ಗಳಿಸಲು ಮತ್ತು ಅವನ ಪರಿಶುದ್ಧ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಲು ಅವನು ನಮ್ಮನ್ನು ಸೃಷ್ಟಿಸಿದ್ದಾನೆ.

ಮಹೋನ್ನತನಾದ ಅಲ್ಲಾಹನು (ಅಲ್ಲಾಹ್ ತಆಲಾ) ಸಂಪೂರ್ಣ ವಿಶ್ವದ ದೇವನಾಗಿದ್ದಾನೆ. ಅವನು ಎಲ್ಲವುಗಳ ದೇವನಾಗಿದ್ದಾನೆ.

**ಅಲ್ಲಾಹನ ಅಸ್ತಿತ್ವ :**

ಅಲ್ಲಾಹನು ಹೇಗಿದ್ದಾನೆ ಎಂಬುದರ ವಾಸ್ತವಿಕತೆ ನಮಗೆ ತಿಳಿದಿಲ್ಲ. ಅಲ್ಲಾಹನ ಒಂದು ಗುಣ "ಅಲ್‌ಗೈಬ್" (ಅದೃಶ್ಯ) ಎಂದಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೀಗೆ ಹೇಳಿದ್ದಾರೆ: "ಅಲ್ಲಾಹನು ಪ್ರಕಟವಾಗುವವನಾದರೂ ರಹಸ್ಯವಾಗಿ ಇರುವವನೂ ಸೂಕ್ಷ್ಮಾತಿಸೂಕ್ಷ್ಮನೂ ಆಗಿದ್ದಾನೆ. ಈ ಕಾರಣದಿಂದ 'ಅಲ್‌ಗೈಬ್'(ಅದೃಶ್ಯ) ಎನ್ನುವುದು ಅವನ ಹೆಸರಲ್ಲೊಂದಾಗಿದೆ." (ಮಲ್‌ಫೂಝಾತ್– ಭಾಗ 2 ಪುಟ 151).

ಅಲ್ಲಾಹನು ಆಲಿಮುಲ್‌ಗೈಬ್ (ಅದೃಶ್ಯ ಕಾರ್ಯಗಳನ್ನು ಅರಿತವನು) ಆಗಿದ್ದಾನೆ. ಇದರ ಬಗ್ಗೆ ಹುಝೂರ್ ಹೀಗೆ ಹೇಳಿದರು: ಆಲಿಮುಲ್‌ಗೈಬ್ ಎಂದರೆ ತನ್ನ ಬಗ್ಗೆ ತನಗೆ ಮಾತ್ರ ಅರಿವುಳ್ಳವನು. ಅವನ ಅಸ್ತಿತ್ವವನ್ನು ಪೂರ್ಣವಾಗಿ ಗ್ರಹಿಸಲು ಯಾರಿಗೂ ಸಾಧ್ಯವಿಲ್ಲ. ನಾವು ಸೂರ್ಯ, ಚಂದ್ರರ ಮತ್ತು ಪ್ರತಿಯೊಂದು ಸೃಷ್ಟಿಯ ಸ್ವರೂಪ ಕಾಣಲು ಸಾಧ್ಯವಿದೆ. ಆದರೆ ಅಲ್ಲಾಹನ ಸ್ವರೂಪವನ್ನು ಕಾಣಲು ಸಾಧ್ಯವಿಲ್ಲ. (ಇಸ್ಲಾಮೀ ಉಸೂಲ್ ಕೀ ಫಲಾಸಫೀ– ರೂಹಾನೀ ಖಝಾಇನ್– ಸಂಪುಟ 10 ಪುಟ 373)

ಅಲ್ಲಾಹನ ಅಸ್ತಿತ್ವ ಹೇಗಿದೆ ಎನ್ನುವುದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

لَا تُدْرِكُهُ الْاَبْصَارُ وَهُوَ يُدْرِكُ الْاَبْصَارَ وَهُوَ اللَّطِيْفُ الْخَبِيْرُ

"ದೃಷ್ಟಿಗಳು ಅವನನ್ನು ತಲಪಲಾರವು. ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. ಅವನು ಅತಿಸೂಕ್ಷ್ಮನೂ ಎಲ್ಲ ಬಲ್ಲವನೂ ಆಗಿರುತ್ತಾನೆ." (6:104)

ದೃಷ್ಟಿಗಳು ಅಲ್ಲಾಹನನ್ನು ತಲಪದೆ ಇರಲು ಕಾರಣವೇನೆಂದರೆ ಅವನು ಲತೀಫ್ (ಅತಿಸೂಕ್ಷ್ಮನು) ಆಗಿದ್ದಾನೆ. ಆದರೆ ಅವನು

ಖಬೀರ್ (ಎಲ್ಲವನ್ನು ಬಲ್ಲವನು) ಆಗಿರುವುದರಿಂದ ಮನುಷ್ಯನ ಆಧ್ಯಾತ್ಮಿಕ ಜೀವಿತ ತನ್ನ ಕುರಿತು ಜ್ಞಾನವನ್ನು ಮನುಷ್ಯನು ಹೊಂದದಿದ್ದರೆ ಸಾಧ್ಯವಾಗಲಾರದು ಎಂದು ಅರಿತುಕೊಂಡಿರುವ ಅಲ್ಲಾಹನು ಸ್ವತಃ ಎಂತಹ ವ್ಯವಸ್ಥೆ ಮಾಡುತ್ತಾನೆಂದರೆ ಮನುಷ್ಯನಿಗೆ ಅವನ ಬಗ್ಗೆ ಜ್ಞಾನ ಲಭಿಸುತ್ತದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ರಝಿಯಲ್ಲಾಹು ಅನ್‌ಹು ತನ್ನ ಗ್ರಂಥ **"ಹಮಾರಾ ಖುದಾ"**ದಲ್ಲಿ ಹೀಗೆ ಬರೆದಿದ್ದಾರೆ: "**ಲಾ ತುದ್‌ರಿಕುಹುಲ್ ಅಬ್‌ಸಾರು** (ದೃಷ್ಟಿಗಳು ಅವನನ್ನು ತಲಪಲಾರವು) ಇದರೆದುರಿಗೆ ಅಲ್ಲಾಹನ ಗುಣ ನಾಮವಾದ ಲತೀಫ್ (ಅತಿಸೂಕ್ಷ್ಮನು) ಇರಿಸಲಾಗಿದೆ. ಬುದ್ಧಿಯ ಮೂಲಕ ಅಲ್ಲಾಹನನ್ನು ತಲಪುವುದು ಅಸಾಧ್ಯವಾಗಿದೆ. ಏಕೆಂದರೆ ಅವನು ಲತೀಫ್ (ಅತಿಸೂಕ್ಷ್ಮನು) ಆಗಿದ್ದಾನೆ. **ವ ಹುವ ಯುದ್‌ರಿಕುಲ್ ಅಬ್‌ಸಾರ** (ಅವನು ದೃಷ್ಟಿಗಳನ್ನು ತಲಪುತ್ತಾನೆ) ಇದರೆದುರಿಗೆ ಅಲ್ಲಾಹನ **ಖಬೀರ್** (ಎಲ್ಲವನ್ನು ಬಲ್ಲವನು) ಎಂಬ ಗುಣವನ್ನು ಇರಿಸಲಾಗಿದೆ. ಎಂದರೆ ಅಲ್ಲಾಹನು ಸ್ವತಃ ತನ್ನನ್ನು ಗುರುತಿಸುವ ವ್ಯವಸ್ಥೆ ಮಾಡುತ್ತಾನೆ. ಏಕೆಂದರೆ ಅವನು **ಖಬೀರ್** (ಎಲ್ಲವನ್ನು ಬಲ್ಲವನು) ಆಗಿದ್ದಾನೆ." (ಹಮಾರಾ ಖುದಾ– ಪುಟ 32).

ಲೋಕದಲ್ಲಿರುವ ವಸ್ತುಗಳ ಸೃಷ್ಟಿಯ ಬಗ್ಗೆ ಚಿಂತಿಸುವುದಾದರೆ, "ಈ ಲೋಕವನ್ನು ಸೃಷ್ಟಿಸಿದವನಾದ ಒಬ್ಬ ದೇವ ಇರಬೇಕಾಗಿದೆ" ಎಂಬುದರ ತನಕ ನಾವು ತಲಪಬಲ್ಲೆವು. ಆದರೆ ದೇವನಿದ್ದಾನೆ ಎಂಬ ದೃಢ ನಂಬಿಕೆಯನ್ನು ಹೊಂದಲು ಅಲ್ಲಾಹನು ಸ್ವತಃ "ನಾನಿದ್ದೇನೆ" ಎಂದು ಹೇಳಬೇಕು. ಅಲ್ಲಾಹನು ತನ್ನ ಸಂದೇಶವಾಹಕರನ್ನು ಕಳುಹಿಸಿ ನಮಗೆ ತಿಳಿಸುತ್ತಾನೆ – ಅವನಿದ್ದಾನೆಂದು. ಅಲ್ಲಾಹನು ತನ್ನ ಸಂದೇಶವಾಹಕರೊಂದಿಗೆ ಮಾತನಾಡುತ್ತಾನೆ ಮತ್ತು ಅವರ ಮೂಲಕ ತನ್ನನ್ನು ಪ್ರಕಟಿಸುತ್ತಾನೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ತಾನು ಎಲ್ಲ ಜನಾಂಗಗಳಲ್ಲೂ ತನ್ನ ಸಂದೇಶವಾಹಕರನ್ನು ಕಳುಹಿಸಿರುವುದಾಗಿ ಹೇಳಿದ್ದಾನೆ. ಎಲ್ಲ ಪ್ರವಾದಿಗಳು ತಮ್ಮ ಜನರಿಗೆ ಹೀಗೆ ಉಪದೇಶಿಸಿದ್ದರು: ನಮ್ಮನ್ನು ಸೃಷ್ಟಿಸಿದ ದೇವನು ಒಬ್ಬನೇ. ನಾವು ಅವನನ್ನು ಆರಾಧಿಸಬೇಕು.

ಅಲ್ಲಾಹನ ಸಂದೇಶವಾಹಕರ ಮುಖಾಂತರ ನಮಗೆ ಅಲ್ಲಾಹನ ಗುಣಗಳ ಬಗ್ಗೆ ಜ್ಞಾನ ಲಭಿಸುತ್ತದೆ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪವಿತ್ರ ಖುರ್‌ಆನ್ ಅವತೀರ್ಣಗೊಂಡಿತು. ಅದರಲ್ಲಿ ಅಲ್ಲಾಹನು ತನ್ನ ಗುಣಗಳನ್ನು ವಿವರಿಸಿದ್ದಾನೆ. ಒಂದು ಹದೀಸಿನಲ್ಲಿ ಅಲ್ಲಾಹನ 99 ಗುಣಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಆ ಗುಣಗಳನ್ನು ನೆನಪಿನಲ್ಲಿಟ್ಟುಕೊಂಡು ಅವುಗಳನ್ನು ತನ್ನಲ್ಲಿ ಪ್ರಕಟಿಸಲು ಪ್ರಯತ್ನಿಸುವವನು, ಎಂದರೆ ಆ ಗುಣಗಳನ್ನು ಸ್ವತಃ ತನ್ನಲ್ಲಿ ಹೊಂದಲು ಪ್ರಯತ್ನಿಸುವವನು ಸ್ವರ್ಗವನ್ನು ಪ್ರವೇಶಿಸುವನೆಂದು ಹದೀಸಿನಲ್ಲಿ ಹೇಳಲಾಗಿದೆ. (ಹದೀಖತುಸ್ಸಾಲಿಹೀನ್ – ಲೇಖಕ: ಮಲಿಕ್ ಸೈಫುರ್ರಹ್ಮಾನ್ ಸಾಹಿಬ್. ಪುಟ–8. ಮೂಲ ಹದೀಸ್ ತಿರ್ಮಿಧೀ)

ಈಗಿನ ಕಾಲದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿಗಳ ಪ್ರಕಾರ ವಾಗ್ದತ್ತ ಮಹ್‌ದೀ ಮಸೀಹರಾಗಿ ಆಗಮಿಸಿದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಮತ್ತು ಅವರ ಖಲೀಫರು ಅಲ್ಲಾಹನ ಗುಣಗಳ ಬಗ್ಗೆ ನಮ್ಮ ಗಮನ ಹರಿಸಿರುವರು. ಅಲ್ಲಾಹನ ಗುಣಗಳ ಮೂಲಕ ನಮಗೆ ಅವನ ಸೌಂದರ್ಯ ಮತ್ತು ಔದಾರ್ಯದ ಬಗ್ಗೆ ತಿಳಿಯುತ್ತದೆ ಮತ್ತು ಹೃದಯದಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಹುಟ್ಟುತ್ತದೆ.

ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿ (ಶಿಷ್ಯ) ಹಝ್ರತ್ ಶೇಖ್ ಯಅ್‌ಖೂಬ್ ಅಲಿ ಸಾಹಿಬ್ ಇರ್‌ಫಾನೀ ರಝಿಯಲ್ಲಾಹು ಅನ್‌ಹು ತನ್ನ ಗ್ರಂಥವಾದ 'ಅಸ್‌ಮಾಉಲ್ ಹುಸ್ನಾ'ದಲ್ಲಿ ಹೀಗೆ ಹೇಳುತ್ತಾರೆ: "ಅಲ್ಲಾಹನ ಸೌಂದರ್ಯ ಮತ್ತು ಔದಾರ್ಯದ ಬಗ್ಗೆ ಜ್ಞಾನ ಗಳಿಸುವ ತನಕ ಅಲ್ಲಾಹನನ್ನು ಅನುಸರಿಸುವ ಬಗ್ಗೆ ಮತ್ತು ಆರಾಧನೆ ಮಾಡಲು ಮನುಷ್ಯನಲ್ಲಿ ಉತ್ಸಾಹ ಉಂಟಾಗಲಾರದು. ಅಲ್ಲಾಹನ ಸೌಂದರ್ಯ ಮತ್ತು ಔದಾರ್ಯದ ಧಾರಾಳತ್ವ ಬಗ್ಗೆ ಜ್ಞಾನ ಅತ್ಯಾವಶ್ಯಕವಾಗಿದೆ. ಅಲ್ಲಾಹನ ಪರಿಪೂರ್ಣ ಅನುಸರಣೆ ಮತ್ತು ಆರಾಧನೆಗೆ ಅಲ್ಲಾಹನ ಗುಣಗಳ ಪರಿಚಯ ಗಳಿಸುವುದು ಆವಶ್ಯಕವಾಗಿದೆ. ಅಲ್ಲಾಹನು ಹೇಳಿದ **'ವಲಿಲ್ಲಾಹಿಲ್ ಅಸ್‌ಮಾಉಲ್ ಹುಸ್ನಾ ಫದ್‌ಊ ಬಿಹಾ'**– ಅಲ್ಲಾಹನಿಗೆ ಸುಂದರ ನಾಮಗಳಿವೆ, ಅವುಗಳೊಂದಿಗೆ ಅವನನ್ನು ಬೇಡಿಕೊಳ್ಳಿರಿ ಎಂಬುದು ಇದನ್ನೇ ಸೂಚಿಸುತ್ತದೆ. ಅಲ್ಲಾಹನ ಸುಂದರ ನಾಮಗಳ ಬಗ್ಗೆ ಜ್ಞಾನ ಗಳಿಸಲು ಪವಿತ್ರ ಖುರ್‌ಆನನ್ನು ಗಾಢವಾಗಿ ಅಧ್ಯಯನ ಮಾಡುವುದು ಆವಶ್ಯಕವಾಗಿದೆ." (ಅಸ್ಮಾಉಲ್ ಹುಸ್ನಾ – ಪುಟ 4)

ಪವಿತ್ರ ಖುರ್‌ಆನ್ ಅಲ್ಲಾಹನ ಗುಣಗಳ ಬಗ್ಗೆ ವಿವರಣೆಗಳಿಂದ ತುಂಬಿದೆ. ಪವಿತ್ರ ಖುರ್‌ಆನಿನ ವಜ್ರಗಳಿಂದ ಕೆಲವನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅಲ್ಲಾಹನು ನನಗೆ ಹೀಗೆ ಮಾಡುವ ಅನುಗ್ರಹದ ಭಾಗ್ಯ ನೀಡಲಿ. ನಾನು ವಿವರಿಸಲಿರುವ ವಿಷಯಗಳು ಹೀಗಿವೆ:

1. ನಮ್ಮ ದೇವನು ಅಲ್ಲಾಹ್.
2. ನಮ್ಮ ದೇವನು ಒಬ್ಬನೇ.
3. ನಮ್ಮ ದೇವನು ನಮ್ಮ ಪಾಲಕ ಪೋಷಕ (ರಬ್ಬ್).
4. ನಮ್ಮ ದೇವನು ನಮ್ಮ ದೊರೆ.
5. ನಮ್ಮ ದೇವನು ಎಲ್ಲವನ್ನೂ ಸೃಷ್ಟಿಸಿದನು. ಅವನು ಪ್ರತಿಯೊಂದು ವಿಷಯ ತಿಳಿಯುವವನಾಗಿದ್ದಾನೆ. ಅವನು ಬಹಳ ಶಕ್ತಿಶಾಲಿ ಆಗಿದ್ದಾನೆ.
6. ನಮ್ಮ ದೇವನು ಆಹಾರ ನೀಡುವವನಾಗಿದ್ದಾನೆ. ಅವನು ಎಲ್ಲರಿಗೂ ಜೀವನಾಧಾರ ನೀಡುತ್ತಾನೆ. ಅವನು ನಮಗೆ ಅಸಂಖ್ಯಾತ ಔದಾರ್ಯಗಳನ್ನು ಮಾಡಿದ್ದಾನೆ.
7. ನಮ್ಮ ದೇವನು ನಮ್ಮ ಸ್ಥಿತಿಯ ಬಗ್ಗೆ ಚೆನ್ನಾಗಿ ಬಲ್ಲನು. ನಮ್ಮ ಹೃದಯದ ಮಾತುಗಳನ್ನು ಕೂಡ ಅವನು ತಿಳಿದುಕೊಳ್ಳುತ್ತಾನೆ.

8. ನಮ್ಮ ದೇವನು ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ತನಗೆ ಪ್ರಿಯರಾದವರೊಂದಿಗೆ ಮಾತನಾಡುತ್ತಾನೆ.

9. ನಮ್ಮ ದೇವನು ಸತ್ಯ ದೇವನಾಗಿದ್ದಾನೆ. ಅವನು ಸತ್ಯವನ್ನು ಜಯಿಸುವಂತೆ ಮಾಡುತ್ತಾನೆ. ಜನರಿಗೆ ಸರಿಯಾದ ಮಾರ್ಗದರ್ಶನ ಮಾಡುತ್ತಾನೆ.

10. ನಮ್ಮ ದೇವನು ಬಹಳ ಪ್ರೀತಿಸುವ ದೇವನಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್, ಮುಸ್ಲಿಹ್ ಮೌಊದ್ (ವಾಗ್ದತ್ತ ಸುಧಾರಕ) ಸಹ ಆಗಿದ್ದರು. ಅವರು ಒಂದು ಬಹಳ ಪ್ರಿಯ ಪದ್ಯ ಸರಳ ಭಾಷೆಯಲ್ಲಿ ಅಲ್ಲಾಹನ ಬಗ್ಗೆ ಬರೆದಿದ್ದಾರೆ. ಅದು ಈ ಕೆಳಗಿನ ಶಬ್ದಗಳಲ್ಲಿ ಪ್ರಾರಂಭವಾಗುತ್ತದೆ.

**ಮೆರೀ ರಾತ್ ದಿನ್ ಬಸ್ ಯಹೀ ಎಕ್ ಸದಾ ಹೈ**
**ಕೆ ಇಸ್ ಆಲಮೆ ಕೌನ್ ಕಾ ಎಕ್ ಖುದಾ ಹೈ**

ನನ್ನ ಹಗಲು ರಾತ್ರಿ ಇದೊಂದೇ ಶಬ್ದವಿದೆ. ಈ ವಿಶ್ವಕ್ಕೊಬ್ಬ ಸೃಷ್ಟಿಕರ್ತನಾದ ದೇವನಿದ್ದಾನೆಂದು. (ಕಲಾಮೆ ಮಹ್ಮೂದ್)

ಈ ಪದ್ಯದ ಕೆಲವು ಚರಣಗಳನ್ನು ನಾನು ನನ್ನ ಭಾಷಣದ ಪ್ರಾರಂಭದಲ್ಲಿ ನಿಮಗೆ ಓದಿ ಹೇಳಿದ್ದೇನೆ. ಇನ್‌ಶಾಅಲ್ಲಾಹ್– ಭಾಷಣದಲ್ಲಿ ಮುಂದೆ ಅವರ ಪದ್ಯದಿಂದ ಬೇರೆ ಚರಣಗಳನ್ನೂ ಹಾಡುವೆನು. "ಸಮುದಾಯಕ್ಕೋಸ್ಕರ ಜೀವಾರ್ಪಣೆ ಮಾಡಲು ಸಿದ್ಧನಾದ ಅವರಿಗೆ ಅಲ್ಲಾಹನು ಅನುಗ್ರಹ ದಯಪಾಲಿಸಲಿ."

## 1. ನಮ್ಮ ದೇವನು ಅಲ್ಲಾಹನು

ನಮ್ಮ ದೇವನ ಸ್ವಂತ ಹೆಸರು ಅಲ್ಲಾಹ್ ಎಂದು. ಸೂರತುಲ್ ಫಾತಿಹದಲ್ಲಿ ಅಲ್ಲಾಹನು ಹೇಳುತ್ತಾನೆ:

الْحَمْدُ لِلَّهِ رَبِّ الْعَالَمِينَ الرَّحْمَنِ الرَّحِيمِ مَالِكِ يَوْمِ الدِّينِ

'ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ (ರಬ್ಬ್ ಆಗಿರುವ) ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ.'

ಅಲ್ಲಾಹನು ಎಲ್ಲ ಒಳಿತುಗಳನ್ನು ತನ್ನಲ್ಲಿ ಪರಿಪೂರ್ಣವಾಗಿ ಹೊಂದಿದ್ದಾನೆ. ಎಲ್ಲ ಸ್ತುತಿಗಳು ಅಲ್ಲಾಹನಿಗಾಗಿವೆ. ಅವನು ಸಕಲ ಲೋಕಗಳ ಪರಿಪಾಲಕನಾಗಿದ್ದಾನೆ. ಅವನು ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿ ಕ್ರಮೇಣ ಪೂರ್ಣ ಸ್ಥಿತಿಗೆ ತಲಪಿಸುತ್ತಾನೆ. ಅವನು ಸಕಲ ಲೋಕಗಳನ್ನು ಸೃಷ್ಟಿಸುವವನೂ ಅಭಿವೃದ್ಧಿ ನೀಡುವವನೂ ಆಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಅವನು ಎಲ್ಲ ಜನಾಂಗಗಳ ರಬ್ಬ್ – ಪರಿಪಾಲಕನಾಗಿದ್ದಾನೆ. ಅವನು ಎಲ್ಲ ಕಾಲಗಳ ಪರಿಪಾಲಕನಾಗಿದ್ದಾನೆ. ಅವನು ಎಲ್ಲ ಸ್ಥಳಗಳ ಪರಿಪಾಲಕನಾಗಿದ್ದಾನೆ. ಎಲ್ಲ ದೇಶಗಳ ಪರಿಪಾಲಕ ಅವನೇ ಆಗಿದ್ದಾನೆ. (ಪೈಗಾಮೆ ಸುಲ್ಹ್– ರೂಹಾನೀ ಖಝಾಇನ್. ಸಂಪುಟ 23 ಪುಟ 442).

ಅಲ್ಲಾಹನು ಕೇವಲ ಶಾರೀರಿಕ ಪರಿಪಾಲಕನಾಗಿರದೆ ಅವನು ಆಧ್ಯಾತ್ಮಿಕ ಪರಿಪಾಲಕನೂ ಆಗಿದ್ದಾನೆ. ಅವನು ಮನುಷ್ಯರನ್ನು ಆಧ್ಯಾತ್ಮಿಕವಾಗಿ ಅಭಿವೃದ್ಧಿಗೊಳಿಸಲು ತನ್ನ ಸಂದೇಶವಾಹಕರನ್ನು ಕಳುಹಿಸುತ್ತಾನೆ.

ಅಲ್ಲಾಹನ ಎರಡನೆಯ ಗುಣ ಸೂರತುಲ್ ಫಾತಿಹದಲ್ಲಿ **ಅರ್ರಹ್ಮಾನ್** ಎಂದು ಪ್ರಸ್ತಾಪಿಸಲಾಗಿದೆ. ಎಂದರೆ ಅವನು ಅಪರಿಮಿತವಾಗಿ ದಯೆದೋರುವವನೂ ಬೇಡದೆ ಕೊಡುವವನೂ ಆಗಿದ್ದಾನೆ. ಸೂರ್ಯ, ಚಂದ್ರ, ನಕ್ಷತ್ರಗಳು, ಗಾಳಿ, ನೀರು ಮೊದಲಾದವುಗಳನ್ನು ನಾವು ಬೇಡದಿದ್ದರೂ ನಮಗೆ ನೀಡಿದ್ದಾನೆ. **ರಹ್ಮಾನ್** ಆಗಿರುವ ಅಲ್ಲಾಹನೇ ನಮಗೆ ಪವಿತ್ರ ಖುರ್ಆನ್ ಕಲಿಸಿದನು. ಮನುಷ್ಯನನ್ನು ಸೃಷ್ಟಿಸಿದನು ಮತ್ತು ಅವನಿಗೆ ಮಾತನಾಡುವ ಶಕ್ತಿ ನೀಡಿದನು.

ಅಲ್ಲಾಹನು **ಅರ್ರಹೀಮ್** ಆಗಿದ್ದಾನೆ. ಎಂದರೆ ಪದೇ ಪದೇ ದಯೆದೋರುವವನು. ಅವನು ದುಡಿಮೆಗೆ ಪ್ರತಿಫಲ ನೀಡುತ್ತಾನೆ. ಅವನು ಒಂದಿಷ್ಟೂ ದೌರ್ಜನ್ಯ ಮಾಡುವುದಿಲ್ಲ. ಯಾರಲ್ಲಾದರೂ ಒಳಿತು ಇದ್ದರೆ ಅದನ್ನು ಅವನು ವರ್ಧಿಸುತ್ತಾನೆ. ಅವನು ತನ್ನಿಂದಲೂ ಬಹಳ ಹೆಚ್ಚು ಪ್ರತಿಫಲ ನೀಡುತ್ತಾನೆ.

ಅಲ್ಲಾಹನು **ಮಾಲಿಕಿ ಯೌಮಿದ್ದೀನ್** ಆಗಿದ್ದಾನೆ. ಎಂದರೆ ಅವನು ಶಿಕ್ಷಾ ರಕ್ಷಾ ದಿನದ ಮಾಲಿಕನಾಗಿದ್ದಾನೆ. ಅವನು ಒಳ್ಳೆಯ ಕೆಲಸಕ್ಕೆ ಪಾರಿತೋಷಿಕ ನೀಡುತ್ತಾನೆ. ಕೆಟ್ಟ ಕೆಲಸ ಮಾಡಿದರೆ ಶಿಕ್ಷೆ ನೀಡುತ್ತಾನೆ. ಅವನು ಪ್ರತಿಯೊಂದು ಕೆಟ್ಟ ಕೆಲಸಕ್ಕೆ ಶಿಕ್ಷೆ ನೀಡಲು ನಿರ್ಬಂಧಿತನಾಗಿಲ್ಲ. ಏಕೆಂದರೆ ಅವನು ಮಾಲಿಕನಾಗಿದ್ದಾನೆ. ಅವನಿಗೆ ಹಿಡಿಗೂಡಲು ಮತ್ತು ಬಿಟ್ಟುಬಿಡಲು ಅಧಿಕಾರವಿದೆ. ಅವನು ಅವನ ಇಷ್ಟಪ್ರಕಾರ ವರ್ತಿಸುತ್ತಾನೆ. ಖಿಯಾಮತ್ ದಿನ (ಪುನರುತ್ಥಾನದ ದಿನ) ಪರಿಪೂರ್ಣ ಶಿಕ್ಷೆ ರಕ್ಷೆಗಳು ಇರುವುವು. ಆದರೆ ಇಹಲೋಕದಲ್ಲೂ ಶಿಕ್ಷೆ ರಕ್ಷೆಗಳ ಶೃಂಖಲೆ ಪರಿಮಿತವಾಗಿ ಜಾರಿಯಲ್ಲಿದೆ.

ಸೂರತುಲ್ ಫಾತಿಹದಲ್ಲಿ ಅಲ್ಲಾಹನ ಮೇಲೆ ವಿವರಿಸಿದ ನಾಲ್ಕು ಗುಣಗಳನ್ನು ಪ್ರಸ್ತಾಪಿಸಲಾಗಿದೆ. ಇವು ಅಲ್ಲಾಹನ ಮೂಲ ಗುಣಗಳಾಗಿವೆ. ಉಳಿದ ಗುಣಗಳು ಈ ನಾಲ್ಕು ಗುಣಗಳನ್ನು ವಿಶದೀಕರಿಸುತ್ತವೆ.

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಆಯತುಲ್ ಕುರ್ಸೀ ಪವಿತ್ರ ಖುರ್ಆನಿನ ಮಹತ್ತರವಾದ ವಚನವೆಂದು ಹೇಳಿದ್ದಾರೆ. (ಸುನನ್ ಅಬೂದಾವೂದ್). ಆಯತುಲ್ ಕುರ್ಸೀಯಲ್ಲಿ ಅಲ್ಲಾಹನ ಉನ್ನತ ಗುಣಗಳನ್ನು ಹೀಗೆ ವಿವರಿಸಲಾಗಿದೆ: اللَّهُ لاَ إِلَهَ إِلاَّ هُوَ الْحَيُّ الْقَيُّومُ ಅಲ್ಲಾಹ್– ಅವನ ಹೊರತು ಬೇರೆ ಆರಾಧ್ಯನಿಲ್ಲ. ಅವನು ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ (ಎಲ್ಲವನ್ನು) ನೆಲೆನಿಲ್ಲಿಸುವವನೂ ಆಗಿದ್ದಾನೆ. لاَ تَأْخُذُهُ سِنَةٌ وَلاَ نَوْمٌ ತೂಕಡಿಕೆ ಯಾಗಲಿ ನಿದ್ರೆಯಾಗಲಿ ಅವನಿಗಿಲ್ಲ. لَهُ مَا فِي السَّمَاوَاتِ وَمَا فِي الأَرْضِ ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವ ಎಲ್ಲವೂ

ಅವನದ್ದಾಗಿವೆ.مَنْ ذَا الَّذِي يَشْفَعُ عِنْدَهُ إِلاَّ بِإِذْنِهِ ಅವನ ಅನುಮತಿ ಇಲ್ಲದೆ ಅವನ ಸನ್ನಿಧಿಯಲ್ಲಿ ಶಿಫಾರಸು ಮಾಡುವವರು ಯಾರಿದ್ದಾರೆ? يَعْلَمُ مَا بَيْنَ أَيْدِيهِمْ وَمَا خَلْفَهُمْ ಅವರ ಮುಂದೆ ಮತ್ತು ಹಿಂದೆ ಇರುವ ಎಲ್ಲವನ್ನೂ ಅವನು ಬಲ್ಲನು. ಮುಂದೆ ಆಗಲಿರುವುದನ್ನು ಅಲ್ಲಾಹನು ತಿಳಿದಿರುವನು. ಜನರು ಮಾಡಿದುದನ್ನೆಲ್ಲ ಅವನು ತಿಳಿದಿರುವನು.وَلاَ يُحِيطُونَ بِشَيْءٍ مِنْ عِلْمِهِ إِلاَّ بِمَا شَاءَ ಅವನು ಇಚ್ಛಿಸುವುದರ ಹೊರತು ಅವನ ಜ್ಞಾನದಿಂದ ಏನನ್ನೂ ಅವರು ಗಳಿಸುವುದಿಲ್ಲ. وَسِعَ كُرْسِيُّهُ السَّمَاوَاتِ وَالأَرْضَ ಅವನ ಸಿಂಹಾಸನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ. ಕುರ್‌ಸೀ ಎಂದರೆ ಜ್ಞಾನ ಮತ್ತು ಅಧಿಕಾರ ಸೂಚಕ ಪದ. ಅಲ್ಲಾಹನ ಜ್ಞಾನ ಮತ್ತು ಅಧಿಕಾರ ಆಕಾಶದಲ್ಲೂ ಭೂಮಿಯಲ್ಲೂ ವ್ಯಾಪಿಸಿದೆ. وَلاَ يَئُودُهُ حِفْظُهُمَا ಅವುಗಳೆರಡರ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. وَهُوَ الْعَلِيُّ الْعَظِيمُ ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 2:256).

**ಅಲ್ ಅಲೀಯ್ಯ್** ಅಲ್ಲಾಹನ ಉನ್ನತಿ ಮತ್ತು **ಅಲ್ ಅಝೀಮ್** ಅವನ ಶಕ್ತಿಯನ್ನು ಸೂಚಿಸುತ್ತವೆ.

ಅಲ್ಲಾಹನ ಉನ್ನತ ಸ್ಥಾನ ಮತ್ತು ಮಹಾಶಕ್ತಿಯ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನ **ಅರ್ಶ್** ಬಗ್ಗೆಯೂ ಹೇಳಿದೆ. ಪವಿತ್ರ ಖುರ್‌ಆನ್‌ನ ಒಂದು ವಚನ ಹೀಗಿದೆ: رَفِيعُ الدَّرَجَاتِ ذُو الْعَرْشِ ಸ್ಥಾನಗಳನ್ನು ಮೇಲೆತ್ತುವವನು; ಸಿಂಹಾಸನದ ಅಧಿಪತಿ. (ಪವಿತ್ರ ಖುರ್‌ಆನ್ 40:16) **ಅರ್ಶ್** ಎಂದರೆ ಒಂದು ಜಡ ವಸ್ತುವಲ್ಲ. ಅದು ಒಂದು ಸೃಷ್ಟಿಸಲ್ಪಟ್ಟ ವಸ್ತುವಲ್ಲ. ಅದರ ಮೇಲೆ ಅಲ್ಲಾಹನು ಕುಳಿತುಕೊಂಡಿಲ್ಲ. ಅಲ್ಲಾಹನು ಆಕಾಶ ಭೂಮಿಗಳನ್ನೂ ಎಲ್ಲ ವಸ್ತುಗಳನ್ನೂ ಸೃಷ್ಟಿಸಿದವನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಆದರೆ **ಅರ್ಶ್** ಬಗ್ಗೆ ಅದು ಅಲ್ಲಾಹನು ಸೃಷ್ಟಿಸಿದ ಜಡವಸ್ತುವೆಂದು ಎಲ್ಲಿಯೂ ಹೇಳಿಲ್ಲ.

ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದ್ದಾರೆ: ಪವಿತ್ರ ಖುರ್‌ಆನ್‌ನಲ್ಲಿ **ಅರ್ಶ್** ಎಂಬ ಪದ ಎಲ್ಲೆಲ್ಲಿ ಬಳಸಲ್ಪಟ್ಟಿದೆಯೋ ಅಲ್ಲೆಲ್ಲ ಅದರ ಅರ್ಥ ಅಲ್ಲಾಹನ ಮಹಾಶಕ್ತಿ ಮತ್ತು ಉನ್ನತ ಸ್ಥಾನವಾಗಿದೆ. ಇದೇ ಕಾರಣದಿಂದ ಅದು ಸೃಷ್ಟಿಸಲ್ಪಟ್ಟ ವಸ್ತುಗಳಲ್ಲಿ ಸೇರಿಲ್ಲ. (ನಸೀಮ್ ದಅ್‌ವತ್ – ರೂಹಾನೀ ಖಝಾಇನ್. ಸಂಪುಟ 19 ಪುಟ 455).

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: اللَّهُ لاَ إِلَهَ إِلاَّ هُوَ رَبُّ الْعَرْشِ الْعَظِيمِ 'ಅಲ್ಲಾಹ್– ಅವನ ಹೊರತು ಬೇರೆ ದೇವನಿಲ್ಲ. ಅವನು ಮಹಾ ಸಿಂಹಾಸನದ ಪ್ರಭುವಾಗಿದ್ದಾನೆ.' (27:27)

ಸೂಚನೆ: ನಮ್ಮ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ರಹಿಮಹುಲ್ಲಾಹು ತಆಲಾ, ಅರ್ಶ್ ಬಗ್ಗೆ ಮೂರು ಖುತ್‌ಬಗಳಲ್ಲಿ 12–2–1999, 19–2–1999, ಮತ್ತು 26–2–1999ರಲ್ಲಿ ಆಯತುಲ್ ಕುರ್‌ಸಿಯ ಮನದಟ್ಟುವ ವ್ಯಾಖ್ಯಾನ ನೀಡಿದ್ದಾರೆ.

## 2. ನಮ್ಮ ದೇವನು ಒಬ್ಬನೇ

ಅಲ್ಲಾಹ್ ಒಬ್ಬನೇ. ಅವನು ತನ್ನ ಅಸ್ತಿತ್ವದಲ್ಲೂ ತನ್ನ ಗುಣಗಳಲ್ಲೂ ಒಬ್ಬನೇ ಆಗಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: قُلْ هُوَ اللَّهُ أَحَدٌ ಹೇಳು: ಅವನು ಅಲ್ಲಾಹನು; ಏಕನು. اللَّهُ الصَّمَدُ ಅವನು ನಿರಪೇಕ್ಷನು (ಮತ್ತು ಸರ್ವರಿಗೂ ಆಶ್ರಯದಾತನು). لَمْ يَلِدْ وَلَمْ يُولَدْ ಅವನು ಜನಕನಲ್ಲ, ಜಾತನೂ ಅಲ್ಲ. وَلَمْ يَكُنْ لَهُ كُفُوًا أَحَدٌ ಅವನಿಗೆ ಸಮನಾಗಿ ಯಾರೂ ಇಲ್ಲ. ಅವನ ಗುಣಗಳಲ್ಲಿ ಅವನ ಸಹಭಾಗಿ ಯಾರೂ ಇಲ್ಲ. (112:2–5).

**ಓ ಹೈ ಏಕ್ ಉಸ್‌ಕಾ ನಹೀಂ ಕೊಯಿ ಹಮ್‌ಸರ್**
**ಓ ಮಾಲಿಕ್ ಹೈ ಸಬ್‌ಕಾ ಓ ಹಾಕಿಮ್ ಹೈ ಸಬ್‌ಪರ್**
**ನ ಹೈ ಬಾಪ್ ಉಸ್‌ಕಾ ನ ಹೈ ಕೊಯೀ ಬೇಟಾ**
**ಹಮೇಶ ಸೆ ಹೈ ಹಮೇಶ ರಹೇಗಾ**
**ನಹೀಂ ಉಸ್ ಕೊ ಹಾಜತ್ ಕೊಯೀ ಬೀವಿಯೋಂಕಿ**
**ಝರೂರತ್ ನಹೀಂ ಉಸ್‌ಕೊ ಕುಚ್ ಸಾಥಿಯೋಂಕಿ.**

ಅವನು ಏಕನು, ಅವನಿಗೆ ಯಾವ ಸಹಭಾಗಿಯೂ ಇಲ್ಲ.
ಅವನು ಎಲ್ಲರ ಒಡೆಯನಾಗಿದ್ದಾನೆ;
ಅವನು ಎಲ್ಲರ ಅಧಿಕಾರಿಯಾಗಿದ್ದಾನೆ.
ಅವನಿಗೆ ಪಿತನಿಲ್ಲ. ಯಾವ ಪುತ್ರನೂ ಇಲ್ಲ.
ಯಾವಾಗಲೂ ಇದ್ದನು, ಯಾವಾಗಲೂ ಉಳಿಯುವನು.
ಅವನಿಗೆ ಪತ್ನಿಯರ ಆವಶ್ಯಕತೆ ಇಲ್ಲ.
ಅವನಿಗೆ ಯಾವ ಸಂಗಡಿಗರ ಆವಶ್ಯಕತೆಯೂ ಇಲ್ಲ.
(ಕಲಾಮೆ ಮಹ್‌ಮೂದ್)

ಅಲ್ಲಾಹನು ಒಬ್ಬನೇ. ಇದಕ್ಕೆ ಸಾಕ್ಷ್ಯಾಧಾರವಾಗಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: لَوْ كَانَ فِيهِمَا آلِهَةٌ إِلاَّ اللَّهُ لَفَسَدَتَا "ಅವೆರಡರಲ್ಲಿ (ಆಕಾಶ ಮತ್ತು ಭೂಮಿಯಲ್ಲಿ) ಅಲ್ಲಾಹನಲ್ಲದೆ ಬೇರೆ ದೇವರುಗಳು ಸಹ ಇರುತ್ತಿದ್ದರೆ ಅವೆರಡೂ ನಾಶವಾಗುತ್ತಿದ್ದುವು." (21:23)

ಎಂದರೆ ಅವುಗಳ ವ್ಯವಸ್ಥೆ ಬಿಗಡಾಯಿಸುತ್ತಿತ್ತು. ಇಬ್ಬರು ದೇವರುಗಳಿದ್ದರೆ ಎರಡು ವಿರುದ್ಧ ಯೋಜನೆಗಳು ಜಾರಿಗೊಳ್ಳುತ್ತಿದ್ದುವು. ಅದರ ಪರಿಣಾಮವಾಗಿ ಲೋಕದ ಒಂದು ಭಾಗ ಒಂದು ಕಡೆಗೂ ಇನ್ನೊಂದು ಭಾಗ ಇನ್ನೊಂದು ಕಡೆಗೂ ಹೋಗುತ್ತಿತ್ತು. ಆದರೆ ಹೀಗೆ ಆಗುತ್ತಾ ಇಲ್ಲ. ವಿಜ್ಞಾನ ನಮಗೆ ಕಲಿಸಿ ಕೊಡುವುದೇನೆಂದರೆ, ಸಂಪೂರ್ಣ ವಿಶ್ವದಲ್ಲಿ ಒಂದೇ ನಿಯಮ ಜಾರಿಯಲ್ಲಿದೆ ಎಂದು ಕಾಣುತ್ತದೆ.

ಅಲ್ಲಾಹನು ಮಾತ್ರ ನಮ್ಮ ಆರಾಧನೆಗೆ ಅರ್ಹನೆಂದು ಪವಿತ್ರ ಖುರ್‌ಆನ್ ಪದೇ ಪದೇ ಹೇಳಿದೆ. ಕೆಲವು ಉದಾಹರಣೆಗಳು ಹೀಗಿವೆ: شَهِدَ اللَّهُ أَنَّهُ لاَ إِلَهَ إِلاَّ هُوَ وَالْمَلاَئِكَةُ وَأُولُوا الْعِلْمِ قَائِمًا

بِالْقِسْطِ لاَ إِلَهَ إِلاَّ هُوَ الْعَزِيزُ الْحَكِيمُ "ತಾನಲ್ಲದೆ ಬೇರೆ ಆರಾಧ್ಯನಿಲ್ಲವೆಂದು ನ್ಯಾಯೋಚಿತವಾಗಿ ಅಲ್ಲಾಹನು ಸಾಕ್ಷ್ಯ ವಹಿಸುತ್ತಾನೆ. (ಅದೇ ಪ್ರಕಾರ) ದೇವದೂತರು ಮತ್ತು ಜ್ಞಾನಿಗಳು ಸಹ (ಸಾಕ್ಷ್ಯ ವಹಿಸುತ್ತಾರೆ). ಪ್ರತಾಪಶಾಲಿಯೂ ಅಗಾಧ ಜ್ಞಾನಿಯೂ ಆದ ಅವನಲ್ಲದೆ ಬೇರೆ ಆರಾಧ್ಯನಿಲ್ಲ." (3:19).

اللَّهُ لاَ إِلَهَ إِلاَّ هُوَ لَهُ الأَسْمَاءُ الْحُسْنَى

"ಅಲ್ಲಾಹ್– ಅವನ ಹೊರತು ಬೇರೆ ದೇವನಿಲ್ಲ. ಅವನಿಗೆ ಅತಿ ಸುಂದರವಾದ ನಾಮಗಳಿವೆ." (20:9)

قُلْ إِنَّمَا أَنَا مُنذِرٌ وَمَا مِنْ إِلَهٍ إِلاَّ اللَّهُ الْوَاحِدُ الْقَهَّارُ "ಹೇಳು: ನಾನು ಕೇವಲ ಒಬ್ಬ ಮುನ್ನೆಚ್ಚರಿಕೆ ನೀಡುವವನು. ಏಕನೂ ಪರಮಾಧಿಕಾರಿಯೂ ಆಗಿರುವ ಅಲ್ಲಾಹನ ಹೊರತು ಬೇರೆ ದೇವನಿಲ್ಲ." (38:66).

اللَّهُ لاَ إِلَهَ إِلاَّ هُوَ وَعَلَى اللَّهِ فَلْيَتَوَكَّلِ الْمُؤْمِنُونَ "ಅಲ್ಲಾಹ್– ಅವನ ಹೊರತು ಬೇರೆ ಆರಾಧ್ಯನಿಲ್ಲ. ಆದ್ದರಿಂದ ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆ ತಮ್ಮ ಭರವಸೆಯನ್ನಿಡಲಿ." (64:14).

### 3. ನಮ್ಮ ದೇವನು ನಮ್ಮ ಪರಿಪಾಲಕ (ರಬ್ಬ್)

ನಮ್ಮ ದೇವನು ನಮ್ಮ ರಬ್ಬ್ ಆಗಿರುವನು. ಅವನು ನಮ್ಮನ್ನು ಸೃಷ್ಟಿಸಿ ನಮ್ಮ ಪಾಲನೆ ಪೋಷಣೆ ನಡೆಸುವವನಾಗಿದ್ದಾನೆ. ಅವನು ನಮಗೆ ಅಭಿವೃದ್ಧಿ ನೀಡುತ್ತಾನೆ. ಸೂರತುಲ್ ಫಾತಿಹದಲ್ಲಿ ಅಲ್ಲಾಹನ ಗುಣವಾಗಿ ಪ್ರಥಮವಾಗಿ ಹೇಳಿದುದು ರಬ್ಬ್ ಎಂಬ ಗುಣದ ಬಗ್ಗೆಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣವಾದ ಪವಿತ್ರ ಖುರ್‌ಆನಿನ ಮೊದಲಿನ ವಚನಗಳಲ್ಲಿ ರಬ್ಬ್ ಎಂಬ ಗುಣವನ್ನು ಪ್ರಸ್ತಾಪಿಸಲಾಗಿದೆ. ಆ ವಚನಗಳು ಹೀಗಿವೆ:

اقْرَأْ بِاسْمِ رَبِّكَ الَّذِي خَلَقَ ۝ خَلَقَ الإِنسَانَ مِنْ عَلَقٍ ۝ اقْرَأْ وَرَبُّكَ الأَكْرَمُ الَّذِي عَلَّمَ بِالْقَلَمِ ۝ عَلَّمَ الإِنسَانَ مَا لَمْ يَعْلَمْ

"(ಸರ್ವವನ್ನೂ) ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು. ಅವನು ಮನುಷ್ಯನನ್ನು (ಗರ್ಭಾಶಯದಲ್ಲಿ) ಅಂಟಿಕೊಳ್ಳುವ ಮಾಂಸ ಪಿಂಡದಿಂದ ಸೃಷ್ಟಿಸಿದನು. ಪಠಿಸು; ನಿನ್ನ ಪ್ರಭು (ರಬ್ಬ್) ಅತಿ ಕೀರ್ತಿವಂತನಾಗಿದ್ದಾನೆ. (ಅವನು) ಲೇಖನಿಯಿಂದ ಕಲಿಸಿದನು. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ (ಮನುಷ್ಯನಿಗೆ) ಕಲಿಸಿದನು." (96: 2–6)

ಪವಿತ್ರ ಖುರ್‌ಆನ್‌ನಲ್ಲಿ ಮೇಲಿನ ವಚನಗಳಲ್ಲಿ ಅತ್ಯಂತ ಪ್ರಿಯಕರವಾಗಿ ಹೀಗೆ ತಿಳಿಸಲಾಗಿದೆ. ನಮ್ಮ ದೇವನು ನಮ್ಮ ರಬ್ಬ್ (ಸೃಷ್ಟಿಕರ್ತ ಮತ್ತು ಪಾಲಕ ಪೋಷಕ) ಆಗಿದ್ದಾನೆ. ಅವನು ನಮ್ಮನ್ನು ಮತ್ತು ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿದನು ಮತ್ತು ಅವನೇ ಜ್ಞಾನವನ್ನು ನೀಡುತ್ತಾನೆ.

ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ತನ್ನ ಪ್ರಭುವಾದ رَبَّ الْعَالَمِينَ (ಸಕಲ ಲೋಕಗಳ ಪ್ರಭುವಾದ) ಅಲ್ಲಾಹನ ಬಗ್ಗೆ ಬಹಳ ಪ್ರೀತಿಯಿಂದ ಹೀಗೆ ಹೇಳುತ್ತಾರೆ: الَّذِي خَلَقَنِي فَهُوَ يَهْدِينِ ಅವನು ನನ್ನನ್ನು ಸೃಷ್ಟಿಸಿದನು ಮತ್ತು ಅವನೇ ನನಗೆ ಮಾರ್ಗದರ್ಶನ ನೀಡುತ್ತಾನೆ. وَالَّذِي هُوَ يُطْعِمُنِي وَيَسْقِينِ ಅವನೇ ನನಗೆ ಆಹಾರ ನೀಡುತ್ತಾನೆ ಮತ್ತು ಅವನೇ ನನಗೆ ಕುಡಿಯಲು ನೀಡುತ್ತಾನೆ. وَإِذَا مَرِضْتُ فَهُوَ يَشْفِينِ ನಾನು ರೋಗಿಯಾಗುವಾಗ ಅವನು ನಮಗೆ ಉಪಶಮನ ನೀಡುತ್ತಾನೆ. وَالَّذِي يُمِيتُنِي ثُمَّ يُحْيِينِ ಅವನೇ ನನ್ನನ್ನು ಮೃತಪಡಿಸುವವನು ಮತ್ತು ಅನಂತರ ಜೀವಂತಗೊಳಿಸುವವನು. (ಪವಿತ್ರ ಖುರ್‌ಆನ್ 26:79–82).

ಅಲ್ಲಾಹನೊಂದಿಗೆ ಪ್ರೇಮಭಾವ ಹೊಂದಿ ಹಝ್ರತ್ ಮುಸ್ಲಿಹ್ ಮೌಊದ್ ರಯಿಯಲ್ಲಾಹು ಅನ್‌ಹು ತಮ್ಮ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ಕ್ಯಾ ಇಸ್‌ಸೆ ಬಢ್‌ಕರ್ ರಾಹತ್ ಹೈ**
**ಜಾನ್‌ನಿಕ್ಲೇ ತೇರೇ ಹಾಥೋಂಮೇ**
**ತೂ ಜಾನ್ ಕಾ ಲೇನೇವಾಲಾ ಬನ್**
**ಮುಜ್‌ಕೋ ತೊ ಕೊಯಿ ಇಂಕಾರ್ ನಹೀಂ.**

"ನಿನ್ನ ಕೈಗಳಿಂದ ಜೀವ ತೆಗೆಯಲ್ಪಡುವುದಕ್ಕಿಂತ ಸುಖ ನನಗೆ ಏನಿದೆ. ನೀನು ನನ್ನ ಜೀವ ತೆಗೆಯುವವನಾಗು; ನಾನು ಅದನ್ನು ನಿರಾಕರಿಸಲಾರೆ." (ಕಲಾಮೆ ಮಹ್‌ಮೂದ್).

ಮೃತ್ಯುವಿನೊಂದಿಗೆ ನಮ್ಮ ಅಂತ್ಯವಾಗದು. ನಮ್ಮ ದೇವನು ನಮಗೊಂದು ಹೊಸಜೀವನ ನೀಡುವನು. ಅನಂತರ ಖಿಯಾಮತ್ (ಪುನರುತ್ಥಾನ) ದಿನ ಶಿಕ್ಷೆ ರಕ್ಷೆ ಲಭಿಸುವುದು.

ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: وَالَّذِي أَطْمَعُ أَنْ يَغْفِرَ لِي خَطِيئَتِي يَوْمَ الدِّينِ "ನ್ಯಾಯತೀರ್ಮಾನ ದಿನದಂದು ಅವನು ನನ್ನ ತಪ್ಪುಗಳನ್ನು ಕ್ಷಮಿಸುವನೆಂದು ನಾನು ಭರವಸೆ ಪಡುತ್ತೇನೆ." (ಪವಿತ್ರ ಖುರ್‌ಆನ್ 26: 83).

ಪವಿತ್ರ ಖುರ್‌ಆನ್‌ನಲ್ಲಿ ರಬ್ಬ್ ಎಂಬ ಗುಣವನ್ನು ಪದೇ ಪದೇ ಪ್ರಸ್ತಾಪಿಸಲಾಗಿದೆ. ಅನೇಕ ಸ್ಥಳಗಳಲ್ಲಿ ರಬ್ಬೀ– ನನ್ನ ರಬ್ಬ್ ಎಂದೂ ರಬ್ಬನಾ– ನಮ್ಮ ರಬ್ಬ್ ಎಂದೂ ರಬ್ಬಿಕ– ನಿನ್ನ ರಬ್ಬ್ ಎಂದೂ ರಬ್ಬುಕುಮ್– ನಿಮ್ಮ ರಬ್ಬ್ ಎಂದೂ ಪ್ರೀತಿಯಿಂದ ತುಂಬಿದ ಶಬ್ದಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ.

ಸೂರತುರ್ರಹ್ಮಾನ್‌ನಲ್ಲಿ ಹೀಗೆ ಹೇಳಲಾಗಿದೆ: تَبَارَكَ اسْمُ رَبِّكَ ذِي الْجَلاَلِ وَالإِكْرَامِ "ಪ್ರತಾಪಶಾಲಿಯೂ ಗೌರವಾರ್ಹನೂ ಆದ ನಿನ್ನ ಪ್ರಭುವಿನ (ರಬ್ಬ್) ನಾಮ ಅತ್ಯಧಿಕ ಅನುಗ್ರಹ ಪೂರ್ಣವಾಗಿದೆ." (ಪವಿತ್ರ ಖುರ್‌ಆನ್ 55:79)

ಸೂರತುಲ್ ವಾಖಿಅದಲ್ಲಿ ಹೀಗೆ ಹೇಳಲಾಗಿದೆ: فَسَبِّحْ بِاسْمِ رَبِّكَ الْعَظِيمِ "ಮಹತ್ವವಂತನಾದ ನಿನ್ನ ಪ್ರಭುವಿನ ನಾಮವನ್ನು ಕೊಂಡಾಡು." (ಪವಿತ್ರ ಖುರ್‌ಆನ್ 56: 75).

ಸೂರತುಲ್ ಅಲ್‌ಲಾದಲ್ಲಿ ಹೀಗೆ ಹೇಳಲಾಗಿದೆ: سَبِّحِ اسْمَ رَبِّكَ الأَعْلَى "ಸರ್ವೋನ್ನತನಾದ ನಿನ್ನ ಪ್ರಭು (ರಬ್ಬ್)ವಿನ ನಾಮವನ್ನು ಪ್ರಕೀರ್ತನೆ ಮಾಡು." (ಪವಿತ್ರ ಖುರ್‌ಆನ್ 87:2).

ನಾವು ನಮಾಝ್ ಮಾಡುವಾಗ ರುಕೂಅ್‌ನಲ್ಲಿ, **ಸುಬ್‌ಹಾನ ರಬ್ಬಿಯಲ್ ಅಝೀಮ್**– ಮಹಾಮಹಿಮನಾದ ನನ್ನ ಪ್ರಭುವಿನ ಪರಿಶುದ್ಧಿಯನ್ನು ನಾನು ಕೊಂಡಾಡುತ್ತೇನೆ ಎಂದು ಹೇಳುತ್ತೇವೆ. ಅನಂತರ ಸುಜೂದಿನಲ್ಲಿ, **ಸುಬ್‌ಹಾನ ರಬ್ಬಿಯಲ್ ಅಅ್‌ಲಾ**– ಅತ್ಯುನ್ನತನಾದ ನನ್ನ ಪ್ರಭುವಿನ ಪರಿಶುದ್ಧಿಯನ್ನು ಕೊಂಡಾಡುತ್ತೇನೆ ಎಂದು ಹೇಳುತ್ತೇವೆ.

ಈ ರೀತಿ ರಬ್ಬೀ (ನನ್ನ ರಬ್ಬ್) ಎಂದು ನಾವು ಅನೇಕ ಸಾರಿ ನಮಾಝ್‌ನಲ್ಲಿ ಹೇಳಿ ನಾವು ನಮ್ಮ ಪ್ರೀತಿಯನ್ನು ಪ್ರಕಟಿಸುತ್ತೇವೆ. **ಅಲ್ ಅಝೀಮ್** ಮತ್ತು **ಅಲ್ ಅಅ್‌ಲಾ** ಶಬ್ದಗಳ ಮೂಲಕ ಅಲ್ಲಾಹನ ಮಹಿಮೆಯನ್ನು ಪ್ರಕಟಿಸುತ್ತೇವೆ.

## 4. ನಮ್ಮ ದೇವನು ನಮ್ಮ ದೊರೆಯಾಗಿದ್ದಾನೆ

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: الْمَلِكُ الْقُدُّوسُ السَّلَامُ الْمُؤْمِنُ الْمُهَيْمِنُ الْعَزِيزُ الْجَبَّارُ الْمُتَكَبِّرُ ಎಂದರೆ ನಮ್ಮ ಅಲ್ಲಾಹನು ಸಾರ್ವಭೌಮನೂ ಪರಮಪರಿಶುದ್ಧನೂ ಶಾಂತಿಯ ಸಾಮ್ರಾಟನೂ ಅಭಯದಾತನೂ ಸಂರಕ್ಷಕನೂ ಪ್ರತಾಪಶಾಲಿಯೂ ಒಡೆದು ಹೋದುದನ್ನು ಜೋಡಿಸುವವನೂ ಮಹೋನ್ನತನೂ ಆಗಿದ್ದಾನೆ. (59: 24)

ಹಝ್ರತ್ ಮಸೀಹ್ ಮೌಊದ್(ಅ) ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ: **ಖಾದಿರ್ ಹೈ ಓ ಬಾರ್‌ಗಾಹ್ ಟೂಟಾಕಾಮ್ ಬನಾದೇ ಬನಾ ಬನಾಯಾ ತೋಡ್‌ದೇ ಕೊಯೀ ಉಸ್‌ಕಾ ಭೇದ್ ನ ಪಾವೇ.** "ಅವನು ಸರ್ವಶಕ್ತನಾಗಿದ್ದಾನೆ. ಒಡೆದು ಹೋದುದನ್ನು ಜೋಡಿಸುವವನಾಗಿದ್ದಾನೆ. ನಿರ್ಮಿತವಾದುದನ್ನು ಮುರಿದು ಹಾಕುತ್ತಾನೆ. ಅವನ ರಹಸ್ಯ ಯಾರಿಗೂ ತಿಳಿದಿಲ್ಲ."

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹಿ) ತಮ್ಮ ತರ್‌ಜುಮತುಲ್ ಖುರ್‌ಆನ್ ಕ್ಲಾಸಿನಲ್ಲಿ ಹೀಗೆ ಹೇಳಿದ್ದರು: ಅಲ್ಲಾಹನ ಗುಣವಾದ **ಅಲ್‌ಜಬ್ಬಾರ್** ಎಂಬ ಶಬ್ದದಲ್ಲಿ ಜೋಡಿಸುವವ ಮತ್ತು ಒಡೆದು ಹಾಕುವವ ಎಂಬ ಅರ್ಥಗಳಿವೆ.

ಪವಿತ್ರ ಖುರ್‌ಆನ್‌ನಲ್ಲಿ ಇನ್ನೊಂದು ಸ್ಥಳದಲ್ಲಿ ಅಲ್ಲಾಹನ ದೊರೆತನದ ಬಗ್ಗೆ ಹೀಗೆ ಹೇಳಲಾಗಿದೆ: قُلِ اللَّهُمَّ مَالِكَ الْمُلْكِ تُؤْتِي الْمُلْكَ مَنْ تَشَاءُ وَتَنْزِعُ الْمُلْكَ مِمَّنْ تَشَاءُ "ಹೇಳು: ಸರ್ವಾಧಿಪತ್ಯದ ಪ್ರಭುವಾದ ಅಲ್ಲಾಹನೇ, ನೀನು ಬಯಸುವವರಿಗೆ ಆಧಿಪತ್ಯ ನೀಡುತ್ತಿ. ನೀನು ಬಯಸುವವರಿಂದ ಆಧಿಪತ್ಯ ಕಿತ್ತುಕೊಳ್ಳುತ್ತಿ." وَتُعِزُّ مَنْ تَشَاءُ وَتُذِلُّ مَنْ تَشَاءُ "ನೀನು ಬಯಸುವವರಿಗೆ ಉನ್ನತ ಸ್ಥಾನ ನೀಡುತ್ತಿ. ನೀನು ಬಯಸುವವರನ್ನು ಅಪಮಾನಿತನಾಗಿ ಮಾಡುತ್ತಿ." بِيَدِكَ الْخَيْرُ "ಎಲ್ಲ ಒಳಿತುಗಳು ನಿನ್ನ ಕೈಯಲ್ಲಿವೆ." إِنَّكَ عَلَى كُلِّ شَيْءٍ قَدِيرٌ "ನಿಸ್ಸಂದೇಹವಾಗಿಯೂ ನೀನು ಎಲ್ಲ ಕಾರ್ಯಗಳಲ್ಲೂ ಸರ್ವಸಮರ್ಥನಾಗಿರುವೆ." تُولِجُ اللَّيْلَ فِي النَّهَارِ وَتُولِجُ النَّهَارَ فِي اللَّيْلِ "ನೀನು ರಾತ್ರಿಯನ್ನು ಹಗಲಿನಲ್ಲೂ ಹಗಲನ್ನು ರಾತ್ರಿಯಲ್ಲೂ ಲೀನವಾಗುವಂತೆ ಮಾಡುತ್ತಿ." وَتُخْرِجُ الْحَيَّ مِنَ الْمَيِّتِ وَتُخْرِجُ الْمَيِّتَ مِنَ الْحَيِّ "ನಿರ್ಜೀವವಾಗಿರುವುದರಿಂದ ಜೀವಂತವಾದುದನ್ನೂ ಜೀವಂತವಾಗಿರುವುದರಿಂದ ನಿರ್ಜೀವವಾದುದನ್ನೂ ನೀನು ಉದ್ಭವಗೊಳಿಸುತ್ತಿ." وَتَرْزُقُ مَنْ تَشَاءُ بِغَيْرِ حِسَابٍ "ನೀನು ಬಯಸುವವರಿಗೆ ಅಮಿತವಾಗಿ ನೀಡುತ್ತಿರುವೆ." (3: 27,28).

ಸೂರಃ ಯಾಸೀನ್‌ನಲ್ಲಿ ಹೀಗೆ ಹೇಳಲಾಗಿದೆ: فَسُبْحَانَ الَّذِي بِيَدِهِ مَلَكُوتُ كُلِّ شَيْءٍ وَإِلَيْهِ تُرْجَعُونَ "ಸಕಲ ವಸ್ತುಗಳ ಮೇಲಿನ ಆಧಿಪತ್ಯ ಯಾರ ಕೈಯಲ್ಲಿದೆಯೋ ಅವನೇ ಪರಿಶುದ್ಧನು. ನೀವೆಲ್ಲರೂ ಅವನ ಬಳಿಗೆಯೇ ಮರಳಿಸಲ್ಪಡುವಿರಿ." (ಪವಿತ್ರ ಖುರ್‌ಆನ್ 36:84).

ಪವಿತ್ರ ಖುರ್‌ಆನಿನ ಸೂರತುಲ್ ಹದೀದ್‌ನಲ್ಲಿ ಹೀಗೆ ಹೇಳಲಾಗಿದೆ: لَهُ مُلْكُ السَّمَاوَاتِ وَالأَرْضِ وَإِلَى اللهِ تُرْجَعُ الأُمُورُ "ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅವನದ್ದಾಗಿದೆ. ಎಲ್ಲ ವಿಚಾರಗಳು ಅಲ್ಲಾಹನ ಕಡೆಗೆ ಮರಳಿಸಲ್ಪಡುತ್ತವೆ." (57:6).

ಈ ವಚನವನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹಿ) ತಮ್ಮ ಒಂದು ಖುತ್‌ಬದಲ್ಲಿ ಹೀಗೆ ಹೇಳಿದರು: **"ಲಹು ಮುಲ್‌ಕುಸ್ಸಮಾವಾತಿ ವಲ್ ಅರ್‌ಝಿ ವ ಇಲಲ್ಲಾಹಿ ತುರ್‌ಜಉಲ್ ಉಮೂರ್** ಎಂಬ ವಚನದಲ್ಲಿ ಭೂಮಿ ಆಕಾಶಗಳ ದೊರೆತನ ಅಲ್ಲಾಹನಿಗೆ ಸೇರಿದೆ ಎಂದು ಘೋಷಿಸಲಾಗಿದೆ. ಅವನ ದೊರೆತನದಲ್ಲಿ ಯಾವ ಸಹಭಾಗಿಯೂ ಇಲ್ಲ. ಈ ವಾಸ್ತವಿಕತೆಯನ್ನು ಹೃದಯದಲ್ಲಿ ನಾಟುವುದೇ ತೌಹೀದ್ ಆಗಿದೆ. **ವ ಇಲಲ್ಲಾಹಿ ತುರ್‌ಜಉಲ್ ಉಮೂರ್ –** ದೊರೆತನವಿರುವುದು ಮಾತ್ರವಲ್ಲ, ಎಲ್ಲ ವಿಷಯಗಳು ಅಲ್ಲಾಹನ ಕಡೆಗೆ ಮರಳಿಸಲ್ಪಡುತ್ತವೆ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದು. ಅಲ್ಲಾಹನ ದೊರೆತನ ಲೋಕದ ದೊರೆಯ ದೊರೆತನದ ಹಾಗೆ ಅಲ್ಲ. ನೀವು ಅದರಿಂದ ಓಡಿ ಹೋಗಿ ಅಡಗಿರಲು ಸಾಧ್ಯವಿಲ್ಲ. ಈ ಲೋಕದಲ್ಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆಕಾಶದಲ್ಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವನ ಕಡೆಗೆಯೇ ಮರಳಬೇಕಾಗುತ್ತದೆ. ಇಹಲೋಕದಲ್ಲಿ ಅಲ್ಲಾಹನ ವಿಧಿನಿರ್ಣಯ ಜಾರಿಗೊಳ್ಳಲು ಕೆಲವು ಸಾರಿ ತಡವಾಗುತ್ತದೆ. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ(ಸ) ಅಲ್ಲಾಹನು ಹೇಳಿದನು: ನಿನ್ನ ಶತ್ರುಗಳು ಇಲ್ಲಿ ಹಿಡಿಗೂಡಲ್ಪಡದಿದ್ದರೆ ಅವರು ಪರಲೋಕದಲ್ಲಿ ನಿಶ್ಚಯವಾಗಿಯೂ ಹಿಡಿಗೂಡಲ್ಪಡುವರು ಎಂದು ನಿನಗೆ ತಿಳಿದಿದೆ. ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಸಂಬೋಧಿಸಿ ಅಲ್ಲಾಹನು

ಹೇಳಿದುದರಲ್ಲಿ ಒಂದು ಗಾಢವಾದ ಸುಜ್ಞಾನ ನಮಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಪೂರ್ಣವಾಗಿ ಸಮಾಧಾನವಾಗಿತ್ತು. ಅವರಲ್ಲಿ ಸ್ವಲ್ಪ ಮಾತ್ರ ಸಹ ಬೇಸರವಿರಲಿಲ್ಲ. ಏಕೆಂದರೆ ಅವರಿಗೆ ಪರಲೋಕದ ಬಗ್ಗೆ ವಿಶ್ವಾಸವಿತ್ತು. ಇಲ್ಲಿ ಹಿಡಿಗೂಡಲ್ಪಡುವುದು ಮತ್ತು ಅಲ್ಲಿ ಹಿಡಿಗೂಡಲ್ಪಡುವುದರಲ್ಲಿ ಅವರು ವ್ಯತ್ಯಾಸ ಕಾಣಲಿಲ್ಲ. ಇಂತಹ ದೃಢ ವಿಶ್ವಾಸವಿದ್ದರೆ ಶತ್ರುಗಳ ಆರ್ಭಟ ಮತ್ತು ಪರಿಹಾಸ ನಿರರ್ಥಕವಾಗುತ್ತವೆ. ಅಲ್ಲಾಹನು ಹೇಳುತ್ತಾನೆ: **ವ ಇಲಲ್ಲಾಹಿ ತುರ್‌ಜಉಲ್ ಉಮೂರ್** – ಎಲ್ಲ ವಿಷಯಗಳು ಅಲ್ಲಾಹನ ಕಡೆಗೆ ಮರಳಲಿವೆ. ಆದುದರಿಂದ ಗಾಬರಿಗೊಳ್ಳುವ ಆವಶ್ಯಕತೆ ಇಲ್ಲ. ಇಂತಹ ಪರಿಪೂರ್ಣ ಭರವಸೆ ನಮ್ಮ ಜಮಾಅತ್ ಹೊಂದಬೇಕೆಂದು ನಾನು ಇಚ್ಛಿಸುತ್ತೇನೆ. ನನ್ನ ಜೀವ ಸಹ ಈ ಭರವಸೆಯೊಂದಿಗೆ ಹೋಗಲಿ ಎಂದು ನಾನು ಸಾಧ್ಯವಿರುವಷ್ಟು ಪ್ರಯತ್ನ ಮಾಡುತ್ತೇನೆ. ಕಷ್ಟಗಳಿರಲಿ, ಶತ್ರುಗಳ ಆರ್ಭಟವಿರಲಿ ಮತ್ತು ಇತರ ಜೀವಿತ ಪ್ರಶ್ನೆಗಳಿರಲಿ, ನೀವು ಈ ಪವಿತ್ರ ಖುರ್‌ಆನ್ ವಚನ ಪ್ರಕಾರ ವಿಶ್ವಾಸ ಹೊಂದಿದವರಾಗಿದ್ದರೆ ನೀವು ಯಾವಾಗಲೂ ಸಮಾಧಾನದಿಂದ ಶ್ವಾಸೋಚ್ಛ್ವಾಸ ಮಾಡುವಿರಿ. ನೀವು ಮೃತಪಡುವಾಗಲೂ ನಿಮಗೆ ಎಂತಹ ಸಮಾಧಾನ ಭರಿತ ಹೃದಯವಿರುವುದೆಂದರೆ ಬೇರೆ ಯಾರಿಗೂ ಅದು ದೊರೆತಿರಲಾರದು.'' (ಖುತ್‌ಬ ಜುಮುಅ 2–1–1988).

## 5. ನಮ್ಮ ದೇವನು ಸೃಷ್ಟಿಕರ್ತನಾಗಿದ್ದಾನೆ. ಪ್ರತಿಯೊಂದು ವಸ್ತುವಿನ ಸೃಷ್ಟಿಕರ್ತ

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: هُوَ اللّٰهُ الْخَالِقُ الْبَارِئُ الْمُصَوِّرُ لَهُ الأَسْمَاءُ الْحُسْنَى ''ಅವನೇ ಅಲ್ಲಾಹನು – ಅವನು ಸೃಷ್ಟಿಕರ್ತನೂ ನಿರ್ಮಾಪಕನೂ ರೂಪಕೊಡುವವನೂ ಆಗಿದ್ದಾನೆ. ಬಲು ಸುಂದರವಾದ ನಾಮಗಳು ಅವನಿಗಿವೆ.'' (59:25).

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: بَدِيعُ السَّمَاوَاتِ وَالأَرْضِ أَنَّى يَكُونُ لَهُ وَلَدٌ وَلَمْ تَكُنْ لَهُ صَاحِبَةٌ وَخَلَقَ كُلَّ شَيْءٍ وَهُوَ بِكُلِّ شَيْءٍ عَلِيمٌ ''ಅವನು ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನಾಗಿದ್ದಾನೆ. ಅವನಿಗೆ ಸಹಧರ್ಮಿಣಿ ಇಲ್ಲದಿರುವಾಗ ಸಂತಾನವುಂಟಾಗುವುದು ಹೇಗೆ? ಎಲ್ಲವನ್ನೂ ಸೃಷ್ಟಿಸಿದವನು ಅವನೇ ಆಗಿದ್ದಾನೆ. ಪ್ರತಿಯೊಂದರ ಬಗ್ಗೆ ಅವನು ಚೆನ್ನಾಗಿ ಬಲ್ಲವನಾಗಿದ್ದಾನೆ.'' (6: 102).

ನಮ್ಮ ಭೂಮಿಗೆ ಬೃಹತ್ ವಿಶ್ವದಲ್ಲಿ ಯಾವುದೇ ಮಹತ್ವಪೂರ್ಣ ಸ್ಥಾನವಿಲ್ಲ. ನಾವು ರಾತ್ರಿ ಆಕಾಶದ ಕಡೆಗೆ ನೋಡಿದರೆ ಅನೇಕ ನಕ್ಷತ್ರಗಳು ಕಾಣಿಸುತ್ತವೆ. ಕೆಲವು ಗ್ರಹಗಳನ್ನು ಹೊರತುಪಡಿಸಿದರೆ ಈ ನಕ್ಷತ್ರಗಳು ಸೂರ್ಯಗಳಾಗಿವೆ. ಅವು ಬಹಳ ದೂರವಿರುವ ಕಾರಣ ನಕ್ಷತ್ರಗಳ ಹಾಗೆ ಕಾಣಿಸುತ್ತವೆ. ನಮ್ಮ ಸೂರ್ಯ ಸಹ ಅಷ್ಟು ದೂರವಿರುತ್ತಿದ್ದರೆ ಅದು ಕೂಡ ಒಂದು ನಕ್ಷತ್ರದ ಹಾಗೆ ಕಾಣಿಸುತ್ತಿತ್ತು. ಕೆಲವು ನಕ್ಷತ್ರಗಳು ಎಷ್ಟು ದೂರ ಇವೆ ಎಂದರೆ ಅವುಗಳನ್ನು ನೋಡಲು ದೊಡ್ಡ ದೊಡ್ಡ ದೂರದರ್ಶಕಗಳು ಬೇಕಾಗುತ್ತವೆ. ನಮ್ಮ ಆಕಾಶ ಗಂಗೆಯನ್ನು ಇಂಗ್ಲಿಷ್‌ನಲ್ಲಿ ಗ್ಯಾಲಕ್ಸಿ ಎಂದು ಹೇಳುತ್ತಾರೆ. ಅದರಲ್ಲಿ ನೂರು ಕೋಟಿಗಟ್ಟಲೆ ನಕ್ಷತ್ರಗಳಿವೆ. ಅವು ಸುವ್ಯವಸ್ಥೆಯಿಂದ ಚಲಿಸುತ್ತವೆ. ಅದಲ್ಲದೆ ಗ್ಯಾಲಕ್ಸಿಗಳೂ ನೂರು ಕೋಟಿಗಟ್ಟಲೆ ಇವೆ. ನಮಗೆ ತಿಳಿಯದೆ ಇರುವುದು ನಮಗೆ ತಿಳಿದಿರುವುದಕ್ಕಿಂತ ಬಹಳ ಹೆಚ್ಚಾಗಿದೆ. ಪ್ರತಿಯೊಂದನ್ನು ಅಲ್ಲಾಹನು ತನ್ನ ಶಕ್ತಿ ಸಾಮರ್ಥ್ಯದಿಂದ ಸೃಷ್ಟಿಸಿರುವನು. ಪ್ರತಿಯೊಂದರ ಬಗ್ಗೆ ಅವನಿಗೆ ಪೂರ್ಣ ಜ್ಞಾನವಿದೆ.

ಅಲ್ಲಾಹನು عَالِمُ الْغَيْبِ وَالشَّهَادَةِ ಆಗಿದ್ದಾನೆ. ''ಪರೋಕ್ಷವಾದುದನ್ನೂ ಪ್ರತ್ಯಕ್ಷವಾದುದನ್ನೂ ತಿಳಿದವನು.'' (ಪವಿತ್ರ ಖುರ್‌ಆನ್ 59:23).

ನಮ್ಮ ದೇವನು ಬಹಳ ಶಕ್ತಿಶಾಲಿಯಾಗಿದ್ದಾನೆ. ಅವನ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: إِنَّمَا أَمْرُهُ إِذَا أَرَادَ شَيْئًا أَنْ يَقُولَ لَهُ كُنْ فَيَكُونُ ''ನಿಸ್ಸಂದೇಹವಾಗಿಯೂ, ಅವನು ಒಂದು ವಸ್ತುವನ್ನು ಬಯಸಿದರೆ 'ಆಗು' ಎಂದು ಮಾತ್ರ ಅವನು ಆದೇಶಿಸಿದಾಗ ಅದು ಆಗುತ್ತದೆ.'' (36:83)

ನೀವು ಯೋಚಿಸಿರಿ, ಅಲ್ಲಾಹನ ನಿರ್ಧಾರ ಮತ್ತು ಅವನ ಸಂಜ್ಞೆಯ ಮೂಲಕ ಈ ವಿಶ್ವ ಸೃಷ್ಟಿಸಲ್ಪಟ್ಟಿತು.

ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಇನ್ನೊಂದು ಪವಿತ್ರ ಖುರ್‌ಆನ್ ವಚನ ಹೀಗಿದೆ: اللّٰهُ الَّذِي رَفَعَ السَّمَاوَاتِ بِغَيْرِ عَمَدٍ تَرَوْنَهَا ''ಅಲ್ಲಾಹನು ನೀವು ಕಾಣುವಂತ ಸ್ತಂಭಗಳಿಲ್ಲದೆ ಆಕಾಶವನ್ನು ಉನ್ನತಿಯಲ್ಲಿ ಇಟ್ಟಿರುವನು.'' (13:3)

ಬೇರೆ ಪವಿತ್ರ ಖುರ್‌ಆನ್ ವಚನಗಳು ಹೀಗಿವೆ: أَفَلاَ يَنْظُرُونَ إِلَى الإِبِلِ كَيْفَ خُلِقَتْ وَإِلَى السَّمَاءِ كَيْفَ رُفِعَتْ وَإِلَى الْجِبَالِ كَيْفَ نُصِبَتْ وَإِلَى الأَرْضِ كَيْفَ سُطِحَتْ ''ಅವರು ಒಂಟೆಯ ಕಡೆಗೆ ನೋಡುವುದಿಲ್ಲವೇ? – ಅದು ಹೇಗೆ ಸೃಷ್ಟಿಸಲ್ಪಟ್ಟಿದೆಯೆಂದು. ಆಕಾಶ ಹೇಗೆ ಉನ್ನತ ಗೊಳಿಸಲ್ಪಟ್ಟಿದೆ ಎಂದೂ ಪರ್ವತಗಳು ಹೇಗೆ ಇರಿಸಲ್ಪಟ್ಟಿವೆ ಎಂದೂ ಭೂಮಿ ಹೇಗೆ ವಿಶಾಲಗೊಳಿಸಲ್ಪಟ್ಟಿದೆ ಎಂದೂ (ಅವರು ನೋಡುವುದಿಲ್ಲವೇ)?'' (88: 18–21).

ಹಝ್ರತ್ ಮುಸ್ಲಿಹ್ ಮೌಊದ್[ರ] ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ಹರ್ ಏಕ್ ಚೀಝ್ ಪರ್ ಉಸ್‌ಕೋ ಖುದ್‌ರತ್ ಹೈ ಹಾಸಿಲ್.**
**ಹರ್ ಏಕ್ ಕಾಮ್ ಕಿ ಉಸ್‌ಕೊ ತಾಖತ್ ಹೈ ಹಾಸಿಲ್.**
**ಪಹಾಡೋಂ ಕೋ ಉಸ್‌ನೆ ಹೀ ಊಂಚಾ ಕಿಯಾ ಹೈ.**
**ಸಮುಂದರ್ ಕೊ ಉಸ್‌ನೆ ಹೀ ಪಾನೀ ದಿಯಾ ಹೈ.**
**ಯೆ ದರ್‌ಯಾ ಜೋ ಚಾರೋಂ ತರಫ್ ಬಹ್‌ರಹೇ ಹೈಂ.**
**ಉಸೀನೆ ತೊ ಖುದ್‌ರತ್ ಸೆ ಪೈದಾ ಕಿಯೇ ಹೈಂ.**

ಪ್ರತಿಯೊಂದು ವಸ್ತುವಿನ ಮೇಲೆ ಅವನಿಗೆ ಅಧಿಕಾರವಿದೆ.
ಪ್ರತಿಯೊಂದು ಕೆಲಸ ಮಾಡಲು ಶಕ್ತಿ ಅವನಿಗಿದೆ.
ಪರ್ವತಗಳನ್ನು ಅವನೇ ಎತ್ತರವಾಗಿ ನಿರ್ಮಿಸಿದನು.
ಸಮುದ್ರಗಳಿಗೆ ಅವನೇ ನೀರು ಒದಗಿಸಿದನು.
ನಾಲ್ಕು ದಿಕ್ಕುಗಳಲ್ಲೂ ಹರಿಯುವ ನದಿಗಳು
ಅವನೇ ಸೃಷ್ಟಿಸಿದವುಗಳಾಗಿವೆ.
(ಕಲಾಮೆ ಮಹ್‌ಮೂದ್)

ಅಲ್ಲಾಹನ ಸೃಷ್ಟಿಯಲ್ಲಿ ಏನೂ ನ್ಯೂನತೆ ಅಥವಾ ಕೊರತೆ ಇಲ್ಲ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

تَبَارَكَ الَّذِي بِيَدِهِ الْمُلْكُ وَهُوَ عَلَى كُلِّ شَيْءٍ قَدِيرٌ ۝ الَّذِي خَلَقَ الْمَوْتَ وَالْحَيَاةَ لِيَبْلُوَكُمْ أَيُّكُمْ أَحْسَنُ عَمَلاً وَهُوَ الْعَزِيزُ الْغَفُورُ ۝ الَّذِي خَلَقَ سَبْعَ سَمَاوَاتٍ طِبَاقًا مَا تَرَى فِي خَلْقِ الرَّحْمَنِ مِنْ تَفَاوُتٍ فَارْجِعِ الْبَصَرَ هَلْ تَرَى مِنْ فُطُورٍ ۝ ثُمَّ ارْجِعِ الْبَصَرَ كَرَّتَيْنِ يَنقَلِبْ إِلَيْكَ الْبَصَرُ خَاسِئًا وَهُوَ حَسِيرٌ ۝

"ಯಾರ ಕೈಯಲ್ಲಿ ಪ್ರಭುತ್ವವಿದೆಯೋ ಅವನು ಅನುಗ್ರಹಪೂರ್ಣನು. (ತಾನಿಚ್ಛಿಸುವ) ಎಲ್ಲ ಕಾರ್ಯಗಳಲ್ಲಿ ಅವನು ಸರ್ವಸಾಮರ್ಥ್ಯವಂತನಾಗಿದ್ದಾನೆ.

"ನಿಮ್ಮ ಪೈಕಿ ಕೃತ್ಯ ನಿರ್ವಹಣೆಯಲ್ಲಿ ಯಾರು ಅತ್ಯುತ್ತಮರೆಂದು ಪರೀಕ್ಷಿಸಲಿಕ್ಕೋಸ್ಕರ ಅವನು ಮರಣವನ್ನೂ ಜೀವನವನ್ನೂ ಸೃಷ್ಟಿಸಿದ್ದಾನೆ. ಅವನು ಪ್ರತಾಪವಂತನೂ ಕ್ಷಮಾಶೀಲನೂ ಆಗಿದ್ದಾನೆ.

"ಅವನು ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿರುವನು. ಪರಮದಯಾವಂತನ (ಅಲ್ಲಾಹನ) ಸೃಷ್ಟಿ ಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನೂ ನೀನು ಕಾಣಲಾರೆ. ನೀನು ಪುನಃ ನೋಡು, ಏನಾದರೂ ಲೋಪ ದೋಷವಿದೆಯೇ?

"ಪುನಃ ಎರಡು ಸಲ ದೃಷ್ಟಿ ಹರಿಸಿ ನೋಡು. ದೃಷ್ಟಿ ಸೋತು, ಬಳಲಿ ನಿನ್ನೆಡೆಗೆಯೇ ಮರಳುವುದು." (67:2–5).

فَتَبَارَكَ اللَّهُ أَحْسَنُ الْخَالِقِينَ "ಅತ್ಯುತ್ತಮವಾಗಿ ಸೃಷ್ಟಿಸುವ ಅಲ್ಲಾಹನು ಅನುಗ್ರಹಪೂರ್ಣನಾಗಿದ್ದಾನೆ." (23:15).

## 6. ನಮ್ಮ ದೇವನು ಆಹಾರ ನೀಡುವವನಾಗಿದ್ದಾನೆ

ನಮ್ಮ ದೇವ ಅರ್ರಝ್ಝಾಖ್ ಆಗಿದ್ದಾನೆ. ಅಂದರೆ ಅವನು ಆಹಾರ ನೀಡುವವನಾಗಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ: إِنَّ اللَّهَ هُوَ الرَّزَّاقُ ذُو الْقُوَّةِ الْمَتِينُ "ನಿಸ್ಸಂಶಯವಾಗಿಯೂ ಅಲ್ಲಾಹನೇ ಎಲ್ಲರಿಗೂ ಆಹಾರ ನೀಡುವವನೂ ಶಕ್ತಿಶಾಲಿಯೂ ಬಲಿಷ್ಠನೂ ಆಗಿದ್ದಾನೆ." (51:59).

وَهُوَ يُطْعِمُ وَلاَ يُطْعَمُ "ಅವನು (ಎಲ್ಲರಿಗೂ) ಆಹಾರ ಕೊಡುತ್ತಾನೆ. ಅವನಿಗೆ ಆಹಾರ ನೀಡಲಾಗುವುದಿಲ್ಲ." (6:15).

ಭಾರತದ ಜನಸಂಖ್ಯೆ ನೂರು ಕೋಟಿಗಿಂತ ಹೆಚ್ಚಿಗಿದೆ. ಲೋಕದ ಜನಸಂಖ್ಯೆ ಅದಕ್ಕಿಂತ ಐದು ಪಟ್ಟು ಹೆಚ್ಚಿಗೆ ಇದೆ. ಈ ಎಲ್ಲ ಜನರಿಗೆ ಅಲ್ಲಾಹನೇ ಆಹಾರ ಒದಗಿಸುತ್ತಾನೆ. ವಿವಿಧ ಪ್ರಾಣಿಗಳು, ಪಕ್ಷಿಗಳು, ಮೀನುಗಳು ಮತ್ತು ಜೀವಿಗಳು ಭೂಮಿಯಲ್ಲಿ ವಾಸಿಸುತ್ತಿವೆ. ಪ್ರತಿಯೊಂದು ಜೀವಿಗೆ ಪ್ರತ್ಯೇಕವಾದ ಆಹಾರದ ಆವಶ್ಯಕತೆ ಇದೆ. ಎಲ್ಲವುಗಳಿಗೂ ಅಲ್ಲಾಹನೇ ಆಹಾರದ ವ್ಯವಸ್ಥೆ ಮಾಡಿದ್ದಾನೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: وَمَا مِنْ دَابَّةٍ فِي الأَرْضِ إِلاَّ عَلَى اللَّهِ رِزْقُهَا "ಅಲ್ಲಾಹನು ಆಹಾರ ಒದಗಿಸಲು ಹೊಣೆ ವಹಿಸದ ಯಾವುದೇ ಜೀವಿ ಭೂಮಿಯಲ್ಲಿಲ್ಲ." (11:7).

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಪದ್ಯದಲ್ಲಿ ಹೇಳುತ್ತಾರೆ:

**ಸಮುಂದರ್‌ಕಿ ಮಚ್‌ಲೀ ಹವಾಕೆ ಪರಿಂದೇ**
**ಗರೇಲೂ ಚರಿಂದೆ ಬನೋಂಕೆ ದರಿಂದೇ**
**ಸಭೀ ಕೊ ವಹೀ ರಿಝ್‌ಖ್ ಪಹುಂಚಾ ರಹಾ ಹೈ**
**ಹರ್ ಏಕ್ ಅಪ್ನೆ ಮತ್‌ಲಬ್ ಕಿ ಶೈ ಖಾರಹಾ ಹೈ**
**ಹರ್ ಏಕ್ ಶೈ ಕೊ ರೋಝೀ ಓ ದೇತಾಹೈ ಹರ್‌ದಮ್**
**ಖಝಾನೆ ಕಭೀ ಉಸ್‌ಕೆ ಹೋತೇ ನಹೀಂ ಕಮ್**
**ಓ ಝಿಂದ ಹೈ ಔರ್ ಝಿಂದಗೀ ಬಖ್‌ಶ್ತಾ ಹೈ**
**ಓ ಖಾಯಿಮ್ ಹೈ ಹರ್ ಏಕ್ ಕಾ ಆಸ್‌ರಾ ಹೈ**

ಸಮುದ್ರದ ಮೀನು ಗಾಳಿಯಲ್ಲಿ ಹಾರುವ ಪಕ್ಷಿಗಳು
ಮನೆಯ ಸಾಕು ಪ್ರಾಣಿಗಳು ಮತ್ತು ಕಾಡಿನ ಹಿಂಸ್ರ ಮೃಗಗಳು
ಎಲ್ಲರಿಗೂ ಅವನೇ ಆಹಾರ ತಲಪಿಸುತ್ತಾನೆ.
ಪ್ರತಿಯೊಂದು ತನ್ನ ಅಪೇಕ್ಷೆಯ ಆಹಾರ ತಿನ್ನುತ್ತಿದೆ.
ಪ್ರತಿಯೊಂದಕ್ಕೆ ಅವನು ಪ್ರತಿಕ್ಷಣ ಜೀವನಾಧಾರ ನೀಡುತ್ತಾನೆ.
ಅವನ ಖಜಾನೆ ಎಂದೂ ಕಡಿಮೆಯಾಗುವುದಿಲ್ಲ.
ಅವನು ಜೀವಂತವಾಗಿದ್ದಾನೆ; ಜೀವ ನೀಡುತ್ತಾನೆ.
ಅವನು ಶಾಶ್ವತನಾಗಿದ್ದಾನೆ; ಎಲ್ಲರಿಗೂ ಆಶ್ರಯ ನೀಡುವವನಾಗಿದ್ದಾನೆ.
(ಕಲಾಮೆ ಮಹ್‌ಮೂದ್)

ಆಹಾರ ತಾನಾಗಿ ಬರುವುದಿಲ್ಲ. ಅದು ಅಲ್ಲಾಹನ ನಿರ್ಧಾರಕ್ಕೆ ಅನುಸಾರವಾಗಿ ಬರುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: أَمَّنْ هَذَا الَّذِي يَرْزُقُكُمْ إِنْ أَمْسَكَ رِزْقَهُ "ಅಥವಾ ಅವನು ನಿಮಗೆ ತನ್ನ (ಕಡೆಯಿಂದ ಒದಗಿಸುವ) ಆಹಾರವನ್ನು ತಡೆಹಿಡಿದರೆ ಮತ್ತೆ ನಿಮಗೆ ಆಹಾರ ಒದಗಿಸುವವನು ಯಾರು?" (67:22).

ಅಂದರೆ, ಅಲ್ಲಾಹನು ನಮಗೆ ಒದಗಿಸಲಾದ ಆಹಾರವನ್ನು ತಡೆದಿರಿಸಿದರೆ ನಮಗೆ ಆಹಾರ ಕೊಡುವವನು ಬೇರೆ ಯಾರೂ ಇಲ್ಲ. ಅವನು ಜನರ ದುಡಿಮೆಯನ್ನು ಮತ್ತು ಸ್ಥಿತಿಗತಿಗಳನ್ನು ಅರಿತು ಕೊಂಡಿರುತ್ತಾನೆ. ಅವನು ತನ್ನ ಇಚ್ಛೆ ಪ್ರಕಾರ ಕೆಲವರಿಗೆ ಕಡಿಮೆ, ಕೆಲವರಿಗೆ ಹೆಚ್ಚು ಕೊಡುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು

ಹೇಳುತ್ತಾನೆ: إِنَّ رَبَّكَ يَبْسُطُ الرِّزْقَ لِمَنْ يَشَاءُ وَيَقْدِرُ إِنَّهُ كَانَ بِعِبَادِهِ خَبِيرًا بَصِيرًا "ನಿಶ್ಚಯವಾಗಿಯೂ ನಿನ್ನ ಪ್ರಭು ತಾನಿಚ್ಛಿಸುವವರಿಗೆ ಜೀವನಾಧಾರವನ್ನು ಹೆಚ್ಚಿಸಿ ಕೊಡುತ್ತಾನೆ. ಹಾಗೂ ಅವನು (ತಾನು ಉದ್ದೇಶಿಸುವವರಿಗೆ) ಅದನ್ನು ಕಡಿತಗೊಳಿಸುತ್ತಾನೆ. ದಿಟವಾಗಿಯೂ ಅವನು ತನ್ನ ದಾಸರ ಬಗ್ಗೆ ಚೆನ್ನಾಗಿ ಬಲ್ಲವನೂ ಸರ್ವವನ್ನು ಕಾಣುವವನೂ ಆಗಿದ್ದಾನೆ." (17:31).

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

إِنَّ اللَّهَ يَرْزُقُ مَنْ يَشَاءُ بِغَيْرِ حِسَابٍ "ಖಂಡಿತವಾಗಿಯೂ ಅಲ್ಲಾಹನು ತಾನು ಇಚ್ಛಿಸುವವರಿಗೆ ಅಮಿತವಾಗಿ ನೀಡುತ್ತಾನೆ." (3:38).

ಮುತ್ತಖಿಯಾದವನು ಅಲ್ಲಾಹನಿಗೆ ಭಯಪಡುತ್ತಾನೆ. ಅವನಿಗೆ ಅಲ್ಲಾಹನು ಹೇಗೆ ಆಹಾರ ನೀಡುತ್ತಾನೆಂದರೆ ಅದು ಅವನು ಊಹಿಸದ ರೀತಿಯಲ್ಲಾಗಿರುತ್ತದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

وَمَنْ يَتَّقِ اللَّهَ يَجْعَلْ لَهُ مَخْرَجًا وَيَرْزُقْهُ مِنْ حَيْثُ لاَ يَحْتَسِبُ وَمَنْ يَتَوَكَّلْ عَلَى اللَّهِ فَهُوَ حَسْبُهُ

"ಯಾರಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿ ಕೊಡುವನು. ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು. ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ ಅವನಿಗೆ ಅಲ್ಲಾಹನು ಸಾಕು." (65:3,4).

ಅಲ್ಲಾಹನು ನಮ್ಮ ಅಸಂಖ್ಯಾತ ಆವಶ್ಯಕತೆಗಳನ್ನು ಈಡೇರಿಸುತ್ತಾನೆ. ಅವನು ನಮ್ಮ ಮೇಲೆ ಅಸಂಖ್ಯಾತ ಔದಾರ್ಯಗಳನ್ನು ಮಾಡಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ:

اللَّهُ الَّذِي سَخَّرَ لَكُمُ الْبَحْرَ لِتَجْرِيَ الْفُلْكُ فِيهِ بِأَمْرِهِ وَلِتَبْتَغُوا مِنْ فَضْلِهِ وَلَعَلَّكُمْ تَشْكُرُونَ وَسَخَّرَ لَكُمْ مَا فِي السَّمَاوَاتِ وَمَا فِي الأَرْضِ جَمِيعًا مِنْهُ إِنَّ فِي ذَلِكَ لآيَاتٍ لِقَوْمٍ يَتَفَكَّرُونَ

"ನಿಮಗೋಸ್ಕರ ಸಮುದ್ರವನ್ನು ನಿಯಂತ್ರಿಸಿದವನು ಅಲ್ಲಾಹನೇ ಆಗಿದ್ದಾನೆ – ಅವನ ಆಜ್ಞೆ ಪ್ರಕಾರ ಅದರಲ್ಲಿ ಹಡಗುಗಳು ಸಂಚರಿಸಲಿಕ್ಕಾಗಿ, ನೀವು ಅವನ ಅನುಗ್ರಹಗಳನ್ನು ಅರಸಲಿಕ್ಕಾಗಿ ಮತ್ತು ನೀವು ಕೃತಜ್ಞತೆ ಸೂಚಿಸಲಿಕ್ಕಾಗಿ.

"ಆಕಾಶದಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವನ್ನೂ ತನ್ನ ವತಿಯಿಂದ ಅವನು ನಿಮಗೋಸ್ಕರ ಕಾರ್ಯ ನಿರತಗೊಳಿಸಿರುವನು. ಖಂಡಿತವಾಗಿಯೂ ಚಿಂತನಶೀಲರಿಗೆ ಅದರಲ್ಲಿ ದೃಷ್ಟಾಂತಗಳಿವೆ." (45: 13,14)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಪುನಃ ಹೇಳುತ್ತಾನೆ:

وَمَا بِكُمْ مِنْ نِعْمَةٍ فَمِنَ اللَّهِ ثُمَّ إِذَا مَسَّكُمُ الضُّرُّ فَإِلَيْهِ تَجْأَرُونَ

"ನಿಮ್ಮ ಬಳಿಯಿರುವ ಅನುಗ್ರಹಗಳೆಲ್ಲ ಅಲ್ಲಾಹನಿಂದಲೇ ದೊರೆತವು. ಅನಂತರ ನಿಮಗೆ ವಿಪತ್ತೇನಾದರೂ ಬಾಧಿಸಿದರೆ ನೀವು ಸಹಾಯಕ್ಕಾಗಿ ಮೊರೆ ಇಡುವುದು ಅವನಿಗೇ ಆಗಿದೆ." (16:54)

وَإِنْ تَعُدُّوا نِعْمَةَ اللَّهِ لاَ تُحْصُوهَا إِنَّ اللَّهَ لَغَفُورٌ رَحِيمٌ

"ಅಲ್ಲಾಹನ ಅನುಗ್ರಹಗಳನ್ನು ನೀವು ಎಣಿಕೆ ಮಾಡಲಿಕ್ಕೆ ಪ್ರಯತ್ನಿಸಿದರೆ ಅವುಗಳನ್ನು ಎಣಿಕೆ ಮಾಡಲು ನಿಮ್ಮಿಂದ ಸಾಧ್ಯವಿಲ್ಲ. ದಿಟವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ." (16:19).

## 7. ನಮ್ಮ ದೇವನು ನಮ್ಮ ಸ್ಥಿತಿಗತಿಗಳ ಬಗ್ಗೆ ಚೆನ್ನಾಗಿ ತಿಳಿದು ಕೊಂಡಿರುತ್ತಾನೆ

ನಮ್ಮ ದೇವನು ನಮ್ಮ ಸ್ಥಿತಿಗತಿಗಳ ಬಗ್ಗೆ ಚೆನ್ನಾಗಿ ತಿಳಿದು ಕೊಂಡಿರುತ್ತಾನೆ. ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

يُسَبِّحُ لِلَّهِ مَا فِي السَّمَاوَاتِ وَمَا فِي الأَرْضِ لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ

"ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅಲ್ಲಾಹನ ಪರಿಶುದ್ಧತೆಯನ್ನು ಕೊಂಡಾಡುತ್ತವೆ. ಆಧಿಪತ್ಯ ಅವನದ್ದಾಗಿದೆ. ಸ್ತುತಿಸ್ತೋತ್ರಗಳು ಅವನಿಗೆ ಸಲ್ಲುತ್ತವೆ. ಅವನು ಎಲ್ಲ ವಿಚಾರದಲ್ಲೂ ಸರ್ವ ಸಾಮರ್ಥ್ಯವಂತನಾಗಿದ್ದಾನೆ." (64:2).

هُوَ الَّذِي خَلَقَكُمْ فَمِنْكُمْ كَافِرٌ وَمِنْكُمْ مُؤْمِنٌ وَاللَّهُ بِمَا تَعْمَلُونَ بَصِيرٌ "ನಿಮ್ಮನ್ನು ಸೃಷ್ಟಿಸಿದವನು ಅವನೇ, ನಿಮ್ಮಲ್ಲಿ ಕೆಲವರು ಅವಿಶ್ವಾಸಿಗಳಾಗುತ್ತಾರೆ; ಕೆಲವರು ವಿಶ್ವಾಸಿಗಳಾಗುತ್ತಾರೆ. ನಿಮ್ಮ ಕೃತ್ಯಗಳನ್ನೆಲ್ಲ ಅಲ್ಲಾಹನು ವೀಕ್ಷಿಸುತ್ತಾನೆ." (64:3).

خَلَقَ السَّمَاوَاتِ وَالأَرْضَ بِالْحَقِّ وَصَوَّرَكُمْ فَأَحْسَنَ صُوَرَكُمْ وَإِلَيْهِ الْمَصِيرُ

"ಆಕಾಶಗಳನ್ನೂ ಭೂಮಿಯನ್ನೂ ಅವನು ಯಥೋಚಿತವಾಗಿ ಸೃಷ್ಟಿಸಿದನು. ಅವನು ನಿಮ್ಮನ್ನು ರೂಪಿಸಿ ನಿಮ್ಮ ರೂಪವನ್ನು ಸುಂದರ ಗೊಳಿಸಿದನು. ಅವನ ಬಳಿಗೆಯೇ ನಿಮ್ಮ ಮರಳಿಕೆಯಾಗಿದೆ." (64:4).

يَعْلَمُ مَا فِي السَّمَاوَاتِ وَالأَرْضِ وَيَعْلَمُ مَا تُسِرُّونَ وَمَا تُعْلِنُونَ وَاللَّهُ عَلِيمٌ بِذَاتِ الصُّدُورِ

"ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವನ್ನೂ ಅವನು ಬಲ್ಲನು. ನೀವು ಮುಚ್ಚಿಡುವುದನ್ನೂ ಬಹಿರಂಗ ಪಡಿಸುವುದನ್ನೂ ಅವನು ತಿಳಿಯುತ್ತಾನೆ. ಹೃದಯಗಳಲ್ಲಿರುವುದನ್ನು ಸಹ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ." (64:5).

وَلَقَدْ خَلَقْنَا الإِنسَانَ وَنَعْلَمُ مَا تُوَسْوِسُ بِهِ نَفْسُهُ وَنَحْنُ أَقْرَبُ إِلَيْهِ مِنْ حَبْلِ الْوَرِيدِ

‘‘ದಿಟವಾಗಿಯೂ ನಾವೇ ಮನುಷ್ಯರನ್ನು ಸೃಷ್ಟಿಸಿರುವೆವು. ಅವನ ಮನಸ್ಸು ಅವನಿಗೇನು ಪಿಸುಗುಟ್ಟುತ್ತದೆ ಎಂಬುದನ್ನು ನಾವು ಬಲ್ಲೆವು. ಅವನ ಜೀವನಾಡಿಗಿಂತ ನಾವು ಅವನಿಗೆ ಹೆಚ್ಚು ಸಮೀಪದಲ್ಲಿದ್ದೇವೆ.’’ (50:17)

ಅಲ್ಲಾಹನು ನಮ್ಮ ಜೀವನಾಡಿಗಿಂತ ನಮಗೆ ಸಮೀಪವಾಗಿದ್ದಾನೆ. ನಮ್ಮ ಹೃದಯದಲ್ಲಿ ಆಗುವುದೆಲ್ಲ ಅವನಿಗೆ ತಿಳಿಯುತ್ತದೆ. ಒಂದು ಕೆಲಸ ಮಾಡುವಾಗ ನಮ್ಮ ಸಂಕಲ್ಪವೇನಿರುತ್ತದೆ, ನಮ್ಮ ಭಾವನೆ ಹೇಗಿರುತ್ತದೆ, ನಮ್ಮ ಯೋಚನೆ ಹೇಗಿರುತ್ತದೆ – ಇವುಗಳನ್ನೆಲ್ಲ ಅಲ್ಲಾಹನು ತಿಳಿದಿರುತ್ತಾನೆ. ಯಾವುದೂ ಅವನ ದೃಷ್ಟಿಯಿಂದ ಮರೆ ಯಾಗಿರುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ:

**ಕೋಯೀ ಶೈ ನಝುರ್ ಸೆ ನಹೀಂ ಉಸ್‌ಕೆ ಮಖ್ಫೀ**
**ಬಡೀಸೆ ಬಡೀ ಹೋ ಕೆ ಛೋಟೀಸೆ ಛೋಟಿ.**
**ದಿಲೋಂ ಕಿ ಛುಪೀ ಬಾತ್ ಭೀ ಜಾನ್‌ತಾ ಹೈ**
**ಬದೋಂ ಔರ್ ನೇಕೋಂ ಕೊ ಪೆಹ್‌ಚಾನ್‌ತಾ ಹೈ**

ಯಾವುದೇ ವಸ್ತು ಅವನ ದೃಷ್ಟಿಯಿಂದ ಮರೆಯಾಗಿಲ್ಲ.
ದೊಡ್ಡದಕ್ಕಿಂತ ದೊಡ್ಡದಾಗಿರಲಿ, ಚಿಕ್ಕದಕ್ಕಿಂತ ಚಿಕ್ಕದಾಗಿರಲಿ.
ಹೃದಯಗಳ ರಹಸ್ಯ ವಿಷಯಗಳನ್ನು ಅವನು ಅರಿತುಕೊಳ್ಳುತ್ತಾನೆ.
ಕೆಟ್ಟವರನ್ನೂ ಒಳ್ಳೆಯವರನ್ನೂ ಗುರುತಿಸುತ್ತಾನೆ.
(ಕಲಾಮೆ ಮಹ್‌ಮೂದ್).

## 8. ನಮ್ಮ ದೇವನು ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ ಅವನು ಮಾತನಾಡುವವನೂ ಆಗಿದ್ದಾನೆ

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ:

وَإِذَا سَأَلَكَ عِبَادِي عَنِّي فَإِنِّي قَرِيبٌ أُجِيبُ دَعْوَةَ الدَّاعِ إِذَا دَعَانِ فَلْيَسْتَجِيبُوا لِي وَلْيُؤْمِنُوا بِي لَعَلَّهُمْ يَرْشُدُونَ

‘‘(ಓ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) – ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದುದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.’’ (2: 187)

أَمَّنْ يُجِيبُ الْمُضْطَرَّ إِذَا دَعَاهُ وَيَكْشِفُ السُّوءَ وَيَجْعَلُكُمْ خُلَفَاءَ الأَرْضِ أَإِلَهٌ مَعَ اللَّهِ قَلِيلاً مَا تَذَكَّرُونَ

‘‘ಸಂಕಷ್ಟಕ್ಕೆ ಗುರಿಯಾದವನು ಪ್ರಾರ್ಥಿಸುವಾಗ ಅವನ ಪ್ರಾರ್ಥನೆಗೆ ಉತ್ತರ ನೀಡುವವನೂ ನಿಮ್ಮ ಕ್ಲೇಶಗಳನ್ನು ಹೋಗಲಾಡಿಸುವವನೂ ನಿಮ್ಮನ್ನು ಭೂಮಿಯಲ್ಲಿ ಉತ್ತರಾಧಿಕಾರಿಗಳನ್ನಾಗಿ ಮಾಡುವವನೂ ಯಾರು? ಅಲ್ಲಾಹನ ಜೊತೆಯಲ್ಲಿ ಬೇರೆ ದೇವನಿದ್ದಾನೆಯೇ? ನೀವು ಉಪದೇಶಕ್ಕೆ ಕಿವಿಗೊಡುವುದೇ ಇಲ್ಲ.’’ (27:63)

ಅಲ್ಲಾಹನು ಪ್ರಾರ್ಥನೆಗಳನ್ನು ಅಂಗೀಕರಿಸಿದ ಅನೇಕ ವೈಭವಶಾಲಿ ಘಟನೆಗಳು ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಇಂದಿನ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಮತ್ತು ಅವರ ಆದರಣೀಯ ಖಲೀಫರ ಪ್ರಾರ್ಥನೆಗಳು ಅಂಗೀಕಾರಗೊಂಡ ಅನೇಕ ಘಟನೆಗಳು ನಮ್ಮ ವಿಶ್ವಾಸವನ್ನು ವರ್ಧಿಸುತ್ತವೆ.

ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸುತ್ತಾನೆ ಮಾತ್ರವಲ್ಲ ಅವನು ಉತ್ತರ ಸಹ ಕೊಡುತ್ತಾನೆ. ತನಗೆ ಪ್ರಿಯರಾದವರೊಂದಿಗೆ ಅವನು ಮಾತನಾಡುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ: وَكَلَّمَ اللَّهُ مُوسَى تَكْلِيمًا ‘‘ಅಲ್ಲಾಹನು ವಿಶೇಷವಾಗಿ (ಆಜ್ಞೆಗಳನ್ನು ತಿಳಿಸಿಕೊಂಡು) ಮೂಸಾರೊಡನೆ ಮಾತನಾಡಿದನು.’’ (4:165)

ಇಂದಿನ ಕಾಲದಲ್ಲಿ ಜನರಲ್ಲಿ ಉಂಟಾಗಿರುವ ತಪ್ಪು ಗ್ರಹಿಕೆ ಏನೆಂದರೆ ಅಲ್ಲಾಹನು ಮಾತನಾಡುವುದನ್ನು ನಿಲ್ಲಿಸಿಬಿಟ್ಟಿದ್ದಾನೆ. ಹಝ್ರತ್ ಮಸೀಹ್ ಮೌಊದ್[ಅ] ಜನರ ಈ ತಪ್ಪು ಗ್ರಹಿಕೆ ನಿವಾರಿಸಿ ಹೇಳಿದರು: ‘‘ನಿಸ್ಸಂಶಯವಾಗಿಯೂ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಅಂತಿಮ ಶರೀಅತ್ ತಂದ ಪ್ರವಾದಿ ಆಗಿದ್ದಾರೆ. ಇನ್ನು ಮುಂದೆ ಹೊಸ ಶರೀಅತ್ ಅವತೀರ್ಣ ವಾಗಲಾರದು. ಆದರೆ ಅಲ್ಲಾಹನು ಇಲ್‌ಹಾಮ್ ಅವತೀರ್ಣ ಗೊಳಿಸುವುದನ್ನು ಕೊನೆಗೊಳಿಸಿದ್ದಾನೆಂದು ಇದರ ಅರ್ಥವಲ್ಲ.’’

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: ‘‘ನಮ್ಮ ದೇವನು ಹಿಂದೆ ಜೀವಿಸಿದ್ದಂತೆ ಈಗ ಸಹ ಜೀವಿಸಿರುವ ದೇವನಾಗಿರುವನು. ಅವನು ಮೊದಲು ಮಾತನಾಡುತ್ತಾ ಇದ್ದ ಹಾಗೆ ಈಗಲೂ ಮಾತನಾಡುತ್ತಾನೆ. ಅವನು ಹಿಂದೆ ಆಲಿಸುತ್ತಿದ್ದ ಹಾಗೆ ಈಗಲೂ ಆಲಿಸುತ್ತಾನೆ. ಈಗ ಅವನು ಆಲಿಸುತ್ತಾನೆ ಆದರೆ ಮಾತನಾಡುವುದಿಲ್ಲ ಎಂದು ಹೇಳುವುದು ಮಿಥ್ಯವಾಗಿದೆ. ಅವನು ಈಗಲೂ ಆಲಿಸುತ್ತಾನೆ ಮತ್ತು ಮಾತನಾಡುತ್ತಾನೆ. ಅವನ ಎಲ್ಲ ಗುಣಗಳು ಅನಾದಿಯೂ ಅನಂತವೂ ಆಗಿವೆ. ಅವನ ಯಾವುದೇ ಗುಣ ಸ್ಥಗಿತಗೊಂಡಿಲ್ಲ ಮತ್ತು ಸ್ಥಗಿತಗೊಳ್ಳಲಾರದು.’’ (ಅಲ್ ವಸಿಯ್ಯತ್– ರೂಹಾನೀ ಖಝಾಇನ್ – ಸಂಪುಟ 10 ಪುಟ 309).

ಇಂದಿನ ಕಾಲಘಟ್ಟದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ[ಅ] ಅನೇಕ ಸಾರಿ ಮಾತನಾಡಿರುವನು. ಹಝ್ರತ್ ಮಸೀಹ್ ಮೌಊದ್[ಅ] ತನ್ನ ಅನುಭವವನ್ನು ಹೀಗೆ ವಿವರಿಸುತ್ತಾರೆ: ‘‘ಸದಾ ಜೀವಂತನೂ ಸ್ವತಃ ನೆಲೆ ನಿಂತವನೂ ಆಗಿರುವ ನಮ್ಮ ಅಲ್ಲಾಹನು ನಮ್ಮೊಂದಿಗೆ ಮನುಷ್ಯನ ಹಾಗೆ ಮಾತನಾಡುತ್ತಾನೆ. ನಾವು ಒಂದು ವಿಷಯದ ಬಗ್ಗೆ ಬೇಡಿಕೊಳ್ಳುವಾಗ ಅವನು ಶಕ್ತಿಶಾಲಿ ಶಬ್ದಗಳನ್ನು ಬಳಸಿ ಉತ್ತರ ನೀಡುತ್ತಾನೆ. ಸಾವಿರ ಸಾರಿ ಹೀಗೆ ಬೇಡಿಕೊಂಡರೂ ಅವನು ಉತ್ತರ ನೀಡದಿರುವುದಿಲ್ಲ. ಅವನು ತನ್ನ ವಚನಗಳಲ್ಲಿ ಅದ್ಭುತ ಸಮಾಚಾರಗಳನ್ನು ಪ್ರಕಟಿಸುತ್ತಾನೆ. ಅಸಾಧಾರಣ ಶಕ್ತಿಯಿಂದ ದೃಶ್ಯಗಳನ್ನು ತೋರಿಸುತ್ತಾನೆ. ದೇವನೆಂದು ಕರೆಯಲ್ಪಡುವವನು ತಾನೆಂದು ದೃಢಪಡಿಸಿ ಕೊಡುತ್ತಾನೆ. ಅವನು ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ ಮತ್ತು ಸ್ವೀಕರಿಸಿದ ಬಗ್ಗೆ ತಿಳಿಸುತ್ತಾನೆ.

ಅವನು ದೊಡ್ಡ ದೊಡ್ಡ ಕಷ್ಟಗಳನ್ನು ನಿವಾರಿಸುತ್ತಾನೆ. ಮೃತನಾದ ಹಾಗೆ ತೋರುವ ರೋಗಿಯನ್ನು ಕೂಡ ಪ್ರಾರ್ಥನೆಗಳನ್ನು ಅತ್ಯಧಿಕವಾಗಿ ಮಾಡಿದಾಗ ಜೀವಂತಗೊಳಿಸುತ್ತಾನೆ. ಅವನು ತನ್ನ ಈ ಎಲ್ಲ ನಿರ್ಧಾರಗಳನ್ನು ಮುಂಚಿತವಾಗಿ ತನ್ನ ವಚನದ ಮೂಲಕ ತಿಳಿಸುತ್ತಾನೆ.

ನಮ್ಮ ದೇವನೇ ನಿಜವಾದ ದೇವನು. ಅವನು ಮುಂದೆ ಸಂಭವಿಸುವ ಘಟನೆಗಳ ಬಗ್ಗೆ ತನ್ನ ವಚನದ ಮೂಲಕ ತಿಳಿಸಿ ಭೂಮ್ಯಾಕಾಶಗಳ ದೇವನು ತಾನೆಂದು ಸಾಬೀತುಗೊಳಿಸುತ್ತಾನೆ. (ನಸೀಮ್ ದಅ್‌ವತ್– ರೂಹಾನೀ ಖಝಾಇನ್– ಸಂಪುಟ 19 ಪುಟ 448)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ಓ ಖುದಾ ಅಬ್ ಭೀ ಬನಾತಾ ಹೈ ಜಿಸೆ ಚಾಹೆ ಕಲೀಮ್**
**ಅಬ್ ಭೀ ಉಸ್‌ಸೆ ಬೋಲ್ತಾ ಹೈ ಜಿಸ್‌ಸೆ ಓ ಕರ್‌ತಾ ಹೈ ಪ್ಯಾರ್.**

ಅಲ್ಲಾಹನು ತಾನಿಚ್ಛಿಸುವವನನ್ನು ಕಲೀಮ್ ಆಗಿ ಮಾಡುತ್ತಾನೆ.
ಅವನು ತಾನು ಪ್ರೀತಿಸುವವನೊಂದಿಗೆ ಈಗ ಸಹ ಮಾತನಾಡುತ್ತಾನೆ.

## 9. ನಮ್ಮ ದೇವನು ಸತ್ಯ ದೇವನು

ಅಲ್ಲಾಹನ ಒಂದು ಹೆಸರು ಅಲ್‌ಹಖ್ ಎಂದಾಗಿದೆ. ಅವನು ಸತ್ಯದ ಉದ್ಭವ ಸ್ಥಾನವಾಗಿದ್ದಾನೆ. ಅವನು ಸತ್ಯದ ಉಪದೇಶ ನೀಡುತ್ತಾನೆ. ಸತ್ಯವನ್ನು ಜಯಿಸುವಂತೆ ಮಾಡುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَقُلْ جَاءَ الْحَقُّ وَزَهَقَ الْبَاطِلُ إِنَّ الْبَاطِلَ كَانَ زَهُوقًا

''ಹೇಳು: ಸತ್ಯ ಆಗಮಿಸಿತು. ಅಸತ್ಯ ಅಳಿದು ಹೋಯಿತು. ಖಂಡಿತವಾಗಿಯೂ ಅಸತ್ಯ ಅಳಿದೇ ಹೋಗುತ್ತದೆ.'' (17:82).

ಪ್ರವಾದಿ ಲೋಕದಲ್ಲಿ ಆಗಮಿಸುವಾಗ ಅಲ್ಲಾಹನ ಆಜ್ಞೆ ಪ್ರಕಾರ ಲೋಕದ ಜನರನ್ನು ಅಲ್ಲಾಹನ ಕಡೆಗೆ ಕರೆಯುತ್ತಾರೆ ಮತ್ತು ಜನರಿಗೆ ಸತ್ಯವಾದ ವಿಷಯಗಳ ಬಗ್ಗೆ ಉಪದೇಶಿಸುತ್ತಾರೆ. ಪ್ರವಾದಿ ಬಲಹೀನರೂ ಸಾಧನ ಸಾಮಗ್ರಿಗಳು ಇಲ್ಲದವರೂ ಆಗಿರುತ್ತಾರೆ. ಆದರೆ ಪ್ರವಾದಿಯ ಶತ್ರುಗಳು ಶಕ್ತಿಶಾಲಿಗಳಾಗಿರುತ್ತಾರೆ. ಜನರು ಅವರನ್ನು ವಿರೋಧಿಸುತ್ತಾರೆ ಮತ್ತು ಅವರ ಆಗಮನದ ಉದ್ದೇಶವನ್ನು ವಿಫಲಗೊಳಿಸಲು ತೀವ್ರ ಪ್ರಯತ್ನ ಮಾಡುತ್ತಾರೆ. ಆದರೆ ಅಲ್ಲಾಹನು ತನ್ನ ಸಂದೇಶವಾಹಕರಿಗೆ ಸಹಾಯ ನೀಡುತ್ತಾನೆ. ಅಲ್ಲಾಹನ ಸಂದೇಶವಾಹಕರು ತನ್ನ ವಿರೋಧಿಗಳ ವಿರುದ್ಧ ಜಯಶಾಲಿ ಯಾಗುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

كَتَبَ اللَّهُ لَأَغْلِبَنَّ أَنَا وَرُسُلِي إِنَّ اللَّهَ قَوِيٌّ عَزِيزٌ

''ನಾನೂ ನನ್ನ ಸಂದೇಶವಾಹಕರೂ ಖಂಡಿತವಾಗಿಯೂ ವಿಜಯಶಾಲಿಗಳಾಗುವೆವು ಎಂದು ಅಲ್ಲಾಹನು (ವಿಧಿ) ಬರೆದಿರುವನು. ನಿಶ್ಚಯವಾಗಿಯೂ ಅಲ್ಲಾಹನು ಶಕ್ತಿಶಾಲಿಯೂ ಪ್ರತಾಪವಂತನೂ ಆಗಿದ್ದಾನೆ.'' (58:22)

ಎಲ್ಲ ಸಂದೇಶವಾಹಕರ ಜೀವಿತ ನಮಗೆ ಸ್ಪಷ್ಟಪಡಿಸಿ ಕೊಡುವುದೇನೆಂದರೆ, ಸತ್ಯ ಜಯಿಸುತ್ತದೆ ಮತ್ತು ಮಿಥ್ಯ ಸೋತು ಹೋಗುತ್ತದೆ. ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಜೀವಿತ ಈ ವಾಸ್ತವಿಕತೆಯನ್ನು ಬಹಳ ಸ್ಪಷ್ಟವಾಗಿ ಸಾಬೀತುಗೊಳಿಸುತ್ತದೆ. ತಾನು ಅಲ್ಲಾಹನ ಸಂದೇಶವಾಹಕನಾಗಿ ಆಗಮಿಸಿರುವುದಾಗಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರಕಟಿಸಿದರು ಮತ್ತು ಬಹುದೇವಾರಾಧನೆಯನ್ನು ತ್ಯಜಿಸಲು ಅವರು ಉಪದೇಶಿಸಿದರು. ಮಕ್ಕದಲ್ಲಿ ಅಲ್ಲಿನ ಜನರು ಅವರನ್ನು ಕಠಿಣವಾಗಿ ವಿರೋಧಿಸಿದರು. ಕೊನೆಗೆ ಅಲ್ಲಾಹನ ಆಜ್ಞೆ ಪ್ರಕಾರ ಅವರು ಮಕ್ಕವನ್ನು ಬಿಟ್ಟು ಮದೀನದ ಕಡೆಗೆ ವಲಸೆ ಹೋದರು. ನೀವು ಯೋಚಿಸಿರಿ, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಕೇವಲ ಒಬ್ಬ ಜೊತೆಗಾರನೊಂದಿಗೆ ರಾತ್ರಿಯ ಅಂಧಕಾರದಲ್ಲಿ ತಮ್ಮ ಪ್ರಿಯ ದೇಶವನ್ನು ಬಿಟ್ಟು ಹೋಗಬೇಕಾಯಿತು. ಅವರು ಸೌರ್ ಗುಹೆಯಲ್ಲಿ ಆಶ್ರಯ ಪಡೆದಿದ್ದರು. ಶತ್ರುಗಳು ಗುಹೆಯ ತನಕ ತಲಪಿದರೂ ಗುಹೆಯೊಳಗೆ ಪ್ರವೇಶಿಸಲು ಅವರಿಗೆ ಸಾಧ್ಯವಾಗಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಸಂಗಡಿಗರಾಗಿದ್ದ ಹಝ್ರತ್ ಅಬೂಬಕರ್‌ರವರಿಗೆ(ರ) ಸಮಾಧಾನ ನೀಡುತ್ತಾ ಹೇಳಿದರು: لاَ تَحْزَنْ إِنَّ اللَّهَ مَعَنَا ''ನೀನು ವ್ಯಥೆಪಡಬೇಡ. ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ.'' (ಪವಿತ್ರ ಖುರ್‌ಆನ್ 9:40).

ಅನಂತರ ಕೆಲವು ವರ್ಷಗಳ ನಂತರ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹತ್ತು ಸಾವಿರ ಶಿಷ್ಯರೊಂದಿಗೆ ಜಯಶಾಲಿಯಾಗಿ ಮಕ್ಕ ನಗರವನ್ನು ಪ್ರವೇಶಿಸಿದರು. ಅವರು ತನ್ನ ಶತ್ರುಗಳನ್ನು ಕ್ಷಮಿಸಿದರು ಮತ್ತು ಅಲ್ಲಾಹನು ಹೇಳಿದ– وَقُلْ جَاءَ الْحَقُّ وَزَهَقَ الْبَاطِلُ إِنَّ الْبَاطِلَ كَانَ زَهُوقًا ''ಹೇಳು: ಸತ್ಯ ಆಗಮಿಸಿತು. ಅಸತ್ಯ ಅಳಿದು ಹೋಯಿತು. ಖಂಡಿತವಾಗಿಯೂ ಅಸತ್ಯ ಅಳಿದೇ ಹೋಗುತ್ತದೆ.'' (ಪವಿತ್ರ ಖುರ್‌ಆನ್ 17:82) ಎಂಬ ಮಾತು ಈಡೇರಿತು.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುನ್ ಮಜೀದ್.**

''ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಅವರ ಕುಟುಂಬಕ್ಕೆ ಸೇರಿದವರಿಗೂ ಶುಭಾಶೀರ್ವಾದಗಳನ್ನು ನೀಡು. ಅವರಿಗೆ ಅನುಗ್ರಹಗಳನ್ನು ದಯಪಾಲಿಸು. ಅವರಿಗೆ ಶಾಂತಿಯನ್ನು ದಯಪಾಲಿಸು. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ.

ಇಂದಿನ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಮ್ಮತ್‌ನಿಂದ (ಸಮುದಾಯದಿಂದ) ಅಲ್ಲಾಹನು ಹಝ್ರತ್ ಪೈಗಂಬರರಿಗೆ ಜೀವಾರ್ಪಣೆ ಮಾಡಲು ಸಿದ್ಧನಾದ

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು[ಅ] ಮಸೀಹ್ ಮೌಊದ್ ಆಗಿ ಲೋಕದ ಸುಧಾರಣೆಗೋಸ್ಕರ ಕಳುಹಿಸಿದನು. ಅವರು ಅಲ್ಲಾಹನಿಂದ ಜ್ಞಾನ ಗಳಿಸಿ ಸತ್ಯವಾದ ವಿಷಯವನ್ನು ಹೀಗೆ ತಿಳಿಸಿದರು: ಹಝ್ರತ್ ಈಸಾ[ಅ] ಮೃತರಾಗಿರುವರು. ಹಝ್ರತ್ ಈಸಾ[ಅ] ಲೋಕಕ್ಕೆ ಪುನರಾಗಮಿಸುವರು ಎಂಬ ಭವಿಷ್ಯವಾಣಿಯು ತನ್ನ ಆಗಮನದ ಮೂಲಕ ಈಡೇರಿದೆ.

ಹಝ್ರತ್ ಮಸೀಹ್ ಮೌಊದ್‌ರನ್ನು[ಅ] ಕಠಿಣವಾಗಿ ವಿರೋಧಿಸಲಾಯಿತು. ಮೌಲವಿಗಳು ಅವರ ವಿರುದ್ಧ ತೀವ್ರ ಪ್ರಚಾರ ಮಾಡಿದರು. ಜನ ಸಾಮಾನ್ಯರು ಸಹ ಮೌಲವಿಗಳ ಮಾತುಗಳನ್ನು ಆಲಿಸಿ ವಿರೋಧಿಸಿದರು. ಮುಸ್ಲಿಮರು, ಕ್ರೈಸ್ತರು ಮತ್ತು ಹಿಂದುಗಳು ಅವರನ್ನು ಎದುರಿಸುವುದರಲ್ಲಿ ಸಹಭಾಗಿಗಳಾದರು. ಆದರೆ ಅಲ್ಲಾಹನು ಅವರಿಗೆ ಆಶ್ವಾಸನೆ ನೀಡಿದನು. ನಾನು ನಿನ್ನ ಜೊತೆಗಿದ್ದೇನೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಹೀಗೆ ಸಂದೇಶವಾಣಿ ನೀಡಿದನು:

**ಮೈಂ ತೇರಿ ತಬ್ಲೀಗ್ ಕೋ ದುನ್‌ಯಾ ಕೆ ಕಿನಾರೋಂ ತಕ್ ಪಹುಂಚಾವುಂಗಾ.**

''ನಾನು ನಿನ್ನ ಸಂದೇಶವನ್ನು ಲೋಕದ ಅಂಚುಗಳ ತನಕ ತಲಪಿಸುವೆನು.''

ಹೀಗೆಯೇ ಸಂಭವಿಸಿತು. ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್[ಅ] ಅಹ್ಮದಿಯಾ ಜಮಾಅತಿಗೆ ಅಸ್ತಿಭಾರವನ್ನು 1889ರಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಹಾಕಿದ್ದರು. ಈಗ ಅದು ನೂರಐವತ್ತು[1] ದೇಶಗಳಿಗೆ ಹರಡಿದೆ – ಅಲ್‌ಹಮ್ದುಲಿಲ್ಲಾಹ್.

ಈಗ ಸಹ ಅಹ್ಮದಿಯಾ ಜಮಾಅತಿನ ವಿರುದ್ಧ ಬಹಳ ವಿರೋಧ ಜಾರಿಯಲ್ಲಿದೆ. ಆದರೆ ಅಲ್ಲಾಹನು ಸತ್ಯಕ್ಕೆ ಜಯವನ್ನು ದಯಪಾಲಿಸುತ್ತಿದ್ದಾನೆ. ಅಲ್ಲಾಹನ ಅನುಗ್ರಹದಿಂದ ಲಕ್ಷಾಂತರ ಜನರು ಪ್ರತಿವರ್ಷ ಅಹ್ಮದಿಯಾ ಜಮಾಅತಿನ ಖಲೀಫರ ಕೈಯಲ್ಲಿ ಬೈಅತ್ ಮಾಡಿ ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸೇರುತ್ತಿದ್ದಾರೆ–ಅಲ್‌ಹಮ್ದುಲಿಲ್ಲಾಹ್.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ:

**ಓ ದೇತಾ ಹೈ ಬಂದೋಂಕೋ ಅಪ್ನೇ ಹಿದಾಯತ್**
**ದಿಖಾತಾ ಹೈ ಹಾಥೋಂ ಪೆ ಉನ್‌ಕೆ ಕರಾಮತ್**
**ಹೈ ಫರ್‌ಯಾದೆ ಮಝ್‌ಲೂಮ್ ಕೀ ಸುನ್‌ನೆವಾಲಾ**
**ಸದಾಖತ್ ಕಾ ಕರ್‌ತಾ ಹೈ ಓ ಬೋಲ್ ಬಾಲಾ**

ಅಲ್ಲಾಹನು ತನ್ನ ದಾಸರಿಗೆ ಮಾರ್ಗದರ್ಶನ ನೀಡುತ್ತಾನೆ.
ಅವರ ಕೈಗಳಿಂದ ಅದ್ಭುತಗಳನ್ನು ತೋರಿಸುತ್ತಾನೆ.
ದೌರ್ಜನ್ಯಗಾರರ ಮೊರೆಯನ್ನು ಆಲಿಸುವವನಾದ ಅಲ್ಲಾಹನು
ಸತ್ಯವನ್ನು ಜಯಶಾಲಿಯನ್ನಾಗಿ ಮಾಡುತ್ತಾನೆ.
(ಕಲಾಮೆ ಮಹ್‌ಮೂದ್).

1 ಇದು 1998ರ ಲೆಕ್ಕವಾಗಿದೆ. ಈಗ 207 ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಕೇಂದ್ರಗಳು ಸ್ಥಾಪಿತವಾಗಿವೆ. — ಅನುವಾದಕ.

**10. ನಮ್ಮ ದೇವನು ಬಹಳ ಪ್ರೀತಿಸುವ ದೇವನಾಗಿದ್ದಾನೆ**

ನಮ್ಮ ದೇವನ ಒಂದು ಗುಣನಾಮ **''ಅಲ್‌ವದೂದ್''** ಎಂದಾಗಿದೆ. ಅದರ ಅರ್ಥ ಬಹಳ ಪ್ರೀತಿಸುವವನು ಎಂದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ:

وَاسْتَغْفِرُوا رَبَّكُمْ ثُمَّ تُوبُوا إِلَيْهِ إِنَّ رَبِّي رَحِيمٌ وَدُودٌ

''ನಿಮ್ಮ ಪ್ರಭುವಿನ ಕ್ಷಮೆಯಾಚನೆ ಮಾಡಿರಿ. ಹಾಗೂ (ಪಶ್ಚಾತ್ತಾಪ ಪಟ್ಟು) ಅವನೆಡೆಗೆ ಮರಳಿರಿ. ದಿಟವಾಗಿಯೂ ನನ್ನ ಪ್ರಭು ಕಾರುಣ್ಯನಿಧಿಯೂ ಸ್ನೇಹಶೀಲನೂ ಆಗಿದ್ದಾನೆ.'' (11:91)

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:

وَهُوَ الْغَفُورُ الْوَدُودُ ''ಅವನು ಅತ್ಯಂತ ಕ್ಷಮಾಶೀಲನೂ ಅತಿಯಾಗಿ ಪ್ರೀತಿಸುವವನೂ ಆಗಿದ್ದಾನೆ.'' (85:15)

ಮನುಷ್ಯನು ಎಷ್ಟು ಪಾಪಿಯಾಗಿದ್ದರೂ ಅಲ್ಲಾಹನ ಅನುಗ್ರಹದ ಬಗ್ಗೆ ನಿರಾಶನಾಗಬೇಕಾಗಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

قُلْ يَاعِبَادِيَ الَّذِينَ أَسْرَفُوا عَلَى أَنْفُسِهِمْ لاَ تَقْنَطُوا مِنْ رَحْمَةِ
اللَّهِ إِنَّ اللَّهَ يَغْفِرُ الذُّنُوبَ جَمِيعًا إِنَّهُ هُوَ الْغَفُورُ الرَّحِيمُ

''(ಓ ಪ್ರವಾದಿ) ನನ್ನ ಸಂದೇಶವಾಗಿ ಹೇಳು: ತಮ್ಮ ಸ್ವಂತ ಆತ್ಮಕ್ಕೆ ದ್ರೋಹವೆಸಗಿದ ನನ್ನ ದಾಸರೇ, ಅಲ್ಲಾಹನ ಕೃಪೆಯ ಬಗ್ಗೆ ನೀವು ನಿರಾಶೆ ಪಡಬೇಡಿರಿ. ಖಂಡಿತವಾಗಿಯೂ ಅಲ್ಲಾಹನು ನಿಮ್ಮ ಎಲ್ಲ ಅಪರಾಧಗಳನ್ನೂ ಕ್ಷಮಿಸುವನು. ನಿಶ್ಚಯವಾಗಿಯೂ ಅವನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ.'' (39:54)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

إِنَّ اللَّهَ يُحِبُّ التَّوَّابِينَ وَيُحِبُّ الْمُتَطَهِّرِينَ

''ನಿಶ್ಚಯವಾಗಿಯೂ ಅಲ್ಲಾಹನು ಪಶ್ಚಾತ್ತಾಪ ಪಡುವವರನ್ನು ಪ್ರೀತಿಸುತ್ತಾನೆ. (ಬಾಹ್ಯವಾಗಿಯೂ ಆಂತರಿಕವಾಗಿಯೂ) ಪರಿಶುದ್ಧರಾಗಿರುವವರನ್ನು ಅವನು ಇಷ್ಟಪಡುತ್ತಾನೆ. (2:223).

إِنَّ اللَّهَ يُحِبُّ الْمُتَّقِينَ ''ಖಂಡಿತವಾಗಿಯೂ ಅಲ್ಲಾಹನು ಭಯಭಕ್ತಿ ತೋರಿಸುವವರನ್ನು ಪ್ರೀತಿಸುತ್ತಾನೆ.'' (9:7).

إِنَّ اللَّهَ يُحِبُّ الْمُحْسِنِينَ ''ಖಂಡಿತವಾಗಿಯೂ ಅಲ್ಲಾಹನು ಸತ್ಕರ್ಮ ಮಾಡುವವರನ್ನು ಇಷ್ಟಪಡುತ್ತಾನೆ.'' (2:196).

إِنَّ اللَّهَ يُحِبُّ الْمُقْسِطِينَ ''ನ್ಯಾಯಯುತವಾಗಿ ತೀರ್ಮಾನ ಮಾಡುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ.'' (5:43)

وَاللَّهُ يُحِبُّ الصَّابِرِينَ ''ಸಹನೆದೋರುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ.'' (3:147)

إِنَّ اللَّهَ يُحِبُّ الْمُتَوَكِّلِينَ ''ಖಂಡಿತವಾಗಿಯೂ ಅಲ್ಲಾಹನು (ತನ್ನ ಮೇಲೆ) ಭರವಸೆಯನ್ನಿಡುವವರನ್ನು ಪ್ರೀತಿಸುತ್ತಾನೆ.'' (3:160)

ಕೆಲವು ಉನ್ನತ ಪದವಿಯ ಜನರು ಅಲ್ಲಾಹನ ಸಂಪ್ರೀತಿ ಗಳಿಸಲು ತಮ್ಮನ್ನು ಅರ್ಪಿಸುತ್ತಾರೆ. ಅವರೊಂದಿಗೆ ಅಲ್ಲಾಹನು ವಿಶಿಷ್ಟವಾಗಿ ವಾತ್ಸಲ್ಯದಿಂದ ವರ್ತಿಸುತ್ತಾನೆ. ಅದರ ಬಗ್ಗೆ ಅಲ್ಲಾಹನು ಪವಿತ್ರ ಖುರ್ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

وَمِنْ النَّاسِ مَنْ يَشْرِي نَفْسَهُ ابْتِغَاءَ مَرْضَاةِ اللَّهِ وَاللَّهُ رَءُوفٌ بِالْعِبَادِ

“ಜನರ ಪೈಕಿ ಅಲ್ಲಾಹನ ಪ್ರೀತಿಯನ್ನು ಗಳಿಸುವ ಕಾಂಕ್ಷೆಯಿಂದ ಆತ್ಮಾರ್ಪಣೆ ಮಾಡುವಂಥವನೂ ಇರುತ್ತಾನೆ. ಅಲ್ಲಾಹನು (ಅಂತಹ) ತನ್ನ ದಾಸರೊಡನೆ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ. (2:208)

ಅಲ್ಲಾಹನು ಯಾವಾಗಲೂ ತನ್ನ ಸಂದೇಶವಾಹಕರ ಮೂಲಕ ಲೋಕವನ್ನು ತನ್ನ ಕಡೆಗೆ ಕರೆಯುತ್ತಾ ಇದ್ದ ಹಾಗೆ ಈ ಕಾಲಘಟ್ಟದಲ್ಲೂ ಅವನು ನಮ್ಮನ್ನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ) ಮೂಲಕ ತನ್ನ ಕಡೆಗೆ ಕರೆ ನೀಡಿರುವನು. ಹಝ್ರತ್ ಮಸೀಹ್ ಮೌಊದ್(ಅ) ಬಹಳ ದುಃಖಭರಿತರಾಗಿ ತನ್ನ ಮಸ್ತಕ ಕಿಶ್ತೀ ನೂಹ್‌ನಲ್ಲಿ ಹೀಗೆ ಹೇಳುತ್ತಾರೆ:

“ನಮ್ಮ ದೇವನಲ್ಲಿ ಅಸಂಖ್ಯಾತ ಅದ್ಭುತಗಳಿವೆ. ಸತ್ಯವಾಗಿಯೂ ನಿಷ್ಠೆಯಿಂದಲೂ ಅವನಿಗೆ ಸೇರಿದವರು ಮಾತ್ರ ಅವುಗಳನ್ನು ಕಾಣುತ್ತಾರೆ. ಅವನ ಶಕ್ತಿ ಸಾಮರ್ಥ್ಯಗಳ ಬಗ್ಗೆ ದೃಢ ನಂಬಿಕೆ ಹೊಂದದ ಮತ್ತು ಅವನ ಸತ್ಯಸಂಧ ನಿಷ್ಠಾವಂತರಾಗದ ಅನ್ಯರಿಗೆ ಅವನು ತನ್ನ ಅದ್ಭುತಗಳನ್ನು ಪ್ರಕಟಿಸುವುದಿಲ್ಲ. ನನಗೆ ಒಬ್ಬ ದೇವನಿದ್ದಾನೆ, ಅವನು ಪ್ರತಿಯೊಂದು ಕಾರ್ಯಮಾಡಲು ಸಮರ್ಥನಾಗಿದ್ದಾನೆ ಎಂದು ಇಂದಿನ ತನಕ ತಿಳಿದಿರದವನು ಎಷ್ಟು ದುರದೃಷ್ಟಶಾಲಿಯಾಗಿದ್ದಾನೆ! ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಅಭಿರುಚಿಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯ ಅವನಲ್ಲಿ ಕಂಡಿರುವೆವು. ದೇವನೆಂಬ ಈ ಸಂಪತ್ತು ಜೀವವನ್ನು ಅರ್ಪಿಸುವು ದರಿಂದ ಸಿಗಬಹುದಾದರೆ ಹಾಗೆ ಪಡೆಯಲು ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಈ ಮಾಣಿಕ್ಯ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಅದು ಅರ್ಹವಾಗಿದೆ. ಈ ಭಾಗ್ಯವನ್ನು ಪಡೆಯದ ಓ ಜನರೇ, ನೀವು ಈ ಕಾರಂಜಿಯ ಕಡೆಗೆ ಓಡಿರಿ. ಅದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ಜೀವಜಲವನ್ನು ನೀಡುವ ಕಾರಂಜಿಯಾಗಿದೆ. ಇದು ನಿಮ್ಮನ್ನು ರಕ್ಷಿಸುವುದು. ನಾನು ಏನು ಮಾಡಲಿ. ಈ ಶುಭವಾರ್ತೆಯನ್ನು ಜನರಿಗೆ ಹೇಗೆ ತಲಪಿಸಲಿ. ಯಾವ ತಮಟೆ ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ – ‘ನಿಮ್ಮ ದೇವನು ಇವನೇ’ ಎಂದು ಜನರು ಆಲಿಸುವಂತೆ. ಆಲಿಸಲು ಜನರ ಕಿವಿಗಳು ತೆರೆಯಲ್ಪಡುವಂತೆ ಯಾವ ಔಷಧಿಯಿಂದ ಚಿಕಿತ್ಸೆ ನಡೆಸಲಿ? (ಕಿಶ್ತೀ ನೂಹ್– ರೂಹಾನೀ ಖಝಾಇನ್– ಸಂಪುಟ 19 ಪುಟ 21–22).

ಕೊನೆಯದಾಗಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಒಂದು ಪ್ರಿಯ ಹದೀಸನ್ನು ನಿಮ್ಮ ಮುಂದಿರಿಸುತ್ತೇನೆ. ಸಹೀಹ್ ಮುಸ್ಲಿಮ್ ಕಿತಾಬುತ್ತೌಬದಲ್ಲಿ ಈ ಹದೀಸಿದೆ. ಅದರ ಭಾಷಾಂತರ ಹೀಗೆ: “ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು – ಅಲ್ಲಾಹನು ಹೀಗೆ ನನ್ನೊಂದಿಗೆ ಹೇಳಿದನು: ನಾನು ನನ್ನ ದಾಸನೊಂದಿಗೆ ಅವನು ನನ್ನ ಬಗ್ಗೆ ಹೊಂದಿರುವ ಶುಭ ಪ್ರತೀಕ್ಷೆ ಪ್ರಕಾರ ವರ್ತಿಸುತ್ತೇನೆ. ಅವನು ನನ್ನ ಸ್ಮರಣೆ ಮಾಡುವಾಗಲೆಲ್ಲ ನಾನು ಅವನೊಂದಿಗಿರುತ್ತೇನೆ. ಅಲ್ಲಾಹನಾಣೆ! ತನ್ನ ದಾಸನು ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸುವಾಗ ಅಲ್ಲಾಹನು ಎಷ್ಟು ಸಂತೋಷಗೊಳ್ಳುತ್ತಾನೆಂದರೆ, ಮರುಭೂಮಿಯಲ್ಲಿ ಕಳೆದು ಹೋದ ತನ್ನ ಒಂಟೆ ದೊರೆತಾಗ ಒಬ್ಬನಿಗೆ ಅಷ್ಟು ಸಂತೋಷವಾಗಲಾರದು. ಅಲ್ಲಾಹನು ಹೇಳುತ್ತಾನೆ: ಒಬ್ಬನು ನನ್ನ ಸಮೀಪಕ್ಕೆ ಗೇಣುವಿನಷ್ಟು ಸಮೀಪವಾದರೆ ನಾನು ಅವನಿಗೆ ಗಜದಷ್ಟು ಸಮೀಪವಾಗುತ್ತೇನೆ. ಅವನು ನನ್ನ ಸಮೀಪಕ್ಕೆ ಒಂದು ಕೈ ಅಳತೆಯಷ್ಟು ಸಮೀಪವಾದರೆ ನಾನು ಎರಡು ಕೈಯಳತೆಯಷ್ಟು ಸಮೀಪವಾಗುತ್ತೇನೆ. ಅವನು ನನ್ನ ಕಡೆಗೆ ನಡೆದು ಬರುವನಾದರೆ ನಾನು ಅವನ ಕಡೆಗೆ ಓಡುತ್ತಾ ಹೋಗುವೆನು. (ಹದೀಖತುಸ್ಸಾಲಿಹೀನ್– ಹದೀಸು 68).

**ಗುನಾಹೋಂ ಕೋ ಭಕ್ಷಿಸ್‌ಸೆ ಹೈ ಡಾಂಪ್ ಲೇತಾ**
**ಗರೀಬೋಂ ಕೋ ರಹ್ಮತ್‌ಸೆ ಹೈ ಥಾಮ್ ಲೇತಾ**
ಪಾಪಗಳನ್ನು ಕ್ಷಮೆಯಿಂದ ಹೊದಿಸುತ್ತಾನೆ.
ಬಡವರಿಗೆ ಅನುಗ್ರಹಗಳ ಮೂಲಕ ಆಶ್ರಯ ನೀಡುತ್ತಾನೆ.
**ಯಹೀ ರಾತ್ ದಿನ್ ಅಬ್ ತೊ ಮೇರಿ ಸದಾ ಹೈ**
**ಯೆ ಮೇರಾ ಖುದಾ ಹೈ, ಯೆ ಮೇರಾ ಖುದಾ ಹೈ**
ರಾತ್ರಿ ಹಗಲು ಇದೇ ಶಬ್ದವಾಗಿದೆ.
ಇದು ನನ್ನ ದೇವ, ಇದು ನನ್ನ ದೇವ.
(ಕಲಾಮೆ ಮಹ್‌ಮೂದ್).

♦

———*****———

## ಇನ್‌ಸಾನಿಯತ್ ಝಿಂದಾಬಾದ್

## ಮಾನವೀಯತೆ ಚಿರಕಾಲ ಬಾಳಲಿ

ವಾರ್ತೆಗಳು

## ಬ್ರಸ್ಸೆಲ್ಸ್ ಆಕ್ರಮಣ – ಅಹ್ಮದಿಯಾ ಖಲೀಫರ ಖಂಡನೆ



**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರ, ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಬೆಲ್ಜಿಯಮ್‌ನ ಬ್ರಸ್ಸೆಲ್ಸ್‌ನಲ್ಲಿ ನಡೆದ ಭೀಕರವಾದಿ ಆಕ್ರಮಣವನ್ನು ಖಂಡಿಸಿದರು.**

**ಲಂಡನ್‌ನಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೀಗೆ ಹೇಳಿದರು: ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪರವಾಗಿ ಬೆಲ್ಜಿಯನ್ ಜನರಿಗೆ ನನ್ನ ಸಹಾನುಭೂತಿಯನ್ನೂ ಸಂತಾಪವನ್ನೂ ನಾನು ಪ್ರಕಟಿಸುತ್ತಿದ್ದೇನೆ. ಈ ಮೃಗೀಯ ಅಮಾನವೀಯ ಆಕ್ರಮಣವನ್ನು ಅತ್ಯಂತ ಕಟುವಾಗಿ ನಿಂದಿಸಬೇಕಾಗಿದೆ.**

**ನಿರಪರಾಧಿ ಜನರನ್ನು ಕೊಲ್ಲುವ ಭೀಕರವಾದಿತ್ವವನ್ನು ಇಸ್ಲಾಂ ಯಾವ ಪರಿಸ್ಥಿತಿಯಲ್ಲೂ ಒಪ್ಪುವುದಿಲ್ಲ. ಒಬ್ಬ ನಿರಪರಾಧಿಯನ್ನು ಕೊಲ್ಲುವುದು ಮಾನವರೆಲ್ಲರನ್ನೂ ಕೊಂದಂತೆ ಎಂದು ಖುರ್‌ಆನ್ ಹೇಳುತ್ತದೆ. ಆದುದರಿಂದ ಇಸ್ಲಾಮಿನ ಹೆಸರು ಹೇಳಿ ಇಂತಹ ದುಷ್ಕೃತ್ಯವೆಸಗುವವರಿಗೆ ಯಾವ ಸಮರ್ಥನೆಯೂ ಇಲ್ಲ. ಅವರು ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡಿ ಜನರನ್ನು ನಾಶಮಾಡುತ್ತಿದ್ದಾರೆ. ಈ ಆಕ್ರಮಣಗಳಿಗೆ ಬಲಿಯಾದವರಿಗೂ ಆಕ್ರಮಣದಿಂದ ಪೀಡಿತರಾದವರಿಗೂ ನಮ್ಮ ಹೃತ್ಪೂರ್ವಕ ಪ್ರಾರ್ಥನೆಗಳಿವೆ. ಈ ದುಷ್ಕೃತ್ಯಗಳನ್ನು ನಡೆಸಿದವರು ಬೇಗನೆ ಹಿಡಿಗೂಡಲ್ಪಟ್ಟು ಶಿಕ್ಷಿಸಲ್ಪಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.**

==========================================================================

## ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ ಜಿಲ್ಲಾ ಮಟ್ಟದ ಇಜ್ತಿಮಾ

ಬಳ್ಳಾರಿ: ಮೇ ದಿನಾಂಕ 8ರಂದು ಭಾನುವಾರ ಬಳ್ಳಾರಿ ಜಿಲ್ಲಾ ಮಟ್ಟದ ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ ಇಜ್ತಿಮಾ ಬಳ್ಳಾರಿಯ ಹಿರೆ ಹಡಗಲಿ ತಾಲೂಕಿನ ಕಾಂತೆಬೆನ್ನೂರು ಗ್ರಾಮದ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ಜರುಗಿತು.

ಈ ಏಕ ದಿನದ ಕಾರ್ಯಕ್ರಮವು ಫಜ್ರ್ ನಮಾಝ್‌ನಿಂದ ಪ್ರಾರಂಭವಾಯಿತು. ಮೌಲವಿ ತಾರಿಖ್ ಅಹ್ಮದ್ ಸಾಹೇಬ್ (ಯಾದಗಿರಿ) ನಮಾಝ್‌ಗೆ ನೇತೃತ್ವ ವಹಿಸಿದರು. ಪವಿತ್ರ ಖುರ್‌ಆನಿನ ವಚನ ಆಧಾರವಾಗಿ ಅಲ್ಲಾಹನ ಹಾಗೂ ಅವನ ಪ್ರವಾದಿಗಳ ಕರೆಗೆ ಓಗೊಟ್ಟು ಅನುಸರಣೆ ಮಾಡುವವರೇ ನಿಜವಾದ ಸತ್ಯವಿಶ್ವಾಸಿಗಳು ಎಂದು ವಿವರವಾಗಿ ಉಪದೇಶಗಳನ್ನು ನೀಡಿದರು.

ಪ್ರಾತಃಕಾಲ 10 ಗಂಟೆಗೆ ಉದ್ಘಾಟನಾ ಸಮಾರಂಭವು ಬಳ್ಳಾರಿ ಜಿಲ್ಲೆಯ ಅಮೀರರಾದ ಜನಾಬ್ ಅಬು ನಯೀಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮುಅಲ್ಲಿಮ್ ಮಕ್ಬೂಲ್ ಅಹ್ಮದ್ ಸಾಹೇಬ್  ಖುರ್‌ಆನ್ ಪಠಿಸಿದರು. ಮೌಲವಿ ನೂರುಲ್ ಹಖ್ ಖಾನ್ ಸಾಹೇಬ್ ಸ್ವಾಗತ ಭಾಷಣ ಮಾಡಿದರು. ಜನಾಬ್ ಮುಹಮ್ಮದ್ ಇಸ್ಮಾಯೀಲ್ ನಿವೃತ್ತ ಶಿಕ್ಷಕರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸ್ಥಾಪನೆಯ ಉದ್ದೇಶಗಳ ಕುರಿತು ಮಾತನಾಡಿದರು. ಸದರಿ ಶಾಲೆಯ ಶಿಕ್ಷಕರಾದ ಶ್ರೀ ಪಿ.ಎಸ್. ಮೇಟು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಅಧ್ಯಕ್ಷರ ಭಾಷಣ ಹಾಗೂ ದುಆದೊಂದಿಗೆ ಈ ಉದ್ಘಾಟನಾ ಸಮಾರಂಭವು ಮುಕ್ತಾಯಗೊಂಡಿತು. ನಂತರ ಹಾಜಿ ಫೇರೋಝ್ ಸಾಹೇಬ್ ನಾಜಿಮ್ ಮಜ್ಲಿಸ್ ಅನ್ಸಾರುಲ್ಲಾಹ್ ಬಳ್ಳಾರಿ ಇವರ ಉಸ್ತುವಾರಿಯಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆದವು. ನಂತರ ಮೌಲವಿ ನೂರುಲ್ ಹಖ್ ಖಾನ್ ಸಾಹೇಬರ ನೇತೃತ್ವದಲ್ಲಿ ಶೈಕ್ಷಣಿಕ ನೆಲೆಯ ಸ್ಪರ್ಧೆಗಳಾದ ಖುರ್‌ಆನ್ ಪಾರಾಯಣ, ಕವನಗಳು ಹಾಗೂ ಅದಾನ್ ಸ್ಪರ್ಧೆಗಳು ನಡೆದವು.

ಸಂಜೆ 5ಗಂಟೆಗೆ ಸಮಾಪನೆ ಸಭೆ ಜರುಗಿತು. ಜನಾಬ್ ಅಬು ನಯೀಮ್ ಸಾಹೇಬ್ ಅಮೀರ್ ಜಮಾಅತ್ ಬಳ್ಳಾರಿ ಜಿಲ್ಲೆ ಅಧ್ಯಕ್ಷತೆಯನ್ನು ವಹಿಸಿದರು. ಸದರಿ ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷರು, ಓರ್ವ ಶಿಕ್ಷಕರು, ಜಾಮಿಯಾ ಮಸೀದಿಯ ಚೇರ್‌ಮನ್ ಅತಿಥಿಗಳಾಗಿ ವೇದಿಕೆಯನ್ನು ಅಲಂಕರಿಸಿದ್ದರು. ಅಲ್ಲದೆ ಮೌಲವಿ ತಾರಿಖ್ ಅಹ್ಮದ್ ಸಾಹೇಬ್, ಮೌಲವಿ ನೂರುಲ್ ಹಖ್ ಖಾನ್ ಸಾಹೇಬ್, ಜನಾಬ್ ಹಾಜಿ ಫೇರೋಝ್ ಪಾಷಾ ಸಾಹೇಬ್, ಜನಾಬ್ ಮುಹಮ್ಮದ್ ಇಸ್ಮಾಯೀಲ್ ಸಾಹೇಬ್ ಹಾಗೂ ಸ್ಥಳೀಯ ಜಮಾಅತಿನ ಅಧ್ಯಕ್ಷರು ವೇದಿಕೆಯಲ್ಲಿ ಹಾಜರಿದ್ದರು.

ಮಕ್ಬೂಲ್ ಅಹ್ಮದ್ ಖುರ್‌ಆನ್ ಪಠಿಸಿದರು. ಆಬಿದ್ ಅಹ್ಮದ್ ಖಾಯಿದ್ ಬಳ್ಳಾರಿ ನಝ್ಮ್ ಹಾಡಿದರು. ಜನಾಬ್ ಮುಹಮ್ಮದ್ ಇಸ್ಮಾಯೀಲ್ ಸಾಹೇಬ್ ಅತಿಥಿಗಳಿಗೆ ಸನ್ಮಾನ ಹಾಗೂ ಜಮಾಅತಿನ ಸಾಹಿತ್ಯಗಳನ್ನು ಉಡುಗೊರೆಯಾಗಿ ನೀಡುವ ಕಾರ್ಯಕ್ರಮ ನಡೆಸಿಕೊಟ್ಟರು. ನಂತರ ಜನಾಬ್ ಮುಹಮ್ಮದ್ ಇಸ್ಮಾಯೀಲ್ ಸಾಹೇಬ್ ಹಾಗೂ ಅತಿಥಿಗಳು ಮತ್ತು ಅಧ್ಯಕ್ಷರು ಭಾಷಣ ಮಾಡಿದರು. ನಂತರ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕೊನೆಯಲ್ಲಿ ಅಲ್ಲಾಹ್ ಬಕ್ಷ್ ಸಾಹೇಬ್ ಮುಅಲ್ಲಿಮ್ ಕೃತಜ್ಞತೆ ಸಲ್ಲಿಸಿದರು.

## ಅಹ್ಮದಿಯಾ ಶಾಂತಿ ಸಮ್ಮೇಳನ

ಸಾಗರ: 29-5-2016ರಂದು ಅಹ್ಮದಿಯಾ ಮುಸ್ಲಿಂ ಜಮಾಅತ್ ಸಾಗರದ ವತಿಯಿಂದ ಸೈಂಟ್ ಜೋಸೆಫ್ ಕಮ್ಯೂನಿಟಿ ಹಾಲ್‌ನಲ್ಲಿ ಶಾಂತಿ ಸಮ್ಮೇಳನ ಜರಗಿತು. ಸ್ಥಳೀಯ ಅಹ್ಮದಿಯಾ ಘಟಕದ ಅಧ್ಯಕ್ಷ ಯೂಸುಫ್ ಶರೀಫ್ ಸಾಹೇಬ್ ಅಧ್ಯಕ್ಷತೆ ವಹಿಸಿದರು. ನಿಅ್‌ಮತುಲ್ಲಾ ನವಾಝ್ ಸಾಹೇಬ್ ಖುರ್‌ಆನ್ ಪಠಿಸಿದರು.

ಬೆಂಗಳೂರು ಅಹ್ಮದಿಯಾ ಘಟಕದ ಅಧ್ಯಕ್ಷ ಮುಸದ್ದಿಖ್ ಅಹ್ಮದ್ ಸಾಹೇಬ್ ಮಾತನಾಡಿ, ಜಗತ್ತಿನ ಎಲ್ಲೆಡೆ ಶಾಂತಿ ನೆಲಸಬೇಕೆಂಬುದು ಇಸ್ಲಾಮಿನ ಉದ್ದೇಶ. ಇಸ್ಲಾಂ ಶಾಂತಿ ಸಂದೇಶ ಸಾರುವ ಧರ್ಮವಾಗಿದೆ. ಇತ್ತೀಚೆಗಿನ ದಿನಗಳಲ್ಲಿ ಇಸ್ಲಾಂ ಧರ್ಮದ ಕುರಿತು ಅಪನಂಬಿಕೆಗಳು ಹೆಚ್ಚುತ್ತಿರುವುದು ಬೇಸರದ ಸಂಗತಿ. ವಾಸ್ತವದಲ್ಲಿ ಇಸ್ಲಾಂ ಹಿಂಸೆಯ ಕಟು ವಿರೋಧಿ ಧರ್ಮವಾಗಿದೆ. ಆದರೆ ಕೆಲವು ಭಯೋತ್ಪಾದಕ ಸಂಘಟನೆಗಳು ತಮ್ಮ ಸ್ವಾರ್ಥಕ್ಕಾಗಿ ಇಸ್ಲಾಮಿನ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ. ಇಸ್ಲಾಮಿಗೂ ಭಯೋತ್ಪಾದನೆಗೂ ತಳುಕು ಹಾಕುತ್ತಿರುವುದು ಅತ್ಯಂತ ದುರದೃಷ್ಟಕರ. ಪ್ರತಿಯೊಬ್ಬ ಮುಸ್ಲಿಂ ತಾನು ವಾಸಿಸುತ್ತಿರುವ ದೇಶಕ್ಕೆ ನಿಷ್ಠನಾಗಿರಬೇಕು ಎಂಬ ಪಾಠವನ್ನು ಇಸ್ಲಾಂ ಕಲಿಸುತ್ತದೆ. ಸಹೋದರತೆ ಹಾಗೂ ಶಾಂತಿಯನ್ನು ಪ್ರತಿಪಾದಿಸುವವನೇ ನಿಜ ಅರ್ಥದಲ್ಲಿ ಮುಸ್ಲಿಂ ಆಗಿದ್ದಾನೆ. ಜಾಗತಿಕ ಶಾಂತಿ ಸ್ಥಾಪನೆ ಉದ್ದೇಶದಿಂದ ವಿಶ್ವಾದ್ಯಂತ ಅಹ್ಮದಿಯಾ ಸಂಘಟನೆ ಶಾಂತಿ ಸಮ್ಮೇಳನ ಜರಗಿಸುತ್ತಿದೆ. ಜನರ ಮನಸ್ಸುಗಳು ಬದಲಾಗಬೇಕು. ಶಾಂತಿ, ಸಹನೆ, ಸಹಾನುಭೂತಿ, ನ್ಯಾಯನಿಷ್ಠೆ ಇತ್ಯಾದಿ ಇಂದು ಜಗತ್ತಿಗೆ ಅತ್ಯಾವಶ್ಯಕ. ವಿಶ್ವದ ಎಲ್ಲ ನಾಯಕರು ಅಶಾಂತಿಯ ಮುಂದಿನ ಅಪಾಯವನ್ನು ಅರಿತು ಎಚ್ಚರಿಕೆಯ ಹೆಜ್ಜೆ ಇಡಬೇಕು ಎಂದು ಹೇಳಿದರು.

ಸೈಂಟ್ ಜೋಸೆಫ್ ಚರ್ಚಿನ ಧರ್ಮಗುರು ಫಾದರ್ ವೀನಸ್ ಪ್ರವೀಣ್ ಮಾತನಾಡಿ, ಹಿಂದೂ ಧರ್ಮದ ಸಹಿಷ್ಣುತೆ, ಇಸ್ಲಾಂ ಧರ್ಮದ ಐಕ್ಯತೆ ಹಾಗೂ ಕ್ರೈಸ್ತ ಧರ್ಮದ ಸೇವಾ ಮನೋಭಾವ ಭಾರತದ ಮಹತ್ವ ಅಂಶಗಳಾಗಿವೆ. ಈ ಮೂರು ಸಂಗತಿಗಳು ನಮ್ಮ ರಾಷ್ಟ್ರವನ್ನು ಆದರ್ಶ ರಾಷ್ಟ್ರವಾಗಿಸಿವೆ. ಇತರರಿಗೆ ಶಾಂತಿ ಹಾಗೂ ಸಮಾಧಾನ ಕೊಡುವ ಪ್ರಯತ್ನ ಮಾಡಿದಾಗ ಪ್ರಗತಿ ಸಾಧ್ಯ ಎಂದರು.

ಬೆಂಗಳೂರಿನ ಅಹ್ಮದಿಯಾ ಮಿಶನರಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಂದು ವೇಗವಾಗಿ ಮುಂದುವರಿಯುತ್ತಿವೆ. ಆದರೆ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಎಲ್ಲ ಧರ್ಮೀಯರು ತಮ್ಮ ಧರ್ಮಗ್ರಂಥಗಳಿಂದ ದೂರ ಹೋಗುತ್ತಿರುವುದು ಸಮಸ್ಯೆಗೆ ಕಾರಣ. ದೇವ ಸಂದೇಶಗಳಿಗೆ ಹತ್ತಿರವಾಗುವುದೇ ಈ ಸಮಸ್ಯೆಗೆ ಪರಿಹಾರ ಎಂದರು.

ಜಡಮಠದ ಮಹಾಂತ ಸ್ವಾಮೀಜಿ ಮಾತನಾಡಿ, ನೊಂದವರಿಗೆ, ಕಷ್ಟದಲ್ಲಿರುವವರಿಗೆ ನೆರವು ನೀಡಬೇಕೆಂಬುದು ಎಲ್ಲ ಧರ್ಮಗಳ ತಿರುಳು. ಎಲ್ಲ ಧರ್ಮೀಯರೂ ಇದನ್ನು ಪಾಲಿಸಿದರೆ ಜಗತ್ತಿನಲ್ಲಿ ಯಾವ ಸಮಸ್ಯೆಯೂ ಇರುವುದಿಲ್ಲ. ಸಮಾಧಾನ, ಪ್ರೀತಿ ಇದ್ದಾಗ ನೆಮ್ಮದಿ ಅನುಭವಿಸಲು ಸಾಧ್ಯ. ಪರಸ್ಪರ ವಾತ್ಸಲ್ಯ ಭಾವ ಇದ್ದಾಗ ಶಾಂತಿ ಹುಟ್ಟುತ್ತದೆ ಎಂದರು.

ತಡಸದ ದುಂಡಸಿ ಮಠದ ಶ್ರೀಕುಮಾರ ಸ್ವಾಮಿ ಮಾತನಾಡಿ, ಭಾರತದಲ್ಲಿ ಬುದ್ಧ, ಬಸವ, ಗಾಂಧಿ ಮುಂತಾದ ಮಾಹಾತ್ಮರು ತಮ್ಮ ತತ್ವಾದರ್ಶಗಳ ಮೂಲಕ ದೇಶದ ಜನರ ಮನಸ್ಸು ಕಟ್ಟುವ ಕೆಲಸ ಮಾಡಿದ್ದಾರೆ. ಜಾಗತಿಕ ಮಟ್ಟದಲ್ಲಿಯೂ ಏಸುಕ್ರಿಸ್ತ, ಮುಹಮ್ಮದ್ ಪೈಗಂಬರ್ ಮಾನವೀಯ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡಿದ್ದಾರೆ. ವಿಶ್ವದ ಎಲ್ಲ ಮಹಾನ್ ಚಿಂತಕರು ಶಾಂತಿಯನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಬಹಳ ಪ್ರಯತ್ನಿಸಿದ್ದಾರೆ. ಇಂತಹ ಸಮ್ಮೇಳನಗಳ ಮೂಲಕ ಶಾಂತಿ ಪುನರ್ ಪ್ರತಿಷ್ಠಾಪಿಸುವರೆ ಹೆಚ್ಚು ಒತ್ತು ನೀಡಬೇಕು ಎಂದರು.

ಬೆಂಗಳೂರಿನ ಎಂ. ಇಸ್ಮಾಯೀಲ್ ಸಾಹೇಬ್ ಇಸ್ಲಾಂ ಶಾಂತಿ ಸ್ಥಾಪನೆಗೆ ಕೊಡುವ ಮಹತ್ವದ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ ರಚಿಸಿದ "ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ" ಎಂಬ ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಹಝ್ರತ್ ಖಲೀಫರು ಲೋಕದಾದ್ಯಂತ ಸಂಚರಿಸಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸುವ ಎರಡು ಡ್ಯಾಕುಮೆಂಟರಿ ಫಿಲ್ಮ್‌ಗಳನ್ನು ಪ್ರದರ್ಶಿಸಲಾಯಿತು. ಯೂಸುಫ್ ಶರೀಫ್ ಸಾಹೇಬ್ ಕೃತಜ್ಞತೆ ಸಲ್ಲಿಸಿದರು. ನಾಸಿರ್ ಅಹ್ಮದ್ ಸಾಹೇಬ್ ಕಾರ್ಯಕ್ರಮ ನಿರ್ವಹಿಸಿದರು.

==========================================================================

## "ಯುಗರಶ್ಮಿ" ಸಂಪಾದಕರಿಗೆ ಸನ್ಮಾನ

ಮಂಗಳೂರು: 11-6-2016ರಂದು ಮಂಗಳೂರಿನ ಪುರಭವನದಲ್ಲಿ V4 ನ್ಯೂಸ್ ಚ್ಯಾನೆಲ್‌ನ ದಶಮ ಸಂಭ್ರಮದ ಸಂದರ್ಭದಲ್ಲಿ "ಯುಗರಶ್ಮಿ" ಸಂಪಾದಕರಾದ ಮುಹಮ್ಮದ್ ಯೂಸುಫ್‌ರಿಗೆ ಅವರ 40 ವರ್ಷಗಳ ಸೇವೆಯನ್ನು ಗುರುತಿಸಿ, ಸಂಸ್ಥೆಯ ಎಂ.ಡಿ. ಶ್ರೀ ಲಕ್ಷ್ಮಣ ಕುಂದರ್ ಅವರು ಗೌರವ ಸ್ಮರಣಿಕೆ ನೀಡಿ ಸನ್ಮಾನಿಸಿದರು.

## ಕರ್ನಾಟಕ ಸೌತ್ ಝೋನ್ ವಕ್ಫೆ ನೌ ಇಜ್ತಿಮಾ

ಬೆಂಗಳೂರು: ಕರ್ನಾಟಕ ಸೌತ್ ಝೋನ್ ವಕ್ಫೆ ನೌ ಇಜ್ತಿಮಾ ಫೆಬ್ರವರಿ 14ರಂದು ಬೆಂಗಳೂರಿನ ಅಹ್ಮದಿಯಾ ಮಸ್ಜಿದ್ ವಠಾರದಲ್ಲಿ ಜರಗಿತು. ಬೆಂಗಳೂರು, ಮಂಗಳೂರು, ಶಿವಮೊಗ್ಗ, ಸೊರಬ, ಸಾಗರ ಮತ್ತು ಮಡಿಕೇರಿ ಜಮಾಅತುಗಳ ವಕ್ಫೇ ನೌ ಮಕ್ಕಳು, ಅವರ ಹೆತ್ತವರು ವಕ್ಫೇ ನೌ ಸೆಕ್ರಟರಿಗಳು, ಮುಬಲ್ಲಿಗರು, ಮುಅಲ್ಲಿಮ್‌ಗಳು, ಜಮಾಅತ್ ಪ್ರೆಸಿಡೆಂಟ್‌ಗಳು ಮುಂತಾದವರು ಸೇರಿ ಸುಮಾರು 300 ಮಂದಿ ಭಾಗವಹಿಸಿದರು.

ನಮಾಝುಘ್ ತಹಜ್ಜುದ್‌ನಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಮೌಲವಿ ಅಬ್ದುಲ್ ವಾಹಿದ್ ಸಾಹೇಬ್ ನಮಾಝಿಗೆ ನೇತೃತ್ವ ವಹಿಸಿದರು. ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಫಜ್ರ್ ನಮಾಝಿಗೆ ಇಮಾಮರಾದರು. ಮೌಲವಿ ತಾರೀಖ್ ಇದ್ರೀಸ್ ಸಾಹೇಬ್ ದರ್ಸ್ ನೀಡಿದರು.

ಜನಾಬ್ ಮುಸದ್ದಿಖ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಂಭ ನಡೆಯಿತು. ಮುದಬ್ಬಿರ್ ಅಹ್ಮದ್ ಸಾಹೇಬ್ ವಕ್ಫೇ ನೌ ಯೋಜನೆಯ ನಿರ್ದೇಶನಗಳನ್ನು ಓದಿ ಹೇಳಿದರು. ಉದ್ಘಾಟನಾ ಭಾಷಣವನ್ನು ಸಯ್ಯದ್ ಶಾರಿಖ್ ಮಜೀದ್ (ಸೆಕ್ರೆಟರಿ ವಕ್ಫೇ ನೌ) ಮಾಡಿದರು. ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ವಕ್ಫೇ ನೌ ಯೋಜನೆಯ ಮಹತ್ವ ಮತ್ತು ಆವಶ್ಯಕತೆ ಹಾಗೂ ತಂದೆ ತಾಯಂದಿರ ಜವಾಬ್ದಾರಿಕೆ ಕುರಿತು ಮಾತನಾಡಿದರು. ಸಭೆ ಮುಕ್ತಾಯಗೊಂಡ ನಂತರ ಶೈಕ್ಷಣಿಕ ಸ್ಪರ್ಧೆಗಳು ನಡೆದವು. ಮಧ್ಯಾಹ್ನ ನಂತರ ವಕ್ಫೇ ನೌ ಮಕ್ಕಳ ಮೆಡಿಕಲ್ ಚೆಕ್‌ಅಪ್ ನಡೆಸಲಾಯಿತು. ಅನಂತರ ಒಂದು ಡ್ಯಾಕುಮೆಂಟರಿ ತೋರಿಸಲಾಯಿತು.

ಸಮಾರೋಪ ಸಭೆಯಲ್ಲಿ ಮೌಲವಿ ಮುಸ್ಲಿಹುದ್ದೀನ್ ಸಾಹೇಬ್ ಮಾತನಾಡಿದರು. ಅನಂತರ ಸ್ಪರ್ಧೆಯಲ್ಲಿ ವಿಜಯಿಯಾದವರಿಗೆ ಬಹುಮಾನ ವಿತರಿಸಲಾಯಿತು. ಬಾಕಿ ಮಕ್ಕಳಿಗೂ ಪ್ರೋತ್ಸಾಹ ಬಹುಮಾನ ನೀಡಲಾಯಿತು.

================================================================================

## ಉಚಿತ ಹೋಮಿಯೋ ಮೆಡಿಕಲ್ ಕ್ಯಾಂಪ್

ಕಡಲಾಯಿ(ಕಣ್ಣೂರ್): ಅಹ್ಮದಿಯಾ ಮಜ್ಲಿಸ್ ಅನ್ಸಾರುಲ್ಲಾ ಕಡಲಾಯಿ ವತಿಯಿಂದ ಕಡಲಾಯಿ ಸೌತ್ ಯು.ಪಿ. ಸ್ಕೂಲ್‌ನಲ್ಲಿ 20–3–2016ರಂದು ಉಚಿತ ಹೋಮಿಯೋ ಮೆಡಿಕಲ್ ಕ್ಯಾಂಪನ್ನು ಏರ್ಪಡಿಸಲಾಯಿತು.

ಕಣ್ಣೂರ್ ಅಸಿಸ್ಟೆಂಟ್ ಕಮಾಂಡೆಂಟ್ ಆಫ್ ಪೋಲೀಸ್ ವಿ.ಕೆ. ಅಬ್ದುಲ್ ನಿಸಾರ್ ಕ್ಯಾಂಪನ್ನು ಉದ್ಘಾಟಿಸಿದರು. ಸೃಷ್ಟಿಸೇವೆ, ಸಾಮೂಹಿಕ ಹೊಣೆಗಾರಿಕಾ ನಿರ್ವಹಣೆ ಇಸ್ಲಾಮಿನ ಮೂಲಭೂತ ಮೌಲ್ಯಗಳೆಂದೂ ಜಾತಿಮತ ಭೇದವಿಲ್ಲದೆ ಸರ್ವರಿಗೂ ಸಹಾಯ ನೀಡುವ ಅಹ್ಮದಿಯಾ ಜಮಾಅತ್ ಶ್ಲಾಘನಾರ್ಹವೆಂದೂ ಅವರು ಹೇಳಿದರು.

ಅನ್ಸಾರುಲ್ಲಾಹ್ ಸ್ಥಳೀಯ ಶಾಖಾ ಪ್ರೆಸಿಡೆಂಟ್ ಎಂ.ಪಿ. ಉಸ್ಮಾನ್ ಸಾಹೇಬ್ ಅಧ್ಯಕ್ಷತೆ ವಹಿಸಿದರು. ಕಣ್ಣೂರ್ ಕಾರ್ಪರೇಶನ್ ಕೌನ್ಸಿಲರ್ ಎಂ.ಕೆ. ಷಾಜಿ, ಸದರ್ ಸಿ.ಎಚ್. ಅಹ್ಮದ್ ರಶೀದ್ ಮಾತನಾಡಿದರು. ಡಾ॥ ಸಿದ್ದೀಖ್ ಅಶ್ರಫಲಿ, ಡಾ॥ ರೇಷ್ಮಾ ನಿಸಾಂ, ಡಾ॥ ಸನೂಜ ಕ್ಯಾಂಪಿನಲ್ಲಿ ಭಾಗವಹಿಸಿದರು.

ಕಣ್ಣೂರ್ ಜಿಲ್ಲಾ ಮೌಲವಿ ಇನ್‌ಚಾರ್ಜ್ ಮೌಲವಿ ಅಬ್ದುಸ್ಸಲಾಂ ಸಾಹಿಬ್ ಮುಖ್ಯ ಅತಿಥಿಗಳಿಗೆ ಜಮಾಅತಿನ ಸಾಹಿತ್ಯಗಳನ್ನು ಪಾರಿತೋಷಿಕವಾಗಿ ನೀಡಿದರು.

================================================================================

ನಿಧನ ವಾರ್ತೆ

## ಮೌಲವಿ ಸಿ.ಪಿ. ಆಲಿಕುಟ್ಟಿ ಸಾಹಿಬ್



ಪಯಂಗಾಡಿ: ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತಿನ ಅತಿ ಹಿರಿಯ ವ್ಯಕ್ತಿಯಾದ ಮೌ॥ ಸಿ.ಪಿ. ಆಲಿಕುಟ್ಟಿ ಸಾಹಿಬ್ 6–4–2016 ರಂದು ನಿಧನರಾದರು. (''ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್'') ಅವರಿಗೆ 101 ವರ್ಷ ಪ್ರಾಯವಾಗಿತ್ತು.

35 ವರ್ಷಕಾಲ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಚಾರಕರಾಗಿ ಸೇವೆ ಸಲ್ಲಿಸಿದ ಅವರು ಏರನಾಡಿನ ಪ್ರಥಮ ಅಹ್ಮದಿಯೂ ಆಗಿದ್ದರು. ಅವರು 1945ರಲ್ಲಿ ಜಮಾಅತಿನಲ್ಲಿ ಪ್ರವೇಶಿಸಿದರು. ಅವರು ಹಲವು ವರ್ಷಗಳ ಕಾಲ ಪಯಂಗಾಡಿಯಲ್ಲಿ ಮದ್ರಸ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು.

ಅಹ್ಮದಿಯಾ ಪ್ರತಿನಿಧಿಯಾಗಿ ಆಲಿಕುಟ್ಟಿ ಸಾಹಿಬರು ಚೇಗನ್ನೂರ್ ಮೌಲವಿಯೊಂದಿಗೆ ಪತ್ರ ಮೂಲಕ ವಾದ ಪ್ರತಿವಾದ ನಡೆಸಿದ್ದರು. ಅವರು ಕೆಲವು ಪುಸ್ತಕಗಳನ್ನೂ ಬರೆದಿದ್ದಾರೆ. ಅಲ್ಲಾಹನು ದಿವಂಗತರಿಗೆ ಜನ್ನತನ್ನೂ ಮಗ್ಫಿರತನ್ನೂ ದಯಪಾಲಿಸಲಿ– ಆಮೀನ್.

## ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ......... (ಜೂನ್ 1978ರ ಸಂಚಿಕೆಯಿಂದ)



.........ಮತ ಸೌಹಾರ್ದದ ಕುರಿತು ನಿಮ್ಮ ಕಳಕಳಿ, ಶ್ರೀಕೃಷ್ಣ, ಜೊರಾಸ್ಟರ್ ಮತ್ತು ಕನ್‌ಫ್ಯೂಶಿಯಸ್‌ರಂತಹ ಇತರ ಪ್ರವಾದಿಗಳ ಹಾಗೂ ಮಹಾಪುರುಷರ ಬೋಧನೆಗಳ ಬಗ್ಗೆ ನಿಮ್ಮ ಅಧ್ಯಯನಾಪೇಕ್ಷೆ ನಿಜಕ್ಕೂ ಶ್ಲಾಘನೀಯ. ವಿಶಾಲ ಮನೋಭಾವದಿಂದ ವಿಶ್ವಭ್ರಾತೃತ್ವದ ತಳಹದಿಯ ಮೇಲೆ ಅಹ್ಮದಿಯಾ ಪಂಥದ ಕಡೆಗೆ ಮುಸ್ಲಿಂ ಬಾಂಧವರನ್ನು ಅಕರ್ಷಿಸುವಲ್ಲಿ ಮತ್ತು ಇಸ್ಲಾಮಿನ ಉತ್ತಮ ತತ್ವಗಳನ್ನು ಕನ್ನಡಿಗರಿಗೆ ಪರಿಚಯಿಸುವಲ್ಲಿ ''ಯುಗರಶ್ಮಿ'' ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**ಮಣಿಪಾಲ** **ಕೃಷ್ಣಮೂರ್ತಿ ನಿಟಲಾಪುರ,** B.Sc., ವಿದ್ವಾನ್.
ಉಪ ಸಂಪಾದಕ, ಉದಯವಾಣಿ.

==========================================================================

.........ಕೆಲವು ವಾರಗಳ ಹಿಂದೆ ನಿಮ್ಮ ಪತ್ರಿಕೆ ನೋಡಿದೆ. ನಿಜ ಹೇಳುವುದಾದರೆ ಈಗಿನ ಕಾಲಕ್ಕೆ ಬಹಳ ಉಪಯೋಗವಾಗಿದೆ ನಿಮ್ಮ ಪತ್ರಿಕೆ.

ತಾವು ಹೆಚ್ಚಾಗಿ ಎಲ್ಲರ ಧರ್ಮಗಳ ಮತ್ತು ಬೋಧನೆಗಳ ಪರಿಚಯ ಮಾಡುತ್ತೀರೆಂದೂ ಹೊಸ ಹೊಸ ವಿಷಯ ಶೋಧಿಸಿ ಪ್ರಕಟಿಸುತ್ತೀರೆಂದೂ ನನಗೆ ನಂಬಿಕೆ ಇದೆ. ನಿಮಗೆ ಯಾವ ರೀತಿಯಲ್ಲೂ ಸಹಾಯ ಮಾಡಲು ನಾನು ಸಿದ್ಧನಿದ್ದೇನೆ.

**ಮಂಡ್ಯ** **ಎಚ್.ಎಸ್. ಜಾಫರ್**
Social Worker.

==========================================================================

.........ಯುಗರಶ್ಮಿ ಪ್ರಗತಿಯತ್ತ ಮುಂದುವರಿಯುತ್ತಿದೆ. ''ಭುಟ್ಟೋ ಪತನ'' ದೈವಾಸ್ತಿತ್ವದ ಕುರಿತು ಸಂಶಯಿಸುವವರಿಗೊಂದು ಸವಾಲು. ಮತ ಯಾವುದಾದರೂ ಅಕ್ರಮ ಮತ್ತು ಅನೀತಿಯ ಬಗ್ಗೆ ಅಲ್ಲಾಹುವಿನ ಪ್ರತಿಭಟನೆ ಎಷ್ಟರಮಟ್ಟಿಗಿದೆ ಎಂಬುದು ದಂಗುಬಡಿಸುವಂತಹದ್ದು.

**ದುಬೈ** **ತ. ಅ. ರಶೀದ್.**

==========================================================================

## (ಸಪ್ಟೆಂಬರ್ 1978ರ ಸಂಚಿಕೆಯಿಂದ)

ಪ್ರಿಯರೇ,

ನಮ್ಮ ಗುರಿ ಜಾತ್ಯಾತೀತ ಸಮಾಜದ ರಚನೆ. ಪ್ರತೀ ವ್ಯಕ್ತಿ ಅವನವನ ಧರ್ಮವನ್ನು ಪಾಲಿಸಿಕೊಂಡು ಬರಲು, ಅವನಿಗೆ ಇಷ್ಟವಾದ ದೇವರನ್ನು ಪೂಜಿಸಲು ಸ್ವತಂತ್ರನು. ಮೂಢನಂಬಿಕೆಗೆ ಹೊರತಾದ, ಯಾವುದೇ ಯಾರೇ ಹೊಂದಿರಲಿ, ಅದನ್ನು ನಾವು ಗೌರವಿಸಬೇಕು. ದೇವರು ಒಬ್ಬನೇ, ನಾಮ ಹಲವು – ಈಶ್ವರ ಅಲ್ಲಾ ತೇರೆ ನಾಮ್. ಇದು ನಾವು ಒಪ್ಪುವ ಸೂತ್ರ. ದೇವರು ಇಲ್ಲ ಎನ್ನುವವರೊಡನೆಯೂ ನಮಗೆ ಜಗಳವಿಲ್ಲ.

ಈ ಭಾವನೆಗಳನ್ನು ಪ್ರಚರಪಡಿಸುವ ಗುರಿ ನಿಮ್ಮ ಪತ್ರಿಕೆಯದ್ದಾಗಲಿ. ಈಗಲೂ ಅದೇ ಆಗಿದೆ ಎಂದು ನಿಮ್ಮ ಪತ್ರಿಕೆಯ ಪುಟಗಳನ್ನು ಒಟ್ಟಾರೆ ಅವಲೋಕಿಸಿದಾಗ ನನಗೆ ಅನ್ನಿಸಿತು. ತಿಳುವಳಿಕೆ ಹೆಚ್ಚಿಸುವ ದೃಷ್ಟಿಯಿಂದ ಎಷ್ಟು ಪತ್ರಿಕೆ ಪ್ರಕಟವಾದರೂ ಅದು ಹೆಚ್ಚಲ್ಲ. ನಿಮ್ಮ ಪತ್ರಿಕೆಗೆ ಎಲ್ಲ ಯಶಸ್ಸೂ ಕೋರುತ್ತೇನೆ. ಹಾಫ್ಸಿಸರ ಕತೆಗಳನ್ನೂ ಖುರ್‌ಆನಿನ ಕತೆಗಳನ್ನೂ ಸಾಧ್ಯವಾದರೆ ಪ್ರಕಟಿಸಿ.

**ಬ್ರಹ್ಮಾವರ** **ಬೈಕಾಡಿ ವೆಂಕಟಕೃಷ್ಣ ರಾಯ.**

==========================================================================

ಪ್ರಿಯರೇ,

ನನ್ನ ನೆಚ್ಚಿನ ಪತ್ರಿಕೆಯಾದ ''ಯುಗರಶ್ಮಿ''ಯನ್ನು ಸುಮಾರು ಎರಡು ವರ್ಷಗಳಿಂದಲೂ ನೋಡುತ್ತಾ ಬಂದಿರುವೆನು. ನಿಜಕ್ಕೂ ಸತ್ಯಾಂಶವನ್ನು ಒರೆಗಲ್ಲಿಗಚ್ಚಿ ತಿಳಿದು ಧರ್ಮ, ಬೋಧನೆಗಳನ್ನು ಪ್ರಕಟಿಸುತ್ತಿರುವ ಏಕೈಕ ಪತ್ರಿಕೆ ಯುಗರಶ್ಮಿಯೊಂದೇ ಎಂದು ತಿಳಿಯಿತು. ಈ ಶತಮಾನದಲ್ಲೂ ಹಲವು ಧರ್ಮಗಳನ್ನು ತಿಳಿಯಬಯಸುವುದು ಯುಗರಶ್ಮಿಯಂತಹ ಪತ್ರಿಕೆಯಿಂದಲೇ. ಯುಗರಶ್ಮಿ ನಾಲ್ಕನೆ ವರ್ಷದಲ್ಲಿ ಹೆಜ್ಜೆಯಿಡುತ್ತಿರುವುದಕ್ಕೆ ನನ್ನ ಶುಭಹಾರೈಕೆ. ಬೇರೆ ಧರ್ಮಗಳ ಪರಿಚಯ ಇನ್ನೂ ಅಗತ್ಯ.

**ಮೈಸೂರು** **ಮಂಚಯ್ಯ.**
ಸಂಚಾಲಕ, ಗಾಂಧಿನಗರ ವಿದ್ಯಾರ್ಥಿಗಳ ಸಂಘ.

ಮಾನ್ಯರೇ,

ನಿಮ್ಮ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ‘‘ಯುಗರಶ್ಮಿ’’ ಸಂಚಿಕೆ ನೋಡಿದೆ. ಸಂತೋಷವಾಯಿತು. ನಮ್ಮ ಸಮಾಜದ ಎಲ್ಲ ಧರ್ಮಗಳ ಬಗ್ಗೆ ಉದಾತ್ತ ಮನೋಭಾವವನ್ನು ಹೊಂದಿರುವ ತಾವು ‘‘ಯುಗರಶ್ಮಿ’’ಯ ಮೂಲಕ ಅದನ್ನು ಹೊರಹೊಮ್ಮಿಸುತ್ತಿರುವುದು ಕನ್ನಡಿಗರಾದ ನಾವು ಹೆಮ್ಮೆ ಪಡುವಂತಹದು.

**ಮೈಸೂರು** **ಪಿ. ಆರ್. ತಿಪ್ಪೇ ಸ್ವಾಮಿ**

ಕಲಾವಿದ ಮತ್ತು ಪುರಾತನ ವಸ್ತು ಸಂಗ್ರಹಾಲಯದ ಕ್ಯೂರೇಟರ್, ಮಾನಸಗಂಗೋತ್ರಿ.

==========================================================================

ಮಾನ್ಯ ಸಂಪಾದಕರೇ,

.........ತಾವು ಮುಸ್ಲಿಂ ಮತದವರಾದರೂ ಹಿಂದು, ಕ್ರೈಸ್ತ, ಬುದ್ಧ ಮುಂತಾದ ಇತರ ಮತಗಳನ್ನೂ ಗೌರವ, ವಿಶ್ವಾಸದಿಂದ ಕಾಣುವುದು ಬೇರೆಯವರಿಗೆ ದರ್ಶಕರಾಗಿರುವುದು ನನಗೆ ಸಂತೋಷ.

**ಬೆಂಗಳೂರು** **ಯಂ. ರಮಾಬಾಯಿ,** ಮಂಜೇಶ್ವರ

ನಿವೃತ್ತ ಕನ್ನಡ ಅಧ್ಯಾಪಿಕೆ.

==========================================================================

ಪ್ರಿಯರೇ,

ಕೆಲವು ತಿಂಗಳುಗಳಿಂದ ನಾನು ನಿಮ್ಮ ‘‘ಯುಗರಶ್ಮಿ’’ ಪತ್ರಿಕೆಯನ್ನು ಓದುತ್ತಿದ್ದೇನೆ. ಅದು ಧಾರ್ಮಿಕ ವಿಚಾರಗಳಿಂದ ತುಂಬಿಕೊಂಡಿದೆ. ನಿಮ್ಮ ಪತ್ರಿಕೆಯ ಮೂಲಕ ಇಸ್ಲಾಮ್ ಧರ್ಮದ ಬಗ್ಗೆ ಇನ್ನೂ ಹೆಚ್ಚನ್ನು ಕಲಿಯಲು ನಾನು ಇಚ್ಛಿಸುತ್ತೇನೆ. ಇಸ್ಲಾಂ ಮತ್ತು ಇತರ ಧರ್ಮಗಳ ಬಗ್ಗೆ ಯಥಾರ್ಥ ವಿಚಾರಗಳನ್ನು ತಿಳಿಯುವರೆ ಅದರ ವಾಚಕರಿಗೆ ನಿಮ್ಮ ಪತ್ರಿಕೆ ಸಹಾಯಕಾರಿಯಾಗಲೆಂದು ಹಾರೈಸುತ್ತೇನೆ. ನಿಮ್ಮ ಪತ್ರಿಕೆಗೆ ಉಜ್ವಲ ಯಶಸ್ಸನ್ನು ಕೋರುತ್ತೇನೆ.

**ಚಿಕ್ಕಮಗಳೂರು** **ಓರ್ವ ಮುಸ್ಲಿಂ ಓದುಗ.**

==========================================================================

ಮಾನ್ಯರೇ,

ಜಲಾಲುದ್ದೀನ್ ಶಮ್ಸ್‌ರವರ ‘‘ಯೇಸುಕ್ರಿಸ್ತರು ಮೃತರಾದುದು ಎಲ್ಲಿ?’’ ಉತ್ತಮ ನಿರೂಪಣೆಯಿಂದ ಮನಸ್ಸನ್ನಾಕರ್ಷಿಸಿತು. ಬುದ್ಧಿಗೆ ಮತ್ತು ವಿವೇಕಕ್ಕೆ ಪ್ರಾಧಾನ್ಯತೆಯಿರುವ ಈ ಯುಗದಲ್ಲಿ ಮಾನವನಿಗೆ ಈ ವಿಷಯದಲ್ಲಿ ಇದಕ್ಕಿಂತಲೂ ಸುಸ್ಪಷ್ಟವಾಗಿ ವಿವರಿಸಿ ತಿಳಿಸುವ ಗ್ರಂಥದ ಆವಶ್ಯಕತೆಯಿಲ್ಲವೆಂದು ತೋರುತ್ತದೆ. ಜಗತ್ತಿನ ಮುಕ್ಕಾಲು ಭಾಗವೂ ಈ ಸ್ಪಷ್ಟ ವಾಸ್ತವಿಕತೆಯಿಂದ ವಂಚಿತವಾಗಿರುವುದು ಆಶ್ಚರ್ಯ ಮತ್ತು ದೊಡ್ಡ ದುರಂತ. ‘ಅಬೂತಾಹಿರ್’ರವರ ಸರಳ ಭಾಷಾಂತರ ಇಲ್ಲಿ ಎದ್ದು ಕಾಣುವಂತಹದು.

**ದುಬೈ** **ಟಿ. ಅಹ್ಮದ್ ರಶೀದ್.**

==========================================================================

**‘‘ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ’’**

**–ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

ಓದಿದ್ದು

## ಇಸ್ಲಾಂ ಶಾಂತಿಯುತ ಧರ್ಮ: ಪಾಕ್ ಹಿಂದೂಗಳ ಪ್ರಚಾರ

ಪೇಶಾವರ, ಡಿ. 20: ಇಸ್ಲಾಮಿಕ್ ಉಗ್ರರ ಉಪಟಳ ವಿಶ್ವದಾದ್ಯಂತ ಭಾರೀ ಸುದ್ದಿ ಮಾಡುತ್ತಿರುವ ಸಮಯದಲ್ಲೇ, ಇಸ್ಲಾಂ ಒಂದು ಶಾಂತಿಯುತ ಧರ್ಮ ಎಂದು ಸಾರಲು ಪಾಕಿಸ್ಥಾನದಲ್ಲಿರುವ ಹಿಂದೂಗಳು ಮುಂದಾಗಿದ್ದಾರೆ!

ನಿಜ. ಕೋಮು ಸೌಹಾರ್ದತೆಯನ್ನು ಇನ್ನೊಂದು ಹೆಜ್ಜೆ ಮುಂದೆ ಕೊಂಡೊಯ್ಯಲು ನಿರ್ಧರಿಸಿರುವ ಇಲ್ಲಿನ ಹಿಂದೂ ಸಂಘಟನೆಯೊಂದು ಡಿ.24ರಂದು ಸಮ್ಮೇಳನವೊಂದನ್ನು ಆಯೋಜಿಸಿದ್ದು ಅದರಲ್ಲಿ ಪ್ರವಾದಿ ಮುಹಮ್ಮದ್ ಅವರಿಗೆ ಗೌರವ ಸಲ್ಲಿಸಲು ನಿರ್ಧರಿಸಿದೆ. 'ಈ ಕಾರ್ಯಕ್ರಮದ ಮೂಲಕ ನಾವು ಇಡೀ ವಿಶ್ವಕ್ಕೆ ಇಸ್ಲಾಂ ಒಂದು ಶಾಂತಿಯುತ ಧರ್ಮ ಎಂದು ಹೇಳಲು ಮುಂದಾಗಿದ್ದೇವೆ. ಇದರಲ್ಲಿ ಎಲ್ಲಾ ಧರ್ಮಗಳ ಮುಖಂಡರು ಮತ್ತು ರಾಜಕೀಯ ನಾಯಕರಿಗೂ ಆಹ್ವಾನ ನೀಡಲಾಗಿದೆ. ಧಾರ್ಮಿಕ ತೀವ್ರವಾದ ತಡೆಯುವ ನಿಟ್ಟಿನಲ್ಲಿ ಪ್ರತಿಯೊಂದು ದೇಶಗಳೂ ತಮ್ಮ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು' ಎಂದು ಅಖಿಲ ಪಾಕಿಸ್ಥಾನ ಹಿಂದೂ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಹರೂನ್ ಸರ್ಬ್‌ದಿಯಾನ್ ತಿಳಿಸಿದ್ದಾರೆ. **(ಉದಯವಾಣಿ 21–12–2015)**

---

## ಸೌದಿಯಲ್ಲಿ ಶಿಯಾ ಮೌಲ್ವಿ ಸೇರಿ 47 ಮಂದಿಗೆ ಗಲ್ಲು

ರಿಯಾದ್, ಜ. 2: ಭಯೋತ್ಪಾದನೆ ಪ್ರಕರಣದಲ್ಲಿ ದೋಷಿ ಎನ್ನಿಸಿಕೊಂಡಿದ್ದ ಓರ್ವ ಶಿಯಾ ಮೌಲ್ವಿ ಸೇರಿದಂತೆ 47 ಜನರನ್ನು ಶನಿವಾರ ಸೌದಿ ಅರೇಬಿಯಾದಲ್ಲಿ ಗಲ್ಲಿಗೇರಿಸಲಾಗಿದೆ. ಸೌದಿ ಅರೇಬಿಯಾದ ಈ ನಡೆಯು ಶಿಯಾಗಳು, ಬಹ್ರೈನ್ ಮತ್ತು ಇರಾನ್ ಸರಕಾರದ ಕೆಂಗಣ್ಣಿಗೆ ಕಾರಣವಾಗಿದೆ. ರಿಯಾದ್ ಮತ್ತು ಬೇರೆ 11 ನಗರಗಳಲ್ಲಿ ಗಲ್ಲು ಶಿಕ್ಷೆ ಪ್ರಕ್ರಿಯೆ ನಡೆಯಿತು ಎಂದು ಸರಕಾರ ಪ್ರಕಟಣೆ ನೀಡಿದೆ. ಶನಿವಾರ ಗಲ್ಲುಶಿಕ್ಷೆಗೆ ಗುರಿಯಾದವರಲ್ಲಿ 2011ರಲ್ಲಿ ನಡೆದ ಅರಬ್ ಕ್ರಾಂತಿಯ ವೇಳೆ ಬಹ್ರೇನ್‌ನಲ್ಲಿ ಸರಕಾರದ ವಿರುದ್ಧ ಸಿಡಿದೆದ್ದಿದ್ದ ಶಿಯಾ ಪಂಗಡದ ಮೌಲ್ವಿ ನಿಮ್ರ್ ಅಲ್ ನಿಮ್ರ್ ಕೂಡಾ ಸೇರಿದ್ದಾರೆ. ಪ್ರಭುತ್ವದ ವಿರುದ್ಧ ಬಂಡೆದಿದ್ದಕ್ಕಾಗಿ ನಿಮ್ರ್ ಅವರನ್ನು ಭಯೋತ್ಪಾದನೆ ಆರೋಪದಡಿ ಬಂಧಿಸಲಾಗಿತ್ತು. ಇದೀಗ ಅವರನ್ನು ಗಲ್ಲಿಗೇರಿಸಿರುವುದು ಇರಾನ್, ಸೌದಿ ಅರೇಬಿಯಾ ಮತ್ತು ಬಹ್ರೈನ್‌ನಲ್ಲಿ ಶಿಯಾ ಅಲ್ಪಸಂಖ್ಯಾತರು ಬೀದಿಗೆ ಇಳಿಯಲು ಕಾರಣವಾಗಬಹುದು ಎಂದು ವಿಶ್ಲೇಷಿಸಲಾಗಿದೆ. 2015ರಲ್ಲಿ ಸೌದಿ ಅರೇಬಿಯಾದಲ್ಲಿ 157 ಜನರನ್ನು ಗಲ್ಲಿಗೇರಿಸಲಾಗಿತ್ತು.

**(ಉದಯವಾಣಿ 3–1–2016).**

---

## ಒಬಾಮಾ, ಹಿಲರಿಯಿಂದ 'ಐಸಿಸ್' ಸೃಷ್ಟಿ: ಟ್ರಂಪ್

ನ್ಯೂಯಾರ್ಕ್, ಜ. 3: ಐಸಿಸ್‌ನನ್ನು ಸೃಷ್ಟಿಮಾಡಿದ್ದು ಹಿಲರಿ ಕ್ಲಿಂಟನ್ ಮತ್ತು ಬರಾಕ್ ಒಬಾಮಾ! ಹೀಗಂತ ಗಂಭೀರ ಆರೋಪ ಮಾಡಿದ್ದು ಸದಾ ಒಂದಿಲ್ಲೊಂದು ವಿವಾದಾಸ್ಪದ ಹೇಳಿಕೆಗಳನ್ನು ನೀಡುತ್ತಲೇ ಇರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಯ ರಿಪಬ್ಲಿಕನ್ ಪಕ್ಷದ ಆಕಾಂಕ್ಷಿ ಡೊನಾಲ್ಡ್ ಟ್ರಂಪ್. ಇತ್ತೀಚೆಗೆ ಹಿಲರಿ ಅವರು, 'ಮುಸ್ಲಿಮರಿಗೆ ಅಮೆರಿಕ ಪ್ರವೇಶ ನಿಷೇಧಿಸಬೇಕು ಎಂದು ಟ್ರಂಪ್ ಹೇಳಿಕೆ ನೀಡಿದ್ದಾರೆ. ಇದರಿಂದ ಐಸಿಸ್‌ನಂಥ ಉಗ್ರ ಸಂಘಟನೆಗಳು ತಮ್ಮ ವ್ಯಾಪ್ತಿ ವಿಸ್ತರಿಸಲು ಅನುಕೂಲವಾಗುತ್ತದೆ' ಎಂದು ಆರೋಪಿಸಿದ್ದರು. ಇದಕ್ಕೆ ಟ್ರಂಪ್ ತಿರುಗೇಟು ನೀಡಿ, 'ಹಿಲರಿ, ಬರಾಕ್ ತಮ್ಮ ತಪ್ಪು ನೀತಿಗಳಿಂದ ಐಸಿಸ್ ಸೃಷ್ಟಿಸಿದ್ದಾರೆ' ಎಂದರು. **(ಉದಯವಾಣಿ 4–1–2016).**

---

## ಕಲ್ಲೇಟಿನ ಮೂಲಕ ಕಾಯಿದಾದಿಂದ ಮಹಿಳೆ ಹತ್ಯೆ

ಅದೆನ್: ಮಹಿಳೆಯೊಬ್ಬಳನ್ನು ವೇಶ್ಯಾವಾಟಿಕೆ ಮತ್ತು ವ್ಯಭಿಚಾರದ ಆರೋಪದ ಮೇಲೆ ಅಲ್ – ಕಾಯಿದಾ ಉಗ್ರರು ಕಲ್ಲಿನಿಂದ ಹೊಡೆದು ಹತ್ಯೆ ಮಾಡಿರುವ ಘಟನೆ ಯೆಮೆನ್‌ನ ಮುಕಲ್ಲಾ ನಗರದಲ್ಲಿ ರವಿವಾರ ನಡೆದಿದೆ. ಹಲವಾರು ನಾಗರಿಕರ ಸಮ್ಮುಖದಲ್ಲೇ ಜಿಹಾದಿಗಳು ಮಹಿಳೆಯನ್ನು ಗುಂಡಿಯೊಂದರಲ್ಲಿ ನಿಲ್ಲಿಸಿ ಕಲ್ಲಿನಿಂದ ಹೊಡೆದು ಕೊಂದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. **(ಉದಯವಾಣಿ 5–1–2016).**

---

## ಬ್ರಹ್ಮಾಂಡದ ಅತಿ ದೊಡ್ಡ ರಚನೆ 'ಬಾಸ್' ಪತ್ತೆ

ವಾಷಿಂಗ್ಟನ್, ಮಾ. 11: ಬ್ರಹ್ಮಾಂಡದ ಬಗ್ಗೆ ಇರುವ ಕುತೂಹಲಗಳು ಒಂದೆರಡಲ್ಲ. ಹೀಗೆ ನಿರಂತರ ಬ್ರಹ್ಮಾಂಡದ ಶೋಧ ಕೈಗೊಂಡ ಸಂಶೋಧಕರಿಗೆ ಭಾರೀ ದೊಡ್ಡ ಸಂರಚನೆಯೊಂದು ಪತ್ತೆಯಾಗಿದೆ. ಅದರ ಗಾತ್ರ ಕೇಳಿದರೇ ಬೆಚ್ಚಿ ಬೀಳಬೇಕು ಹಾಗಿದೆ!

ನಮ್ಮ ಮಿಲ್ಕಿ ವೇ ಗ್ಯಾಲಕ್ಸಿಯ ದುಪ್ಪಟ್ಟಿನಷ್ಟು ಗಾತ್ರದ ಸಂರಚನೆ ಇದಾಗಿದೆ. ಅಂದರೆ ಈ ರಚನೆಯ ಪಕ್ಕದಲ್ಲಿನ ನಕ್ಷತ್ರದ ಬೆಳಕು 'ಬಾಸ್'ನ ಒಂದು ಬದಿಯಿಂದ ಇನ್ನೊಂದು ಬದಿಗೆ ತಲುಪಲು 100 ಕೋಟಿ ವರ್ಷ ಬೇಕಂತೆ. ಬ್ರಹ್ಮಾಂಡ ಶೋಧದ ಕುರಿತ ಅಮೆರಿಕದಲ್ಲಿ 'ಬಾರ್ಯಾನ್ ಓಸಿಲ್ಲೇಷನ್ ಸ್ಪೆಕ್ಟ್ರೋಸ್ಕೋಪಿಕ್ ಸರ್ವೇ'ಗೆ ಕೆಲಸ ಮಾಡಿದ ಬಾಹ್ಯಾಕಾಶ ವಿಜ್ಞಾನಿಗಳು ಈ ಅತಿ ದೊಡ್ಡ ರಚನೆಯನ್ನು 'ಬಾಸ್' ಎಂದು ಕರೆದಿದ್ದಾರೆ.

**ಎಲ್ಲಿದೆ 'ಬಾಸ್'?:** ಭೂಮಿಯಿಂದ 500 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ಈ ಬಾಸ್ ರಚನೆ ಇದೆ. 830 ಗ್ಯಾಲಕ್ಸಿಗಳ ಈ ಸಮೂಹದಲ್ಲಿ ಗ್ರಹಗಳು, ನಕ್ಷತ್ರ ಪುಂಜಗಳು ವಿವಿಧ ಕಾಯಗಳಿವೆ ಎಂದು ಬಾಹ್ಯಾಕಾಶ ವಿಜ್ಞಾನಿಗಳು ನಂಬಿದ್ದಾರೆ.

**ಅಗಾಧ ಗಾತ್ರದ ಸಂರಚನೆ:** ಬಾಸ್‌ನ ಗಾತ್ರ ಒಂದು ಲೆಕ್ಕದಲ್ಲಿ ಊಹಿಸುವುದೂ ಕಷ್ಟ! ನಾವಿರುವ ಮಿಲ್ಕಿ ವೇ ಗ್ಯಾಲಕ್ಸಿ (ಹಾಲು ಹಾದಿ ಆಕಾಶ ಗಂಗೆ)ಗೆ ಹೋಲಿಸಿದರೆ ಇದರ ಭಾರ ಸುಮಾರು 10 ಸಾವಿರ ಪಟ್ಟು ಹೆಚ್ಚಿರಬಹುದು. ಅಲ್ಲದೇ ಇದರೆದುರು ಮಿಲ್ಕಿ ವೇ ಗ್ಯಾಲಕ್ಸಿ ಅರ್ಧದಷ್ಟೂ ಇಲ್ಲ ಎಂದು ಅಂದಾಜಿಸಲಾಗಿದೆ. **(ಉದಯವಾಣಿ 12–3–2016)**

---

## ಗರ್ಭದೊಳಗಿನ ಭ್ರೂಣಕ್ಕೆ ಐಸಿಸ್ ಉಗ್ರರ ತರಬೇತಿ!

ಲಂಡನ್, ಮಾ. 11: ಐಸಿಸ್ ಉಗ್ರರು ಎಳೆಯ ಮಕ್ಕಳನ್ನು ಉಗ್ರವಾದಕ್ಕೆ ಬಳಸಿಕೊಳ್ಳುವುದು ಹಳೆಯ ಸುದ್ದಿ. ಹೊಸ ಸುದ್ದಿಯೆಂದರೆ ಗರ್ಭದೊಳಗಿನ ಭ್ರೂಣಗಳಿಗೇ ಐಸಿಸ್ ಉಗ್ರರು, ಜಿಹಾದ್‌ನ ಪಾಠ ಹೇಳಿಕೊಡಲು ಆರಂಭಿಸಿದ್ದಾರೆ. ಈ ನಿಟ್ಟಿನಲ್ಲಿ ಐಸಿಸ್ ನಿಯಂತ್ರಣದ ಪ್ರದೇಶದಲ್ಲಿರುವ 31000 ಗರ್ಭಿಣಿಯರು ಭವಿಷ್ಯದ ಜಿಹಾದ್ ಪಡೆಯನ್ನು ಸೃಷ್ಟಿಸಲು ಅಣಿಯಾಗಿದ್ದಾರೆ ಎಂದು ಲಂಡನ್ ಮೂಲದ ಚಿಂತಕರ ಚಾವಡಿಯೊಂದು ವರದಿ ಮಾಡಿದೆ.

ದೊಡ್ಡವರಿಗೆ ಹೋಲಿಸಿದರೆ, ಚಿಕ್ಕ ಮಕ್ಕಳು ಜಿಹಾದ್‌ಗೆ ಹೆಚ್ಚು ಸಹಕಾರಿ. ಕಾರಣ, ಅವರ ಮನಸ್ಸು ಪೂರ್ಣ ಮುಗ್ಧವಾಗಿರುತ್ತದೆ. ಇಂಥ ಸಂದರ್ಭದಲ್ಲೇ ಅವರ ತಲೆಗೆ ಜಿಹಾದ್ ತುಂಬುವುದರಿಂದ, ಅವರನ್ನು ಸುಲಭವಾಗಿ ಬೇಕಾದಂತೆ ಬೆಳೆಸಬಹುದು ಎಂಬುದು ಉಗ್ರರ ಚಿಂತನೆ ಎನ್ನಲಾಗಿದೆ.

ಈ ಕಾರಣಕ್ಕಾಗಿಯೇ ತಮ್ಮ ವಶದಲ್ಲಿರುವ ಪ್ರದೇಶದ ಗರ್ಭಿಣಿಯರಿಗೆ ನಿತ್ಯವೂ, ಜಿಹಾದ್‌ಗೆ ಬಲಿಯಾದ ಹೋರಾಟಗಾರರ ಕಥೆಯನ್ನು ಓದುವಂತೆ ಸೂಚಿಸಲಾಗುತ್ತಿದೆ. ಈ ಮೂಲಕ ಭ್ರೂಣದಿಂದಲೇ ಮಕ್ಕಳ ಮೇಲೆ ಪ್ರಭಾವ ಬೀರಲಾಗುತ್ತಿದೆ. ಇನ್ನೊಂದೆಡೆ 5 ವರ್ಷದಿಂದ 15 ವರ್ಷದವರೆಗಿನ ಮಕ್ಕಳಿಗೆ, ರುಂಡವನ್ನೇ ಫುಟ್ಬಾಲ್ ಬದಲು ಆಡಲು ನೀಡುವ ಮೂಲಕ ಅವರಲ್ಲಿ ಭಯವನ್ನು ನಿವಾರಿಸುವ, ಮನಸ್ಸಿನಲ್ಲಿ ಕ್ರೂರತೆಯನ್ನು ತುಂಬುವ ಕೆಲಸವನ್ನು ಮಾಡಲಾಗುತ್ತಿದೆ. ಜೊತೆಗೆ ಬಂದೂಕು ತರಬೇತಿ, ಸ್ಫೋಟದ ತರಬೇತಿಯನ್ನೂ ನೀಡುವ ಮೂಲಕ ಭವಿಷ್ಯದ ಸೇನೆ ನಿರ್ಮಾಣ ಕಾರ್ಯದಲ್ಲಿ ಉಗ್ರರು ತೊಡಗಿಸಿಕೊಂಡಿದ್ದಾರೆ ಎಂದು ವರದಿ ಹೇಳಿದೆ. **(ಉದಯವಾಣಿ 12–3–2016).**

---

## 5ರ ಬದಲು ಒಂದೇ ಸಲ ನಮಾಝ್ ಸಾಕು: ತಸ್ಲೀಮಾ

ನವದೆಹಲಿ: ಬಾಂಗ್ಲಾದೇಶದ ವಿವಾದಿತ ಲೇಖಕಿ ತಸ್ಲೀಮಾ ನಸ್ರೀನ್, ಸಾರ್ವಜನಿಕ ಸ್ಥಳಗಳಲ್ಲಿ ಮುಸ್ಲಿಂ ಪ್ರಾರ್ಥನಾ ಕೋಣೆಗಳನ್ನು ಸ್ಥಗಿತಗೊಳಿಸಬೇಕು. ದಿನದಲ್ಲಿ 5 ಸಲ ನಡೆಸಲಾಗುತ್ತಿರುವ ನಮಾಝ್ ಅನ್ನು 1 ಸಲಕ್ಕೆ ಇಳಿಸಬೇಕು ಎಂದು ಹೇಳಿದ್ದಾರೆ.

ಜರ್ಮನಿಯ ಕೆಲವು ವಿವಿಗಳಲ್ಲಿ ಪ್ರಾರ್ಥನಾ ಕೋಣೆಗಳನ್ನು ಸ್ಥಗಿತಗೊಳಿಸಿರುವುದನ್ನು ಬೆಂಬಲಿಸಿ ಸರಣಿ ಟ್ವೀಟ್ ಮಾಡಿರುವ ತಸ್ಲೀಮಾ, 'ಇದೊಂದು ಒಳ್ಳೆಯ ನಿರ್ಧಾರ. ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಗ್ರಂಥಾಲಯ, ಕಚೇರಿ, ವಿಮಾನ ನಿಲ್ದಾಣ, ಮಾರುಕಟ್ಟೆಗಳಲ್ಲಿ ಪ್ರಾರ್ಥನಾ ಕೊಠಡಿಗಳಿಗೆ ಅವಕಾಶ ನೀಡಬಾರದು. ಒಂದು ವೇಳೆ, ಪ್ರಾರ್ಥನೆ ಮಾಡಲೇಬೇಕೆಂದು ಬಯಸುವ ಮುಸ್ಲಿಮರು ತಮ್ಮ ಮನೆಯಲ್ಲಿ ಪ್ರಾರ್ಥನೆ ಮಾಡಿಕೊಳ್ಳಲಿ' ಎಂದು ಹೇಳಿದ್ದಾರೆ. ಅಲ್ಲದೇ ಈ ಮುನ್ನ ದಿನಕ್ಕೆ 50 ಸಲ ಪ್ರಾರ್ಥನೆ ನಡೆಸಲಾಗಿತ್ತು. ಪ್ರವಾದಿಯ ಕೋರಿಕೆಯೊಂದಿಗೆ ಅದು 5ಕ್ಕಿಳಿಯಿತು. ಈಗ ಅದನ್ನು ಒಂದಕ್ಕೆ ಇಳಿಸುವ ಸಮಯ ಬಂದಿದೆ ಎಂದು ಟ್ವೀಟ್ ಮಾಡಿದ್ದಾರೆ. **(ಉದಯವಾಣಿ 14–3–2016).**

---

## ಪಾಕ್‌ನ ಸಿಂಧ್ ಪ್ರಾಂತ್ಯದಲ್ಲಿ ಹೋಳಿ ದಿನ ಸರಕಾರಿ ರಜೆ

ಕರಾಚಿ, ಮಾ, 20: ಹಿಂದೂಗಳ ಹಬ್ಬ ಹೋಳಿಗೆ ಪಾಕಿಸ್ಥಾನದ ಸಿಂಧ್ ಪ್ರಾಂತ್ಯದಲ್ಲಿ ಇದೇ ಮೊದಲ ಬಾರಿಗೆ ಸಾರ್ವಜನಿಕ ರಜೆ ಘೋಷಿಸುವ ಮೂಲಕ ಇತಿಹಾಸ ಸೃಷ್ಟಿಸಲಾಗಿದೆ. ಈ ಮೊದಲು ಪಾಕಿಸ್ಥಾನದಲ್ಲಿನ ಅಲ್ಪಸಂಖ್ಯಾತ ಹಿಂದೂಗಳಿಗೆ ಮಾತ್ರ ಹೋಳಿಯಂದು ರಜೆ ನೀಡಲಾಗುತ್ತಿತ್ತು. ಆದರೆ ಈ ಬಾರಿ ಮಾ,24 ಅನ್ನು ಸರಕಾರಿ ರಜಾ ದಿನ ಎಂದು ಪ್ರಕಟಿಸಲಾಗಿದೆ. ಸಿಂಧ್ ಪ್ರಾಂತ್ಯದಾದ್ಯಂತ ಹೋಳಿಯನ್ನು

ಸರಕಾರಿ ರಜಾ ದಿನ ಎಂದು ಘೋಷಿಸಿರುವುದು ಇದೇ ಮೊದಲು. ಪಾಕಿಸ್ಥಾನದ 20 ಕೋಟಿ ಜನಸಂಖ್ಯೆಯಲ್ಲಿ ಹಿಂದೂಗಳು ಶೇ.2ರಷ್ಟಿದ್ದು, ಅವರೆಲ್ಲಾ ಹೆಚ್ಚಾಗಿ ಸಿಂಧ್ ಪ್ರಾಂತ್ಯದಲ್ಲೇ ವಾಸಿಸುತ್ತಾರೆ. ಹೋಳಿ, ದೀಪಾವಳಿ ಹಾಗೂ ಈಸ್ಟರ್ ಅನ್ನು ಸಾರ್ವಜನಿಕ ರಜಾ ದಿನ ಎಂದು ಘೋಷಿಸುವ ಸಂಬಂಧ ಪಾಕಿಸ್ಥಾನ ಸಂಸತ್ತು ನಿರ್ಣಯ ತೆಗೆದುಕೊಂಡಿತ್ತು. **(ಉದಯವಾಣಿ 21–3–2016).**

=====================================================================================

## ನಾನು ಹಿಂದೂ ಆಗಿ ಹುಟ್ಟಿದ್ದು ದುರ್ದೈವ: ಪರಂ

ಬೆಂಗಳೂರು, ಎ. 17: 'ದಲಿತ ಆಗಿರುವುದಕ್ಕೆ ನನಗೆ ಹೆಮ್ಮೆ ಇದೆ. ಆದರೆ ನಾನು ಹಿಂದೂ ಆಗಿ ಹುಟ್ಟಿರುವುದು ದುರ್ದೈವ. ಏಕೆಂದರೆ ಈವರೆಗೆ ಹಿಂದೂಗಳು ನಮ್ಮನ್ನು (ದಲಿತರು) ನಮ್ಮವರೆಂದು ಒಪ್ಪಿಕೊಂಡಿಲ್ಲ. ಇದನ್ನೆಲ್ಲ ನೋಡಿದರೆ ಬೌದ್ಧ ಧರ್ಮ ಸೇರಬೇಕು ಅನಿಸುತ್ತೆ..!'

ಹೀಗೆ ತಮ್ಮ ಮನದ ನೋವು ಹಾಗೂ ತಾತ್ವಿಕ ಸಿಟ್ಟು ತೋಡಿಕೊಂಡವರು ಯಾರೋ ಸಾಮಾನ್ಯ ವ್ಯಕ್ತಿಯಲ್ಲ. ರಾಜ್ಯ ರಾಜಕಾರಣದಲ್ಲಿ ಅತ್ಯಂತ ಪ್ರಭಾವಿ ಎನಿಸಿಕೊಂಡಿರುವ ಹಾಲಿ ಗೃಹ ಸಚಿವರೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಾ। ಜಿ. ಪರಮೇಶ್ವರ್.

ಸಿದ್ಧಾರ್ಥ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಸ್ಥೆ ಮತ್ತು ಸಮಯಕ್ ಪ್ರಬೋಧನ್ ಪ್ರತಿಷ್ಠಾನ ಜಂಟಿ ಸಹಯೋಗದಲ್ಲಿ ರವಿವಾರ ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ। ಬಿ.ಆರ್. ಅಂಬೇಡ್ಕರ್ ಅವರ 125ನೇ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಾನೊಬ್ಬ ದಲಿತ ಆಗಿರುವುದಕ್ಕೆ ನನಗೆ ಹೆಮ್ಮೆ ಇದೆ. ನನ್ನ ಜಾತಿಯ ಬಗ್ಗೆ ನನಗೆ ಯಾವುದೇ ಕೀಳರಿಮೆ ಇಲ್ಲ. ಆದರೆ, ಹಿಂದೂ ಆಗಿ ಹುಟ್ಟಿರುವುದು ಒಂದು ದುರ್ದೈವ. ಏಕೆಂದರೆ ಈವರೆಗೆ ಹಿಂದೂ ಸಮಾಜ ನಮ್ಮನ್ನು ಒಪ್ಪಿಕೊಂಡಿಲ್ಲ. ನಮ್ಮ ಹುಟ್ಟೇ ನಮಗೆ ಮಾರಕವಾಗಿದೆ. ದೇಶ, ಸಮಾಜ ಇಷ್ಟೊಂದು ಮುಂದುವರಿದಿದ್ದರೂ, ದಲಿತರ ಕುರಿತ ಸಮಾಜದ ಧೋರಣೆ ಬದಲಾಗಿಲ್ಲ. ಅನೇಕ ಸಂದರ್ಭಗಳಲ್ಲಿ 'ಪರಮೇಶ್ವರ್ ಒಳ್ಳೆಯವರು, ಆದರೆ ದಲಿತರು' ಎಂದು ಹೇಳಲಾಗುತ್ತದೆ. ಇದು ನಾನೊಬ್ಬನೇ ಎದುರಿಸುತ್ತಿರುವ ಸಮಸ್ಯೆ ಅಲ್ಲ, ಇಡೀ ದಲಿತ ಸಮುದಾಯದ ಸ್ಥಿತಿಯೂ ಹೀಗೆ ಇದೆ. ಇದೆಲ್ಲ ನೋಡಿದರೆ, ಅಂಬೇಡ್ಕರ್ ಹೇಳಿದ ರೀತಿ ಬೌದ್ಧ ಧರ್ಮ ಸೇರುವುದು ಸರಿ ಅನಿಸುತ್ತದೆ ಎಂದು ಪರಮೇಶ್ವರ್ ವಿಷಾದದಿಂದ ನುಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದಿವೆ. ವೈಜ್ಞಾನಿಕವಾಗಿ ಜಗತ್ತು ಸಾಕಷ್ಟು ಮುಂದುವರಿದಿದೆ. ಸಮಾಜದಲ್ಲಿ ಆಧುನಿಕತೆ ಬೆಳೆದಿದೆ. ಆದರೆ ದಲಿತರ ಬಗೆಗಿನ ಧೋರಣೆಯೂ ಬದಲಾಗಿಲ್ಲ. ದಲಿತರ ಸ್ಥಿತಿಯೂ ಬದಲಾಗಿಲ್ಲ. ಈಗಿನ ಆಧುನಿಕ ಮತ್ತು ಪ್ರಗತಿಪರ ವ್ಯವಸ್ಥೆಯಲ್ಲೂ ದಲಿತರು ಅವಮಾನ ಎದುರಿಸಬೇಕಾಗಿದೆ. ಈಗಲೂ ಅನೇಕ ಹಳ್ಳಿಗಳ ಹೋಟೆಲ್‌ಗಳಲ್ಲಿ ದಲಿತರ ಲೋಟ–ಪಾತ್ರೆಗಳನ್ನು ಪ್ರತ್ಯೇಕವಾಗಿ ಇಡಲಾಗುತ್ತಿದೆ. ಮನೆಯೊಳಗೆ ಪ್ರವೇಶವಿಲ್ಲ. ದೇವಸ್ಥಾನದೊಳಗೆ ಹೋಗುವಂತಿಲ್ಲ. ದಲಿತರಿಗೆ ಕ್ಷೌರ ಮಾಡಲು ಯಾರೂ ಮುಂದೆ ಬರುವುದಿಲ್ಲ. ಇದು ಇನ್ನೆಷ್ಟು ಕಾಲ ನಡೆಯುತ್ತೆ? ಇದಕ್ಕೆಲ್ಲ ಕೊನೆ ಇಲ್ಲವೇ? ದಲಿತರಾಗಿ ಹುಟ್ಟಿದ್ದೇ ನಮ್ಮ ತಪ್ಪಾ ಎಂದು ಆಕ್ರೋಶದಿಂದ ಹೇಳಿದರು. **(ಉದಯವಾಣಿ 18–4–2016).**

=====================================================================================

## ಶಿವಸೇನಾ ಮುಖಂಡ ಜೈನ ಧರ್ಮ ತೊರೆದು ಇಸ್ಲಾಂಗೆ

ಮುಜಫ್ಫರ್‌ನಗರ (ಉತ್ತರ ಪ್ರದೇಶ), ಎ.20: ಶಿವಸೇನಾ ಮುಖಂಡ ಸುಶೀಲ್ ಕುಮಾರ್ ಜೈನ್ ಅವರು ಜೈನ ಧರ್ಮ ತೊರೆದು ಇತ್ತೀಚೆಗೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆ. ಜೈನ ಸಮುದಾಯದ ಬಗ್ಗೆ ಅಸಮಾಧಾನಗೊಂಡಿದ್ದರು. ಕಂದಾಯ ಇಲಾಖೆಯ ಕಾರ್ಯವಿಧಾನ ಮತ್ತು ಮುನ್ಸಿಪಲ್ ಕಾರ್ಪೋರೇಷನ್‌ನ ಬಗ್ಗೆಯೂ ಅವರು ಅಸಮಾಧಾನ ಹೊಂದಿದ್ದರು. ಹೀಗಾಗಿ ಅವರು ಇಸ್ಲಾಂಗೆ ಮತಾಂತರಗೊಂಡಿದ್ದಾರೆ ಎಂದು ಹೇಳಲಾಗಿದೆ. ಈಗ ಮೊಹಮ್ಮದ್ ಅಬ್ದುಲ್ ಸಮದ್ ಎಂಬ ಹೆಸರಿನಿಂದ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಫೆ.15ರಂದು ತಾವು ಇಸ್ಲಾಂಗೆ ಮತಾಂತರಗೊಂಡಿದ್ದು, ಇದರಲ್ಲಿ ಯಾವುದೇ ಒತ್ತಡವಿಲ್ಲ ಎಂದು ಹೇಳಿದ್ದಾರೆ. ಮಹಾವೀರ ಜಯಂತಿಯ ವೇಳೆ ಅವರು ತಾವು ಇಸ್ಲಾಂಗೆ ಸೇರಿರುವ ವಿಷಯವನ್ನು ಬಹಿರಂಗಪಡಿಸಿದ್ದಾರೆ. **(ಉದಯವಾಣಿ 21–4–2016).**

=====================================================================================

## ಕ್ಯಾನ್ಸರ್ ಕಾರಕ ಜಾನ್ಸನ್ ಬೇಬಿ ಪೌಡರ್‌ಗೆ 370 ಕೋಟಿ ರೂ. ದಂಡ

ನ್ಯೂಯಾರ್ಕ್: ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ ಎಂದು ಅಭಿಪ್ರಾಯಪಟ್ಟು ಜಾನ್ಸನ್ ಆ್ಯಂಡ್ ಜಾನ್ಸನ್ ಬೇಬಿ ಪೌಡರ್ ಕಂಪೆನಿಗೆ ಅಮೇರಿಕದ ಕೋರ್ಟ್‌ವೊಂದು 370 ಕೋಟಿ ರೂ. ದಂಡ ವಿಧಿಸಿದೆ. ಅಮೆರಿಕದ ಮಿಸ್ಸೋರಿ ರಾಜ್ಯದ ಜೂರಿ ಸೇಂಟ್ ಲೂಯಿಸ್ ಅವರು ವರ್ಷಾನುಗಟ್ಟಲೆ ಜಾನ್ಸನ್ ಆ್ಯಂಡ್ ಜಾನ್ಸನ್ ಪೌಡರ್ ಬಳಸಿದರೆ ಅಂಡಾಶಯದ ಕ್ಯಾನ್ಸರ್‌ಗೆ ಕಾರಣವಾಗುತ್ತದೆ ಎಂದು ಹೇಳಿದ್ದಾರೆ. ಜಾನ್ಸನ್ ಕಂಪೆನಿಗೆ ದಂಡ

ವಿಧಿಸುತ್ತಿರುವುದು ಮೂರು ತಿಂಗಳಲ್ಲಿ ಎರಡನೇ ಬಾರಿಯಾಗಿದೆ. ಕಳೆದ ಫೆಬ್ರವರಿಯಲ್ಲಿ ಕಂಪೆನಿಗೆ 475 ಕೋಟಿ ರೂ. ದಂಡವನ್ನು ಸಂತ್ರಸ್ತ ಕುಟುಂಬಕ್ಕೆ ಪಾವತಿಸುವಂತೆ ಕೋರ್ಟ್ ಆದೇಶಿಸಿತ್ತು. ಅಲಬಾಮಾದ ಮಹಿಳೆಯೊಬ್ಬಳು ಜಾನ್ಸನ್ ಆ್ಯಂಡ್ ಜಾನ್ಸನ್ ಬೇಬಿ ಪೌಡರ್ ಬಳಸುತ್ತಿದ್ದರಿಂದ ಅಂಡಾಶಯದ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಳು. **(ಉದಯವಾಣಿ 4–5–2016).**

==========================================================================

## ಮಳೆಗಾಗಿ ಕೃತಕ ಪರ್ವತ ನಿರ್ಮಾಣ: ಅರಬ್ಬರ ಚಿಂತನೆ !

**ಅಬುಧಾಬಿ, ಮೇ 3: ಸಮುದ್ರದಲ್ಲಿ ಕೃತಕ ದ್ವೀಪ ಹಾಗೂ ಗಗನಚುಂಬಿ ಕಟ್ಟಡಗಳನ್ನು ನಿರ್ಮಾಣ ಮಾಡುವ ಮೂಲಕ ಈಗಾಗಲೇ ಜಗತ್ತಿನ ಗಮನ ಸೆಳೆದಿರುವ ಸಂಯುಕ್ತ ಅರಬ್ ಸಂಸ್ಥಾನ (ಯುಎಇ) ಈಗ ಮತ್ತೊಂದು ಮಹಾನ್ ಕಾರ್ಯಕ್ಕೆ ಕೈ ಹಾಕಲು ಮುಂದಾಗಿದೆ. ಅದೇನೆಂದರೆ, ಕೃತಕವಾಗಿ ಬೃಹತ್ ಪರ್ವತ ನಿರ್ಮಿಸುವುದು!**

ಕೃತಕ ಕಟ್ಟಡ ಹಾಗೂ ದ್ವೀಪಗಳನ್ನು ನಿರ್ಮಿಸಿದರೆ ಜನರಿಗೆ ಉಪಯೋಗವಾಗಬಹುದು, ಅವರು ಅಲ್ಲಿ ನೆಲೆಯೂರಬಹುದು. ಆದರೆ ಪರ್ವತ ನಿರ್ಮಿಸಿದರೆ ಯಾರಿಗೇನು ಪ್ರಯೋಜನ ಎಂಬ ಪ್ರಶ್ನೆ ಮೂಡಬಹುದು. ಇದಕ್ಕೆ ಯುಎಇ ಕೊಡುತ್ತಿರುವ ಉತ್ತರ: ಮಳೆ!

ಅಚ್ಚರಿಯಾದರೂ ಇದು ನಿಜ. ಸಮತಟ್ಟಾದ ಮರುಭೂಮಿ ಪ್ರದೇಶ ಹೊಂದಿರುವ ಕಾರಣಕ್ಕೆ ಯುಎಇಯಲ್ಲಿ ತೀರಾ ಕಡಿಮೆ ಮಳೆ ಆಗುತ್ತದೆ. ಕೆಲವೊಮ್ಮೆ ಮಳೆಯೇ ಆಗುವುದಿಲ್ಲ.

ಉಷ್ಣಾಂಶ ಬೇರೆ ಹೆಚ್ಚಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಭೂಮಿಗೆ ಮಳೆ ತರಲು ಪರ್ವತವನ್ನೇ ನಿರ್ಮಿಸುವ ಆಲೋಚನೆಯಲ್ಲಿ ಆ ದೇಶ ಮುಳುಗಿದೆ.

ಮಳೆಗಾಗಿ ಪರ್ವತ ನಿರ್ಮಿಸುವ ಯೋಜನೆಗೆ ಎಷ್ಟು ಹಣ ವೆಚ್ಚವಾಗುತ್ತದೆ ಎಂಬ ಮಾಹಿತಿಯನ್ನು ರಾಷ್ಟ್ರೀಯ ಹವಾಮಾನ ಹಾಗೂ ಭೂಕಂಪ ಕೇಂದ್ರ ಇನ್ನಷ್ಟೇ ಕಂಡುಹಿಡಿಯಬೇಕಾಗಿದೆ. ಒಂದು ವೇಳೆ, ಸಾಧ್ಯವಾಗುವ ಮಿತಿಯಲ್ಲೇ ಖರ್ಚು ಇರುತ್ತದೆ ಎಂದಾದಲ್ಲಿ ಪರ್ವತ ನಿರ್ಮಿಸಲು ಯುಎಇ ಎಂಜಿನಿಯರ್‌ಗಳು ಸಜ್ಜಾಗಲಿದ್ದಾರೆ ಎಂದು ವರದಿಗಳು ತಿಳಿಸಿವೆ.

**ಏನು ಲಾಭ? ಮರುಭೂಮಿಯಲ್ಲಿ ಕೃತಕವಾಗಿ ಪರ್ವತ ನಿರ್ಮಿಸಿದರೆ, ಅದರಿಂದ ಗಾಳಿ ಮೇಲಕ್ಕೆ ಬರುತ್ತದೆ. ಅನಂತರ ಮೋಡಗಳು ಸೃಷ್ಟಿಯಾಗುತ್ತದೆ. ಮೋಡ ಬಿತ್ತನೆ ತಂತ್ರಜ್ಞಾನದ ಮೂಲಕ ಮೋಡವನ್ನು ಮಳೆಯಾಗಿ ಭೂಮಿಗೆ ತರಬಹುದು ಎಂಬುದು ಯುಎಇ ಆಲೋಚನೆ.**

**(ಉದಯವಾಣಿ 4–5–2016).**

==========================================================================

## ಪೋಪ್ ಜಾನ್‌ಪಾಲ್‌ಗೆ ಮಹಿಳೆ ಜತೆ ಅನ್ಯೋನ್ಯತೆ

ಲಂಡನ್, ಫೆ.15: ದಿವಂಗತ ಪೋಪ್ ಜಾನ್ ಪಾಲ್–2 ಅವರು ವಿವಾಹಿತೆ ಮಹಿಳೆಯೊಬ್ಬಳ ಜತೆ 30ಕ್ಕೂ ಹೆಚ್ಚು ವರ್ಷಗಳ ಕಾಲ ಹತ್ತಿರದ ಸಂಬಂಧ ಇರಿಸಿಕೊಂಡಿದ್ದರು ಎಂಬ ಸಂಗತಿ ಬಹಿರಂಗಗೊಂಡಿದೆ. ಮಹಿಳೆಗೆ ಬರೆದಿದ್ದ ನೂರಾರು ಪತ್ರಗಳು ಮತ್ತು ಛಾಯಾಚಿತ್ರಗಳನ್ನು ಒಳಗೊಂಡ ಸಾಕ್ಷ್ಯಚಿತ್ರವೊಂದನ್ನು ಬಿಬಿಸಿ ಪ್ರಸಾರ ಮಾಡಿದೆ. ಆದರೆ, ಅಮೆರಿಕ ಮೂಲದ ಲೇಖಕಿ ಅನಾ ತೆರೇಸಾ ಟೈಮಿಎನಿಕಾ ಜತೆ ಪೋಪ್ ಅವರು ಬ್ರಹ್ಮಚರ್ಯವನ್ನು ಉಲ್ಲಂಘಿಸಿದ್ದಾರೆ ಎಂದು ಸಾಕ್ಷ್ಯಚಿತ್ರ ಆರೋಪಿಸಿಲ್ಲ. ಅನಾ ತೆರೇಸಾಗೆ ಪೋಪ್ ಬರೆದ ಕೆಲವು ಪತ್ರಗಳು ಇಬ್ಬರ ನಡುವೆ ಅನ್ಯೋನ್ಯ ಸಂಬಂಧ ಹೊಂದಿದ್ದ ಭಾವನೆಯನ್ನು ಮೂಡಿಸುತ್ತದೆ ಎಂದು ಬಿಬಿಸಿ ತಿಳಿಸಿದೆ. ಜಾನ್ ಪಾಲ್–2 ಪೋಪ್ ಹುದ್ದೆಯನ್ನು ಅಲಂಕರಿಸುವುದಕ್ಕೂ ಮುನ್ನ ದಕ್ಷಿಣ ಪೋಲಾಂಡ್ ನಗರ ಕ್ರಾಕೌನಲ್ಲಿ ಆರ್ಚ್‌ಬಿಷಪ್ ಆಗಿ ಕಾರ್ಯನಿರ್ವಹಿಸಿದ್ದರು. ಭವಿಷ್ಯದ ಪೋಪ್ ಆಗಿ ನಿಯೋಜನೆಗೊಂಡಿದ್ದ ಅವರು ಕಾರ್ಡಿನಲ್ ಕರೋಲ್ ವೊಜಾಟಿಲಾ ಎಂಬ ಹೆಸರಿನಿಂದ ಗುರುತಿಸಿಕೊಂಡಿದ್ದರು. ಅವರು ಬರೆದಿದ್ದ ತತ್ವಶಾಸ್ತ್ರದ ಪುಸ್ತಕವೊಂದರ ಸಂಬಂಧ 1973ರಲ್ಲಿ ಅನಾ ತೆರೇಸಾ ಸಂಪರ್ಕಿಸಿದ್ದರು. ಬಳಿಕ ಅವರಿಬ್ಬರ ಮಧ್ಯೆ ಸ್ನೇಹ ವೃದ್ಧಿಯಾಗಿತ್ತು. ಇಬ್ಬರ ನಡುವೆ ಪತ್ರ ವಿನಿಮಯ ಆಗಾಗ ನಡೆಯುತ್ತಿತ್ತು. ಇಬ್ಬರೂ ಒಟ್ಟಿಗೆ ರಜಾದಿನಗಳನ್ನು ಕಳೆಯುತ್ತಿದ್ದರು ಎಂದು ವರದಿ ಹೇಳಿದೆ. **(ಉದಯವಾಣಿ 16–2–2016).**

==========================================================================

## ಗಾಂಧೀಜಿಗೆ 'ಮಹಾತ್ಮ' ಬಿರುದು ನೀಡಿದ್ದು ಪತ್ರಕರ್ತ

ಅಹಮದಾಬಾದ್, ಫೆ.15: ರವೀಂದ್ರನಾಥ ಠಾಗೂರ್ ಅವರು ಗಾಂಧೀಜಿಗೆ 'ಮಹಾತ್ಮ' ಎಂಬ ಬಿರುದು ನೀಡಿದ್ದರು ಎಂದು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ಆದರೆ, ಗಾಂಧೀಜಿಗೆ ಮಹಾತ್ಮ ಎಂಬ ಹೆಸರನ್ನು ನೀಡಿದ್ದು, ಸೌರಾಷ್ಟ್ರದ ಜೇಟ್‌ಪುರದ ಅನಾಮಿಕ ಪತ್ರಕರ್ತ ಎಂದು ಗುಜರಾತ್ ಸರಕಾರ ಪ್ರತಿಪಾದಿಸಿದೆ. ಗಾಂಧೀಜಿ ದ.ಆಫ್ರಿಕಾದಲ್ಲಿ ಇದ್ದ ವೇಳೆ, ಜೇಟ್‌ಪುರದ ಅನಾಮಿಕ ಪತ್ರಕರ್ತನೊಬ್ಬ ಬರೆದಿದ್ದ ಪತ್ರದಲ್ಲಿ ಗಾಂಧೀಜಿ ಅವರನ್ನು ಮಹಾತ್ಮ ಎಂದು ಮೊದಲ ಬಾರಿ ಉಲ್ಲೇಖಿಸಿದ್ದರು. ಈ ಸಂಗತಿಯನ್ನು ನಾರಾಯಣ್ ದೇಸಾಯಿ ಅವರ ಕೃತಿಯಲ್ಲಿ ಉಲ್ಲೇಖಿಸಲಾಗಿತ್ತು ಎಂದು ರಾಜಕೋಟ್ ಜಿಲ್ಲಾ ಪಂಚಾಯತ್ ಶಿಕ್ಷಣ ಸಮಿತಿ ಉದಾಹರಣೆ ನೀಡಿದೆ.

ಪರೀಕ್ಷೆಯಲ್ಲಿ ಗಾಂಧೀಜಿ ಅವರನ್ನು ಮಹಾತ್ಮ ಎಂದು ಕರೆದದ್ದು ಯಾರು ಎಂಬ ಪ್ರಶ್ನೆಗೆ ನೀಡಲಾದ ಪ್ರಾಥಮಿಕ ಕೀ ಉತ್ತರದಲ್ಲಿ ಠಾಗೂರ್ ಎಂದು ತಿಳಿಸಲಾಗಿತ್ತು. ಬಳಿಕ ಉತ್ತರವನ್ನು ಅನಾಮಿಕ ಪತ್ರಕರ್ತ ಎಂದು ಬದಲಾಯಿಸಲಾಗಿತ್ತು. ಈ ಗೊಂದಲ ಪ್ರಶ್ನಿಸಿ ಸಂಧ್ಯಾ ಮರು ಎಂಬಾಕೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. **(ಉದಯವಾಣಿ 16–2–2016).**

==========================================================================

## ಗವರ್ನರ್ ಹಂತಕ ಖಾದ್ರಿಗೆ ನೇಣು

ಇಸ್ಲಾಮಾಬಾದ್, ಫೆ.29: ಧರ್ಮನಿಂದನೆ ಕಾಯಿದೆಯಲ್ಲಿ ಸುಧಾರಣೆ ತರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದ ಉದಾರವಾದಿ, ಪಂಜಾಬ್ ಮಾಜಿ ರಾಜ್ಯಪಾಲ ಸಲ್ಮಾನ್ ತಾಸೀರ್ ಅವರಿಗೆ 28 ಗುಂಡುಗಳನ್ನು ಹೊಡೆದು ಬರ್ಬರವಾಗಿ ಹತ್ಯೆ ಗೈದಿದ್ದ ಮಾಜಿ ಪೊಲೀಸ್ ಕಮಾಂಡೊ ಮುಮ್ತಾಜ್ ಖಾದ್ರಿಯನ್ನು ಸೋಮವಾರ ಗಲ್ಲಿಗೇರಿಸಲಾಗಿದೆ.

ಖಾದ್ರಿಯನ್ನು ರಾವಲ್ಪಿಂಡಿಯ ಅಡಿಯಾಲಿಯ ಜೈಲಿನಲ್ಲಿ ನಸುಕಿನ 4.30ಕ್ಕೆ ಗಲ್ಲಿಗೇರಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸುದ್ದಿ ತಿಳಿಯುತ್ತಿದ್ದಂತೆ ಪಾಕಿಸ್ಥಾನ ಹೊತ್ತಿ ಉರಿದಿದ್ದು, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. 'ಕರಾಳ ದಿನ' ಘೋಷಿಸಿದ ಮೂಲಭೂತವಾದಿಗಳು ರಾಷ್ಟ್ರವ್ಯಾಪಿ ಉಗ್ರ ಪ್ರತಿಭಟನೆ ನಡೆಸಿದ್ದಾರೆ. ಪರಿಸ್ಥಿತಿ ನಿಯಂತ್ರಣಕ್ಕೆ ಅರೆ ಸೇನಾ ಪಡೆ ಮತ್ತು ಪೊಲೀಸರು ಹರ ಸಾಹಸ ಪಡುತ್ತಿದ್ದು ತತ್‌ಕ್ಷಣಕ್ಕೆ ಪರಿಸ್ಥಿತಿ ತಿಳಿಗೊಳ್ಳುವ ಯಾವುದೇ ಸಾಧ್ಯತೆ ಕಂಡುಬರುತ್ತಿಲ್ಲ. ಅಹಿತಕರ ಘಟನೆಗಳನ್ನು ತಡೆಯುವ ನಿಟ್ಟಿನಲ್ಲಿ ರಾವಲ್ಪಿಂಡಿ ಮತ್ತು ಪಂಜಾಬ್ ಪ್ರಾಂತದಾದ್ಯಂತ ಹೈ ಅಲರ್ಟ್ ಘೋಷಿಸಲಾಗಿದೆ.

ಖಾದ್ರಿಯನ್ನು ನೇಣಿಗೇರಿಸಿದ ಸುದ್ದಿ ಹಬ್ಬಿದಂತೆ ರೊಚ್ಚಿಗೆದ್ದ ಸುನ್ನಿ ಮೂಲಭೂತವಾದಿಗಳು ಆತನನ್ನು ಧರ್ಮದ ಮಹಾನಾಯಕ ಎಂದು ಘೋಷಿಸಿದರಲ್ಲದೆ ವ್ಯಾಪಕ ಪ್ರತಿಭಟನೆ ನಡೆಸಿದರು. **(ಉದಯವಾಣಿ 1–3–2016).**

==========================================================================

## ಅಮೆರಿಕ: ಶೇ.50ರಷ್ಟು ಮಕ್ಕಳು ಬಡತನದಲ್ಲಿ!

ನ್ಯೂಯಾರ್ಕ್: ಅಮೆರಿಕವನ್ನೂ ಬಡತನ ಬಿಟ್ಟಿಲ್ಲ. ಕೊಲಂಬಿಯಾ ವಿಶ್ವವಿದ್ಯಾಲಯ ನಡೆಸಿದ ಸಮೀಕ್ಷೆ ಪ್ರಕಾರ, ಅಮೆರಿಕದ ಸುಮಾರು 3.1 ಕೋಟಿ ಮಕ್ಕಳು ಬಡತನ ರೇಖೆ ಸಮೀಪದಲ್ಲಿ ಬದುಕುತ್ತಿದ್ದಾರೆ. 2008ರಿಂದ 2014ರ ಅವಧಿಯಲ್ಲಿ ಬಡ ಮಕ್ಕಳ ಸಂಖ್ಯೆಯಲ್ಲಿ ಶೇ.18ರಷ್ಟು ಏರಿಕೆ ಯಾಗಿದೆ. ಕಡಿಮೆ ವೇತನ ಹೊಂದಿರುವ ಕುಟುಂಬಗಳ ಮಕ್ಕಳ ಸಂಖ್ಯೆ ಶೇ.10ರಷ್ಟು ಹೆಚ್ಚಾಗಿದೆ. ಸಮೀಕ್ಷಾ ಅಂಕಿ ಅಂಶಗಳ ಪ್ರಕಾರ ಸದ್ಯ ಅಮೆರಿಕ 10 ಮಕ್ಕಳಲ್ಲಿ 4 ಮಕ್ಕಳು ಬಡತನ ರೇಖೆಗೆ ಸಮೀಪದಲ್ಲಿದ್ದಾರೆ. **(ಉದಯವಾಣಿ 5–3–2016).**

==========================================================================

ಮಾಹಿತಿ

## ಅಸಾಧಾರಣ ಶಕ್ತಿಯ ಸಾಧಾರಣ ಪೇಯ 'ಗೋಲ್ಡನ್ ಮಿಲ್ಕ್'

■ **ಕೆ.ವಿ. ಶಶಿಧರ**

ಹಸುವಿನ ಹಾಲು, ಎಮ್ಮೆ ಹಾಲು, ಆಡಿನ ಹಾಲು, ಜತೆಗೆ ಸೈಕಲ್ ಹಾಲು, ಬಾಟಲ್ ಹಾಲು, ಪ್ಯಾಕೆಟ್ ಹಾಲು ಈ ತರಹದ ವಿವಿಧ ಹಾಲುಗಳು ನಗರವಾಸಿಗಳಿಗೆ ಪರಿಚಿತವೇ. ಇದರೊಂದಿಗೆ ಫ್ಯಾಟ್ ಹೆಚ್ಚಿಗೆ ಇರುವಂಥ ಹಾಲು, ಲೋ ಫ್ಯಾಟ್ ಮಿಲ್ಕ್ ಎಲ್ಲಾ ಮಾರುಕಟ್ಟೆಯಲ್ಲಿ ಲಭ್ಯ. ಇತ್ತೀಚೆಗೆ ಹಲವಾರು ಹೊರ ದೇಶದ ಡೈರಿ ಕಂಪೆನಿಗಳು ಭಾರತಕ್ಕೆ ಲಗ್ಗೆ ಇಟ್ಟ ಮೇಲೆ ರೆಫ್ರಿಜರೇಟರ್‌ನಲ್ಲಿಡದೆ, ಕಾಯಿಸದೇ ತಿಂಗಳುಗಳ ಕಾಲ ಇಡಬಹುದಾದ ಸ್ಟೆರಿಲೈಸ್ಡ್ ಹಾಲು ಮೇಲಿನ ಗುಂಪಿಗೆ ಹೊಸ ಸೇರ್ಪಡೆಯಾಗಿದೆ. ಇಷ್ಟೆಲ್ಲಾ ತರಹೇವಾರಿ ಹಾಲು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ಇವುಗಳೆಲ್ಲಕ್ಕೂ ಮಿಗಿಲಾದ ಜನಸಾಮಾನ್ಯರನ್ನು ಹುಬ್ಬೇರಿಸುವಂತೆ ಮಾಡಿರುವ ಹಾಲೊಂದಿದೆ. ಅದೇ 'ಗೋಲ್ಡನ್ ಮಿಲ್ಕ್'.

ಗೋಲ್ಡನ್ ಮಿಲ್ಕ್ ಬಂಗಾರದ ಬಣ್ಣ ಹೊಂದಿರುವ ಒಂದು ಅತ್ಯಂತ ಸಾದಾ ಪೇಯ. ನಮ್ಮ ಸ್ವಾಸ್ಥ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡುವ ಗುಣವೇ ಇದರ ಹಿರಿಮೆ!

### ತಯಾರಿಕಾ ವಿಧಾನ

ಅರಸಿನ ಪುಡಿ ಕಾಲು ಕಪ್, ಕರಿಮೆಣಸಿನ ಪುಡಿ ಅರ್ಧ ಚಮಚ, ನೀರು ಅರ್ಧ ಕಪ್, ಇವುಗಳನ್ನು ಚೆನ್ನಾಗಿ ಬೆರೆಸಿ ಕುದಿಸಿ ಪೇಸ್ಟ್‌ನಂತೆ ಆದ ಅನಂತರ ತೆಗೆದು ತಣ್ಣಗೆ ಮಾಡಿ ಗಾಳಿ ಹೋಗದಂತಿರುವ ಡಬ್ಬದಲ್ಲಿ ಹಾಕಿ ಫ್ರಿಜ್‌ನಲ್ಲಿಡಿ. ಈ ಪೇಸ್ಟ್ ಒಂದು ವಾರ ಕಾಲ ಉಪಯೋಗಿಸಲು ಬರುತ್ತದೆ.

240 ಎಂ.ಎಲ್. ಹಾಲಿಗೆ (ಹಸುವಿನ ಹಾಲು ಅಥವಾ ಕಡಿಮೆ ಕೊಬ್ಬಿನ ಹಾಲು ಅಥವಾ ತೆಂಗಿನ ಹಾಲು ಉತ್ತಮ) ಅರ್ಧ ಚಮಚ ಸಿದ್ಧಪಡಿಸಿಟ್ಟ ಅರಸಿನ ಪೇಸ್ಟ್ ಅನ್ನು ಬೆರೆಸಿ ಸಿಹಿಯ ಆವಶ್ಯಕತೆಯಿದ್ದರೆ ಜೇನುತುಪ್ಪ ಅಥವಾ ಸ್ಟೆವಿಯಾ ಅಥವಾ ಬೇರಾವುದಾದರೂ ನೈಸರ್ಗಿಕ ಸಿಹಿ ಪದಾರ್ಥವನ್ನು ಬಳಸಬಹುದು. ಇದಕ್ಕೆ ಒಂದು ಚಮಚ ಕೊಬ್ಬರಿ ಎಣ್ಣೆ ಹಾಕಿದರೆ ಇನ್ನೂ ಉತ್ತಮ. ಕೊಬ್ಬರಿ ಎಣ್ಣೆಯನ್ನು ಪೇಸ್ಟ್ ತಯಾರಿಕೆಯ ಸಮಯದಲ್ಲೂ ಬಳಸಬಹುದು. ಈಗ ಗೋಲ್ಡನ್ ಮಿಲ್ಕ್ ಕುಡಿಯಲು ರೆಡಿ.

ಅರಸಿನ ಜತೆ ಕರಿಮೆಣಸು ಸೇರಿದರೆ ಅರಸಿನದಲ್ಲಿರುವ ಕರ್ಕುಮಿನ್‌ನ ಪ್ರಭಾವ 20 ಪಟ್ಟು ಹೆಚ್ಚಾಗುತ್ತದೆ. ಇದಕ್ಕೆ ಕಾರಣ ಕರ್ಕುಮಿನ್ ಹಾಗೂ ಮೆಣಸಿನಲ್ಲಿರುವ ಪೈಪೆರೈನ್‌ಗಳ ಸಂಯೋಜನೆ. ಇದರಿಂದಾಗಿ ಅರಸಿನವನ್ನು ಶೇ. 2000ದಷ್ಟು ಹೆಚ್ಚಿಗೆ ದೇಹವು ಹೀರಿಕೊಳ್ಳಲು ಸಾಧ್ಯ. ಇದು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಅರಸಿನದಲ್ಲಿ ಅಡಗಿರುವ ಗುಣ ವಿಶೇಷಗಳು ಅಪಾರ. ಅದಕ್ಕೇ ಇದು 'ಸ್ಪೈಸ್ ಆಫ್ ಲೈಫ್' ಎಂದು ಜನಪ್ರಿಯವಾಗಿರುವುದು. ಅರಸಿನ ಲಿವರ್ ತೊಂದರೆಗೆ, ಚರ್ಮಕ್ಕೆ ಸಂಬಂಧಿಸಿದ ಕಾಯಿಲೆಗೆ, ಉಸಿರಾಟದ ತೊಂದರೆಗೆ, ಹೊಟ್ಟೆಗೆ ಸಂಬಂಧಿಸಿದ ತೊಂದರೆಗಳಿಗೆ, ಮಾಂಸ ಖಂಡಗಳ ಸೆಳೆತ ನಿವಾರಣೆಗೆ ಹೀಗೆ ಹತ್ತು ಹಲವು ಕಾಯಿಲೆಗಳಿಗೆ ರಾಮಬಾಣ.

ಇತ್ತೀಚಿನ ದಿನಗಳಲ್ಲಿ ಅರಸಿನದಲ್ಲಿ ಅಡಗಿರುವ ಬಯೋ ಆ್ಯಕ್ಟೀವ್ ಘಟಕಾಂಶ ಕರ್ಕುಮಿನ್ ಬಗ್ಗೆ ಅನೇಕ ಸಂಶೋಧನೆಗಳು ನಡೆದಿದ್ದು ಅದರ ಉಪಯೋಗವನ್ನೂ ಮನಗಾಣಲಾಗುತ್ತಿದೆ. ಈ ಸಂಶೋಧನೆಯಿಂದ ಕರ್ಕುಮಿನಲ್ಲಿರುವ 150ಕ್ಕೂ ಹೆಚ್ಚು ಔಷಧೀಯ ಗುಣಗಳನ್ನು ಗುರುತಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಆ್ಯಂಟಿ–ಇನ್ಫ್ಲಮೇಟರಿ, ಆಂಟಿ–ಮೈಕ್ರೋಬಿಯಲ್ ಹಾಗೂ ಆ್ಯಂಟಿ–ಕ್ಯಾನ್ಸರ್‌ಗಳ ಗುಣಗಳ ಬಗ್ಗೆ ಹೆಚ್ಚು ಹೆಚ್ಚು ಅಧ್ಯಯನ ಮಾಡಲಾಗಿದ್ದು, ಫಲಿತಾಂಶ ಉತ್ತೇಜನಕಾರಿಯಾಗಿದೆ.

**ಅರಸಿನ ಉಪಯೋಗಗಳು**

• **ಕ್ಯಾನ್ಸರ್‌ನ ಪ್ರತಿಬಂಧಕ:** ಅರಸಿನ ಮಾನವನ ದೇಹದಲ್ಲಿರುವ ಜೀವಕೋಶಗಳ ಸ್ವಾಸ್ಥ್ಯವನ್ನು ಕಾಪಾಡುತ್ತದೆ. ಅರಸಿನದಲ್ಲಿರುವ ಕರ್ಕುಮಿನ್ ಕ್ಯಾನ್ಸರ್ ಕೋಶಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿ ಕ್ಯಾನ್ಸರ್ ಬರದಂತೆ ತಡೆಯುತ್ತದೆ. ಅರಸಿನ ಕ್ಯಾನ್ಸರ್ ತಡೆಯುವಲ್ಲಿ ಅತಿ ಶಕ್ತಿಯುತವಾದ 14 ಆಹಾರ ಪದಾರ್ಥಗಳಲ್ಲಿ ಪ್ರಮುಖವಾಗಿದೆ.

• **ಆಲ್–ಜೈಮರ್ ಪ್ರತಿಬಂಧಕ:** ಅರಸಿನ ಮೆದುಳಿನ ಆರೋಗ್ಯವನ್ನು ಹೆಚ್ಚಿಸುತ್ತದೆ. ಅಮಿಲಾಯ್ಡ್ ಪ್ಲೇಕ್ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಇದರಿಂದಾಗಿ ಆಲ್–ಜೈಮರ್ ಕಾಯಿಲೆ ಬರುವುದನ್ನು ತಡೆಗಟ್ಟುತ್ತದೆ ಅಥವಾ ಮುಂದೂಡುತ್ತದೆ.

• **ಡಯಾಬಿಟೀಸ್ ನಿಯಂತ್ರಣ:** ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಿಸುತ್ತದೆ. ಇದರಿಂದಾಗಿ ಟೈಪ್–2 ಡಯಾಬಿಟೀಸ್ ಅನ್ನು ತಡೆಗಟ್ಟುತ್ತದೆ. ಇದರೊಂದಿಗೆ ಔಷಧಿಯನ್ನು ಸೇವಿಸಿದರೆ ರಕ್ತದಲ್ಲಿನ ಸಕ್ಕರೆ ಅಂಶವನ್ನು ಹತೋಟಿಯಲ್ಲಿ ಇಡಲು ಸಾಧ್ಯ.

• ಅರಸಿನದಲ್ಲಿರುವ ಆ್ಯಂಟೀ ಆಕ್ಸಿಡೆಂಟ್ ಗುಣ ನೋವು ನಿವಾರಕ, ಊತ ನಿವಾರಕ ಹಾಗೂ ಸಂಧಿವಾತ ನಿಯಂತ್ರಕವಾಗಿ ಕೆಲಸ ನಿರ್ವಹಿಸುತ್ತದೆ. ನಿಯಮಿತ ಸೇವನೆಯಿಂದ ನೋವು ನಿವಾರಣೆ ಸಾಧ್ಯ.

• **ಗಾಯ ಉಪಶಮನಕಾರಿ:** ಅರಸಿನ ಆ್ಯಂಟಿ ಸೆಪ್ಟಿಕ್ ಗುಣ ಸಣ್ಣಪುಟ್ಟ ತರಚು ಗಾಯ, ಸುಟ್ಟ ಗಾಯ, ಊತಗಳನ್ನು ಶೀಘ್ರವಾಗಿ ವಾಸಿಯಾಗುವಂತೆ ಮಾಡುತ್ತದೆ.

• **ಜೀರ್ಣಶಕ್ತಿಯನ್ನು ವೃದ್ಧಿಸುವ ಗುಣ:** ಪಿತ್ತಕೋಶವನ್ನು ಉತ್ತೇಜಿಸುತ್ತದೆ ಹಾಗೂ ಹೊಟ್ಟೆಯಲ್ಲಿ ಗಾಳಿ ತುಂಬುವುದನ್ನು ಹಾಗೂ ಹೊಟ್ಟೆ ಉಬ್ಬರವನ್ನು ತಡೆಗಟ್ಟುತ್ತದೆ.

• ಅರಸಿನ ಯಕೃತ್ತನ್ನು ಶುಚಿಗೊಳಿಸುವುದಲ್ಲದೆ, ರಕ್ತಪರಿಚಲನೆಯನ್ನು ವೃದ್ಧಿಗೊಳಿಸುವ ಶಕ್ತಿ ಹೊಂದಿದೆ.

• **ದೇಹದ ತೂಕ ನಿರ್ಬಂದಕ್ಕೆ ಸಹಾಯಕಾರಿ:** ಇದು ಪಿತ್ತರಸ ಉತ್ಪಾದನೆಯನ್ನು ವೃದ್ಧಿಗೊಳಿಸಿ ಕೊಬ್ಬನ್ನು ಜೀರ್ಣಿಸಿಕೊಳ್ಳಲು ಉತ್ತೇಜಿಸುತ್ತದೆ.

**ಯಾರು ಉಪಯೋಗಿಸಬಾರದು !**

• ಗರ್ಭಿಣಿ ಸ್ತ್ರೀಯರು ಅರಸಿನದ ಉಪಯೋಗವನ್ನು ಕಡಿಮೆ ಮಾಡುವುದು ಒಳಿತು. ಅರಸಿನ ಊತ ನಿರೋಧಕವಾದ ಹಿನ್ನೆಲೆಯಲ್ಲಿ ಹೊಟ್ಟೆಯಲ್ಲಿ ಅಲ್ಸರ್ ಆಗಬಹುದಾದ ಸಾಧ್ಯತೆಯಿರುತ್ತದೆ ಎಂದು ಕೆಲವು ದಾಖಲೆಗಳು ತಿಳಿಸುತ್ತವೆ.

• ಅಡುಗೆಯಲ್ಲಿನ ಅರಸಿನ ದೇಹಕ್ಕೆ ಸುರಕ್ಷಿತ. ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾದವರು ಅರಸಿನದ ಉಪಯೋಗವನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು ಸೂಕ್ತ. ಅರಸಿನ ರಕ್ತವನ್ನು ತೆಳ್ಳಗೆ ಮಾಡುವ ಗುಣ ಹೊಂದಿರುವ ಕಾರಣ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಸ್ರಾವವನ್ನು ತಡೆಗಟ್ಟುವುದು ತ್ರಾಸದಾಯಕವಾಗಬಹುದು.

ಗೋಲ್ಡನ್ ಮಿಲ್ಕ್ ಅನ್ನು ಒಂದು ತಿಂಗಳ ಕಾಲ ಪ್ರತಿನಿತ್ಯ ಬೆಳಗ್ಗೆ ಮತ್ತು ರಾತ್ರಿ ಎರಡು ಬಾರಿ ತಪ್ಪದೆ ಸೇವಿಸಿದರೆ ಸ್ವಾಸ್ಥ್ಯದಲ್ಲಿ ವೃದ್ಧಿ ಖಂಡಿತ ಎನ್ನುತ್ತವೆ ಕೆಲವು ಸಂಶೋಧನೆಗಳು. ಅರಸಿನದ ಈ ಎಲ್ಲಾ ಗುಣಗಳನ್ನು ಮನಗಂಡ ಹಿರಿಯರು, ದಿನನಿತ್ಯ ಕೊಂಚ ಪ್ರಮಾಣವಾದರೂ ದೇಹಕ್ಕೆ ಸೇರಲಿ ಎಂಬ ಉದ್ದೇಶದಿಂದ ಸಾಂಬಾರಿನ ಪುಡಿಯಲ್ಲಿ ಅರಸಿನವನ್ನು ಸೇರಿಸಿದ್ದಾರೆ. **(ತರಂಗ 5–5–2016).**

## ಬಲಿದಾನ

ಪ್ರಾರ್ಥನೆ ಗೈದರು ಪರಮ ದಯಾಳು
ಅಲ್ಲಾಹನಲ್ಲಿ ಇಬ್ರಾಹೀಂ
ಪ್ರಾರ್ಥನೆ ಫಲಿಸಿದ ಕಾರಣದಿಂದಲೆ
ಜನ್ಮ ತಾಳಿದರು ಇಸ್ಮಾಯೀಲ್
ಹಾಜರ ಬೀಬಿಯ ಉದರದಿ ಜನಿಸುತ
ಎಲ್ಲರ ಪ್ರೀತಿಯ ಗಳಿಸಿದರು
ಹಾಡುತ ದೇವನ ಮಹಿಮೆಯ ಸ್ಮರಿಸುತ
ವೃದ್ಧ ಪಿತ ಇಬ್ರಾಹೀಮರು
ಸ್ವಪ್ನದಿ ದೇವನ ಆಜ್ಞೆಯು ಬಂದಿತು
ಇಬ್ರಾಹೀಮರಿಗೆ ಆಹ್ವಾನ.
ಸ್ವಂತ ಪುತ್ರನ ಶಿರವ ಛೇದಿಸಿ
ಮಾಡಲೇ ಬೇಕು ಬಲಿದಾನ
ಚಾಚು ತಪ್ಪದೆ ಪಾಲಿಸಲೋಸುಗ
ಮಗನಲಿ ಸಲಹೆಯ ಕೇಳಿದರು.

ತಲೆಯ ಬಾಗಿಸಿ ಸಿದ್ಧರಾದರು
ಧೀರ ಬಾಲಕ ಇಸ್ಮಾಯೀಲ್
ಖಡ್ಗದ ಜೊತೆಯಲ್ಲಿ ಹಗ್ಗವ ಹಿಡಿದು
ಪುತ್ರನ ಜೊತೆ ಗಿರಿ ತಪ್ಪಲಿಗೆ
ವೃದ್ಧ ಕಾಲದಿ ದೊರೆತ ಪುತ್ರನ
ಶಿರವ ಛೇದಿಸಲು ಭರದಲಿ
ಅಂಗಾತ ಮಲಗಿಸಿ ಪುತ್ರನ ಕೊರಳಿಗೆ
ಕತ್ತಿಯ ಹಿಡಿಯುವ ವೇಳೆಯಲಿ
ಬಂದಿತು ವಾಣಿಯು ದೇವನ ಭಾಗದಿ
ಭಲೆ ಮೆಚ್ಚಿದೆನು ನಿನ್ನನ್ನು
ಮಗನನು ಬಿಟ್ಟು ಮೃಗವನು ಕೊಯ್ದು
ಮಾಡು ನೀ ದಾನವ ಬದಲಾಗಿ
ಮೆಚ್ಚಿದೆ ನಿನ್ನಯ ತ್ಯಾಗವ ಕಂಡು
ಮಾನವ ವಂಶಕೆ ಮಾರ್ಗವಿದು.

**• ಕೆ.ಎಂ. ಉಮರ್, ಮಡಿಕೇರಿ.**

---

**ಪ್ರತಿಭೆ**

**ಮಡಿಕೇರಿ:** 2015ನೇ ಸಾಲಿನ ಮಂಗಳೂರು ವಿಶ್ವ ವಿದ್ಯಾನಿಲಯದ ಪದವಿ ಪರೀಕ್ಷೆಯಲ್ಲಿ ಮಡಿಕೇರಿ ಎಫ್.ಎಂ.ಸಿ. ಕಾಲೇಜಿನ ಬಿ.ಕಾಂ ವಿದ್ಯಾರ್ಥಿನಿ ಶರಾಫತ್ ಸನಾ ಅತೀ ಹೆಚ್ಚು ಅಂಕಗಳಿಸಿ ಚಿನ್ನದ ಪದಕ ಗಳಿಸಿದ್ದಾರೆ. ವಿದ್ಯೆಯಲ್ಲಿ ಸಾಧನೆ ಮಾಡಿದ ಶರಾಫತ್ ಸನಾ ಮಡಿಕೇರಿ ಜಮಾಅತಿನ ನಾಸಿರ್ – ತಾಹಿರಾ ದಂಪತಿಯ ಪುತ್ರಿಯಾಗಿದ್ದಾರೆ. ಮಾಶಾಅಲ್ಲಾಹ್.



**ಮಡಿಕೇರಿ:** ಮಡಿಕೇರಿ ಜಮಾಅತಿನ ಅಯೂಬ್ ರಾಝಾ – ಜೆ.ಎಂ. ಮುಬಶ್ಶಿರ ದಂಪತಿಯ 3ವರ್ಷ 8 ತಿಂಗಳು ಪ್ರಾಯದ ಮಗಳು ಕಾಶಿಫ 70 ಸಾಲುಗಳ ಅರಬಿಕ್ ಕಸೀದ (ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಶ್ಲಾಘಿಸಿ ಹಝ್ರತ್ ಅಹ್ಮದ್(ಅ) ರಚಿಸಿದ ಸ್ತುತಿಗೀತೆ) ಕಂಠಪಾಠ ಮಾಡಿ ಪ್ರತಿಭೆ ತೋರಿದ್ದಾಳೆ. ಮಾಶಾಅಲ್ಲಾಹ್.

---

**LOVE FOR HONESTY AND**

**HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು**

**ಅಪ್ರಾಮಾಣಿಕತೆಯೊಂದಿಗೆ ದ್ವೇಷ**

## ಹೊಸ ಪುಸ್ತಕಗಳು













<u>ಸಂಪರ್ಕಿಸಿರಿ:</u>

**NAZARAT NASHR-O-ISHA'AT**
**Sadr Anjuman Ahmadiyya**
**(Publication Department)**
**Ahmadiyya Muslim Jama'at**
**<u>QADIAN – 143516</u> (Punjab)**
**Phone: 01872-500970.**

*************

## READ AHMADIYYA PERIODICALS

**THE REVIEW OF RELIGIONS**
English Monthly
Annual Subscription : ₹. 500/-
Contact: The Editor
The Review of Religions
Mohalla Ahmadiyya,
QADIAN – 143516 (Punjab)

================================================================

**BADAR – Urdu Weekly**
Annual Subscription : ₹. 550/-
Contact: The Manager
The Badar Weekly
Mohalla Ahmadiyya,
QADIAN – 143516 (Punjab)

================================================================

**ANSARULLAH**
Hindi & Urdu Bi-monthly
Annual Subscription : ₹. 150/-
Contact: The Editor, "ANSARULLAH"
Mohalla Ahmadiyya,
QADIAN – 143516 (Punjab)

================================================================

**MISHKAT – Urdu Monthly**
Annual Subscription : ₹. 220/-
Contact: The Editor, "MISHKAT"
Mohalla Ahmadiyya,
QADIAN – 143516 (Punjab)

================================================================

**SATHYADOOTHAN**
Malayalam Monthly
Annual Subscription : ₹. 360/-
Contact: The Manager
The Sathyadoothan Monthly
Masjid Umar
St. Benedict Road
Ernakulam North, KOCHI – 682018

************




## ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

ಬೆಲೆ : ರೂ. 200/-




# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

ಪುಟಗಳು - 320. ಬೆಲೆ : 100/-

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

National Toll Free Number : 1800 3010 2131
National Website : ahmadiyyamuslimjamaat.in
International Website : alislam.org
Email : info@ahmadiyyamuslimjamaat.in